ಬುಧವಾರ, ಮಾರ್ಚ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 76 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

2.5 ಮೈಕ್ರಾನ್‌ಗಿಂತಲೂ ಚಿಕ್ಕದಾದ ದೂಳಿನ ಕಣಗಳನ್ನು ಗುರುತಿಸುತ್ತದೆ ಕ್ಯೂನೆಟ್-ಥ್ಯೂನ್‌ಸೇಶನಲ್ ಏರ್ ಪ್ಯೂರಿಫಯರ್. ಇದರಲ್ಲಿ ಚಲನೆಯನ್ನು ಪತ್ತೆ ಮಾಡುವ ಸೆನ್ಸರ್ ಕೂಡ ಇರುವುದು ವಿಶೇಷ.

ಆಳ-ಅಗಲ: ಎರಡನೇ ಅಲೆಯೇ ನಿರ್ಲಕ್ಷ್ಯದ ಫಲವೇ?
ರಾಜ್ಯದಲ್ಲೂ ರೈತ ಮಹಾ ಪಂಚಾಯತ್ 6
ದೇಶದ್ರೋಹ: ಲೋಕಸಭೆಯಲ್ಲಿ ಕಾಂಗ್ರೆಸ್–ಸರ್ಕಾರ ವಾಕ್ಸಮರ 7

ಸೆನ್ಸೆಕ್ಸ್	ನಿಫ್ಟಿ	₹/$
50,364	14,910	72.55

ಮರಾಠಿ ಭಾಷಿಕರಿರುವ ರಾಜ್ಯದ ಗಡಿ ಪ್ರದೇಶ: ಲೋಕಸಭೆಯಲ್ಲಿ ಕೇಂದ್ರದ ಸ್ಪಷ್ಟನೆ

ಕೇಂದ್ರಾಡಳಿತದ ಪ್ರಸ್ತಾವವಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಮರಾಠಿ ಭಾಷಿಕರು ಅಧಿಕ ಸಂಖ್ಯೆಯಲ್ಲಿರುವ, ಮಹಾರಾಷ್ಟ್ರದ ಗಡಿಗೆ ಅಂಟಿಕೊಂಡಿರುವ ಕರ್ನಾಟಕದ ಯಾವುದೇ ಪ್ರದೇಶವನ್ನು 'ಕೇಂದ್ರಾಡಳಿತ ಪ್ರದೇಶ' ಎಂದು ಘೋಷಿಸುವ ಪ್ರಸ್ತಾವ ಇಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಮಂಗಳವಾರ ಈ ಸಂಬಂಧ ಲಿಖಿತ ಉತ್ತರ ನೀಡಿರುವ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್, 'ಈ ಗಡಿ ಪ್ರದೇಶಗಳನ್ನು 'ಕೇಂದ್ರಾಡಳಿತ ಪ್ರದೇಶ'ವೆಂದು ಘೋಷಿಸುವಂತೆ ಆಗ್ರಹಿಸಿ ಅನೇಕ ಬಾರಿ ಬೇಡಿಕೆ ಸಲ್ಲಿಸಲಾಗಿದೆ. ಆದರೆ, ಕೇಂದ್ರ ಸರ್ಕಾರವು ಅವುಗಳನ್ನು ಪರಿಗಣಿಸಿಲ್ಲ' ಎಂದು ಹೇಳಿದ್ದಾರೆ.

ಮಹಾರಾಷ್ಟ್ರದ ಯವತಮಾಳ–ವಾಶೀಮ್ ಕ್ಷೇತ್ರ ಪ್ರತಿನಿಧಿಸುವ ಶಿವಸೇನಾದ ಭಾವನಾ ಪುಂಡಲೀಕ ರಾವ್ ಗವಳಿ ಅವರ ಪ್ರಶ್ನೆಗೆ ಉತ್ತರ ನೀಡಿದ ರಾಯ್ ಅವರು, 'ಕೆಲವು ವ್ಯಕ್ತಿಗಳು, ಸಂಘಟನೆಗಳು, ರಾಜಕೀಯ ಪಕ್ಷಗಳು ಈ ಬೇಡಿಕೆಯೊಂದಿಗೆ ಆಯಾ ಕಾಲಘಟ್ಟದಲ್ಲಿ ಮನವಿ ಸಲ್ಲಿಸಿವೆ. ಆದರೆ ಕೇಂದ್ರವು ಅವುಗಳನ್ನು ಮಾನ್ಯ ಮಾಡಿಲ್ಲ' ಎಂದು ತಿಳಿಸಿದ್ದಾರೆ.

2011ರ ಜನಗಣತಿ ಪ್ರಕಾರ, ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮರಾಠಿ ಭಾಷಿಕರ ಸಂಖ್ಯೆಯು 55.98 ಲಕ್ಷದಷ್ಟಿದೆ. ಉಭಯ ರಾಜ್ಯಗಳ ಗಡಿಗೆ ಅಂಟಿಕೊಂಡಿರುವ ದುಧನಿ, ಇಚಲಕರಂಜಿ, ಕಾಗಲ್, ಕಮಲನಗರ, ಮೈಂದರ್ಗಿ, ನಿಪ್ಪಾಣಿ, ಸದಲಗಾ, ಸಂಕೇಶ್ವರ ಮತ್ತಿತರ ಕಡೆಗಳಲ್ಲಿ ಮರಾಠಿ ಭಾಷಿಕರಿದ್ದಾರೆ ಎಂದು ಸಚಿವರು ವಿವರ ನೀಡಿದ್ದಾರೆ.

ಶಿವಸೇನಾ ಸದಸ್ಯ ಅರವಿಂದ ಸಾವಂತ್ ಅವರು ಸೋಮವಾರವಷ್ಟೇ ಲೋಕಸಭೆಯ ಶೂನ್ಯವೇಳೆಯಲ್ಲಿ ಗಡಿ ವಿಷಯವನ್ನು ಪ್ರಸ್ತಾಪಿಸಿದ್ದರು. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿ ರಾಜ್ಯದ ಬಿಜೆಪಿ ಸಂಸದರು ತೀವ್ರ ಪ್ರತಿಭಟನೆ ನಡೆಸಿದ್ದರು.

ಬೆಳಗಾವಿಯಲ್ಲಿರುವ ಮರಾಠಿಗರ ಮೇಲೆ ಹಲ್ಲೆ ನಡೆಯುತ್ತಿದೆ. ಭಾಷಾವಾರು ಪ್ರಾಂತ್ಯ ರಚನೆ ವೇಳೆ ಬೆಳಗಾವಿ, ಕಾರವಾರ, ನಿಪ್ಪಾಣಿ, ಭಾಲ್ಕಿ ಮತ್ತು ಬೀದರ್‌ಗಳನ್ನು ಮಹಾರಾಷ್ಟ್ರದೊಂದಿಗೆ ವಿಲೀನಗೊಳಿಸಿಲ್ಲ ಎಂದು ಸಾವಂತ್ ಆರೋಪಿಸಿದ್ದರು. ಈ ಸಂದರ್ಭ ಪ್ರತಿಭಟನೆ ನಡೆಸಿದ್ದ ಕರ್ನಾಟಕದ ಸಂಸದರು, ಮಹಾಜನ್ ಆಯೋಗದ ವರದಿಯನ್ವಯ ಗಡಿ ಸಮಸ್ಯೆ ಇತ್ಯರ್ಥಪಡಿಸಲಾಗಿದೆ ಎಂದಿದ್ದರು.

'ಮಹಾರಾಷ್ಟ್ರದಲ್ಲಿ ದುರಾಡಳಿತ ನಡೆಸುತ್ತಿರುವ ಶಿವಸೇನಾ ನೇತೃತ್ವದ ಮೈತ್ರಿ ಸರ್ಕಾರ ಜನರ ಗಮನವನ್ನು ಬೇರೆಡೆ ಸೆಳೆಯುವ ನಿಟ್ಟಿನಲ್ಲಿ ಹೊಸ ಆಟ ಶುರು ಮಾಡಿದೆ. ಈಗಾಗಲೇ ಬಗೆಹರಿದಿರುವ ಸಮಸ್ಯೆಯನ್ನು ಕೆದಕುತ್ತ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಹಾವೇರಿ ಲೋಕಸಭಾ ಸದಸ್ಯ ಶಿವಕುಮಾರ್ ಉದಾಸಿ ದೂರಿದ್ದರು.

6ನೇ ಪುಟ ನೋಡಿ

'ಹಳದಿ–ಕೆಂಪು ಶಾಲಿನವರನ್ನು ಥಳಿಸುತ್ತೇವೆ'

ಬೆಳಗಾವಿ: 'ಹಳದಿ, ಕೆಂಪು ಬಣ್ಣದ ಶಾಲು ಹಾಕಿಕೊಂಡು ಓಡಾಡುವವರನ್ನು ಕಂಡ ಕಂಡಲ್ಲಿ ಥಳಿಸುತ್ತೇವೆ' ಎಂದು ಮಹಾರಾಷ್ಟ್ರ ಏಕೀಕರಣ ಯುವ ಸಮಿತಿ ಅಧ್ಯಕ್ಷ ಶುಭಂ ಸೆಳಕೆ ನೀಡಿರುವ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಕನ್ನಡ ಪರ ಹೋರಾಟಗಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಮಂಗಳವಾರ ಮನವಿ ಸಲ್ಲಿಸಿದರು. ಈಚೆಗೆ ನಡೆದ ಎಂಇಎಸ್ ಕಾರ್ಯಕ್ರಮವೊಂದರಲ್ಲಿ ಸೆಳಕೆ ಪ್ರಚೋದನಕಾರಿ ಹೇಳಿಕೆ ನೀಡಿದ್ದರು.

'ಕನ್ನಡಿಗರನ್ನು ಅವಹೇಳಿಸಿ ಹೇಳಿಕೆ ನೀಡಿರುವ ಹಾಗೂ ಬೆದರಿಕೆ ಹಾಕಿರುವ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಮರಾಠಿಗರನ್ನು ಪ್ರಚೋದಿಸಿ ಕನ್ನಡಿಗರ ವಿರುದ್ಧ ಎತ್ತಿ ಕಟ್ಟುವ ಹುನ್ನಾರವನ್ನು ತಡೆಯಬೇಕು. ಸೌಹಾರ್ದದಿಂದ ಬದುಕುತ್ತಿರುವ ಜನರ ನಡುವೆ ವಿಷ ಬೀಜ ಬಿತ್ತಿ ಶಾಂತಿ–ಸುವ್ಯವಸ್ಥೆ ಹಾಳು ಮಾಡುವಂತಹ ಹೇಳಿಕೆ ನೀಡಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಅವರನ್ನು ಗಡಿಪಾರು ಮಾಡಬೇಕು. ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಸಂಘಟನೆಯನ್ನು ನಿಷೇಧಿಸಬೇಕು' ಎಂದು ಒತ್ತಾಯಿಸಿ ಡಿಸಿಪಿ ವಿಕ್ರಂ ಅಮಟೆ ಅವರಿಗೆ ಮನವಿ ಸಲ್ಲಿಸಿದರು. ಭಾಷಣದ ವಿಡಿಯೊವುಳ್ಳ ಸಿ.ಡಿ. ಪ್ರತಿಯನ್ನೂ ನೀಡಿದರು.

ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ, ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ರಾಜ್ಯ ಸಂಚಾಲಕ ಮಹಾದೇವ ತಳವಾರ, ಜಿಲ್ಲಾ ಘಟಕದ ಅಧ್ಯಕ್ಷ ದೀಪಕ ಗುಡಗನಟ್ಟಿ, ಸುರೇಶ ಲಗಮಪ್ಪ ಗವನ್ನವರ ಪಾಲ್ಗೊಂಡಿದ್ದರು.

'ಪ್ರಚೋದನಕಾರಿ ಹೇಳಿಕೆ ನೀಡಿರುವ ಶುಭಂ ವಿರುದ್ಧ ಖಡೇಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ವಿಕ್ರಂ ಅಮಟೆ 'ಪ್ರಜಾವಾಣಿ'ಗೆ ತಿಳಿಸಿದರು.

'ಬಹಿಷ್ಕಾರ'ದ ಮುಜುಗರ

ಆರು ಸಚಿವರಿಗೆ ಪ್ರಶ್ನೆ ಕೇಳದಿರಲು ಕಾಂಗ್ರೆಸ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ವಿಚಾರದಲ್ಲಿ ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ತಂದಿರುವ ಸಚಿವರಿಗೆ ಪ್ರಶ್ನೆ ಕೇಳಲು ನಿರಾಕರಿಸುವ ಕಾಂಗ್ರೆಸ್ ನಿರ್ಧಾರ ಮಂಗಳವಾರವೂ ವಿಧಾನಮಂಡದಲ್ಲಿ ಗದ್ದಲಕ್ಕೆ ಕಾರಣವಾಯಿತು.

ವಿಧಾನಸಭೆಯಲ್ಲಿ ತೀವ್ರ ವಾಕ್ಸಮರ ನಡೆದರೆ, ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ಮಧ್ಯದಲ್ಲೇ ಒಮ್ಮೆ ಕಲಾಪ ಮುಂದೂಡಿಕೆಯಾಯಿತು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನದ ಕುರಿತು ಕಾಂಗ್ರೆಸ್‌ನ ಪಿ.ಟಿ. ಪರಮೇಶ್ವರ ನಾಯ್ಕ್ ವಿಧಾನಸಭೆಯಲ್ಲಿ ಮುಖ್ಯಮಂತ್ರಿಗೆ ಕೇಳಿದ್ದ ಪ್ರಶ್ನೆಯನ್ನು ಯೋಜನಾ ಸಚಿವರಿಗೆ ವರ್ಗಾಯಿಸಲಾಗಿತ್ತು. ಸಚಿವ ನಾರಾಯಣ ಗೌಡ ಉತ್ತರ ನೀಡಲು ಮುಂದಾದರು. ಆಗ 'ಸಚಿವರ ಉತ್ತರ ಬೇಕಿಲ್ಲ' ಎಂದು ಪರಮೇಶ್ವರ ನಾಯ್ಕ್ ಹೇಳಿದರು. 'ನಾನೇನೂ ತಪ್ಪು ಮಾಡಿಲ್ಲ' ಎಂದು ನಾರಾಯಣ ಗೌಡ ಸಮರ್ಥಿಸಿಕೊಂಡರು. 'ಉತ್ತರ ಬೇಕಿಲ್ಲದಿದ್ದರೆ ಕೇಳಬೇಡಿ' ಎಂದು ಕಾಗೇರಿ ಹೇಳಿದರು.

ಆಗ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, 'ರಾಸಲೀಲೆ ನಡೆಸಿದವರು ಕಾಂಗ್ರೆಸ್‌ನಲ್ಲೇ ಇದ್ದಾರೆ. ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಸತ್ತು ಬಿದ್ದಿದೆ. ಪರಮೇಶ್ವರ ನಾಯ್ಕ್ ಅವರ ಬಗ್ಗೆಯೂ ಈ ಹಿಂದೆ ಆರೋಪ ಬಂದಿತ್ತಲ್ಲ' ಎಂದರು.

ಇದಕ್ಕೆ ಪರಮೇಶ್ವರ ನಾಯ್ಕ್ ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಎಸ್.ಆರ್.ವಿಶ್ವನಾಥ್ ಹಾಗೂ ಹಲವು ಸದಸ್ಯರು, 'ಕಾಂಗ್ರೆಸ್‌ನವರಿಗೆ ನೈತಿಕತೆ ಇಲ್ಲ' ಎಂದು ಟೀಕಿಸಿದರು.

ಈ ವೇಳೆ ಕಾಗೇರಿ ಅವರು ಪರಮೇಶ್ವರ ನಾಯ್ಕ್ ಅವರಿಗೆ ಕುಳಿತುಕೊಳ್ಳಲು ಸೂಚಿಸಿದರು. ಅದಕ್ಕೆ ನಾಯ್ಕ್ ಒಪ್ಪಲಿಲ್ಲ. ಆಗ ಕಾಗೇರಿ ಎದ್ದು ನಿಂತು, 'ನೀವು ಸೌಜನ್ಯ ಮೀರಿ ವರ್ತಿಸುತ್ತಿದ್ದೀರಿ. ಹುಡುಗಾಟಿಕೆ ಆಡುತ್ತಿದ್ದೀರಿ. ಇಂತಹ ವರ್ತನೆ ಸರಿಯಲ್ಲ' ಎಂದು ಎಚ್ಚರಿಕೆ ನೀಡಿದರು.

6ನೇ ಪುಟ ನೋಡಿ

ಹೋದ ಮಾನ ಮರಳಿ ಬರುತ್ತಾ?

'ನಮ್ಮ ಸಿ.ಡಿ ಇದೆ ಎಂದು ನ್ಯಾಯಾಲಯಕ್ಕೆ ಹೋಗಿಲ್ಲ. ನಕಲಿ ಸಿ.ಡಿ ತಯಾರಿಸಿ ತೇಜೋವಧೆ ಮಾಡುವ ಷಡ್ಯಂತ್ರದ ವಿರುದ್ಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಒಂದು ವೇಳೆ ನಕಲಿ ಸಿ.ಡಿ ಬಿಡುಗಡೆ ಮಾಡಿ ಮಾನ ಹೋದರೆ ಮರಳಿ ಬರುತ್ತಾ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಪ್ರಶ್ನಿಸಿದರು. 'ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಎಚ್.ವೈ. ಮೇಟಿ ವಿರುದ್ಧವೂ ಸಿ.ಡಿ ಬಿಡುಗಡೆ ಆಗಿತ್ತು. ಅವರು ಸಚಿವ ಸ್ಥಾನ ಕಳೆದುಕೊಂಡರು. ಮರ್ಯಾದೆಯೂ ಹೋಯಿತು. ಆದರೆ, ತನಿಖೆ ಆದಾಗ ಅದು ನಕಲಿ ಸಿ.ಡಿ ಎಂಬ ವರದಿ ಬಂತು. ಹೋದ ಮಾನ ಮರಳಿ ಬರಲಿಲ್ಲ' ಎಂದರು.

ವಿಧಾನ ಮಂಡಲದಲ್ಲಿ

ಗರ್ಭಪಾತ ಅವಧಿ ವಿಸ್ತರಣೆ: ಮಸೂದೆಗೆ ಅಸ್ತು

ನವದೆಹಲಿ (ಪಿಟಿಐ): ಅತ್ಯಾಚಾರ ಸಂತ್ರಸ್ತೆಯರು, ಬಾಲಕಿಯರು, ಅಂಗವಿಕಲೆಯರು ಒಳಗೊಂಡಂತೆ ವಿಶೇಷ ಪ್ರಕರಣಗಳಲ್ಲಿ ಗರ್ಭಪಾತ ಮಾಡಿಸಬಹುದಾದ ಅವಧಿಯನ್ನು ಈಗಿನ 20 ವಾರಗಳಿಂದ 24 ವಾರಗಳಿಗೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಗೆ ರಾಜ್ಯಸಭೆ ಮಂಗಳವಾರ ಅಂಗೀಕಾರ ನೀಡಿತು.

'ವೈದ್ಯಕೀಯ ಗರ್ಭಪಾತ (ತಿದ್ದುಪಡಿ) ಮಸೂದೆ 2020' ಅನ್ನು ರಾಜ್ಯಸಭೆಯು ಧ್ವನಿಮತದಿಂದ ಅಂಗೀಕರಿಸಿತು. ಲೋಕಸಭೆಯು ಈ ಮಸೂದೆಗೆ ವರ್ಷದ ಹಿಂದೆಯೇ ಅಂಗೀಕಾರ ನೀಡಿತ್ತು.

ಇದಕ್ಕೆ ಮೊದಲು ರಾಜ್ಯಸಭೆಯ ಆಯ್ಕೆ ಸಮಿತಿಗೆ ಮಸೂದೆಯನ್ನು ಕಳುಹಿಸಬೇಕು ಎಂದು ಕಾಂಗ್ರೆಸ್ ನಾಯಕ ಪ್ರತಾಪ್ ಸಿಂಗ್ ಬಾಜ್ವಾ ನಿಲುವಳಿ ಸೂಚನೆ ಮಂಡಿಸಿದರು. ಆದರೆ, ಇದಕ್ಕೆ ಧ್ವನಿಮತದಿಂದ ಸೋಲುಂಟಾಯಿತು. ಬಳಿಕ, ಮಸೂದೆಗೆ ಅಂಗೀಕಾರ ದೊರೆತಿದೆ ಎಂದು ಉಪಾಧ್ಯಕ್ಷ ಹರಿವಂಶನಾರಾಯಣ ಸಿಂಗ್ ಪ್ರಕಟಿಸಿದರು.

ವಿಶ್ವದ 30 ನಗರಗಳ ಪಟ್ಟಿಯಲ್ಲಿ ಭಾರತದ 22 ನಗರಗಳು

ದೆಹಲಿ: ಗರಿಷ್ಠ ವಾಯುಮಾಲಿನ್ಯ

ನವದೆಹಲಿ (ಪಿಟಿಐ): ಜಗತ್ತಿನಲ್ಲಿಯೇ ಅತಿ ಹೆಚ್ಚು ವಾಯುಮಾಲಿನ್ಯವಿರುವ 30 ನಗರಗಳ ಪೈಕಿ 22 ನಗರಗಳು ಭಾರತದಲ್ಲಿಯೇ ಇವೆ. ಈ ಪೈಕಿ ರಾಜಧಾನಿ ನವದೆಹಲಿಗೆ ಜಗತ್ತಿನಲ್ಲಿಯೇ 'ಹೆಚ್ಚು ವಾಯುಮಾಲಿನ್ಯವುಳ್ಳ ನಗರ' ಎಂಬ ಅಪಖ್ಯಾತಿ ದೊರೆತಿದ್ದು, ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದೆ.

ಸ್ವಿಜರ್ಲೆಂಡ್ ಮೂಲದ ಐಕ್ಯೂಏರ್ ಸಂಸ್ಥೆಯು ಬಿಡುಗಡೆ ಮಾಡಿರುವ 'ವಿಶ್ವದ ವಾಯು ಗುಣಮಟ್ಟ ವರದಿ 2020' ವರದಿಯಲ್ಲಿ ಈ ಅಂಶ ದಾಖಲಾಗಿದೆ. ವರದಿಯ ಪ್ರಕಾರ, ವಾಯುಮಾಲಿನ್ಯ ಗರಿಷ್ಠವಾಗಿರುವ 10 ನಗರಗಳಲ್ಲಿ ಚೀನಾದ ಕ್ಸಿನ್‌ಜಿಯಾಂಗ್ ಮೊದಲ ಸ್ಥಾನದಲ್ಲಿದೆ. ನಂತರದ 9 ಸ್ಥಾನಗಳಲ್ಲಿ ಭಾರತದ ನಗರಗಳಿವೆ.

ವಾಯುಮಾಲಿನ್ಯ ಕುರಿತು ನಗರಗಳ ಜಾಗತಿಕ ಶ್ರೇಣಿಯನ್ನು 106 ದೇಶಗಳಿಂದ ಪಡೆದ ಗುಣಮಟ್ಟ ಮಾಪಕದ ಪಿಎಂ2.5 ಅಂಕಿ ಅಂಶ ಆಧರಿಸಿ ನೀಡಲಾಗಿದೆ. ಸರ್ಕಾರಗಳ ಅಧೀನದಲ್ಲಿಯೇ ಇರುವ ಸಂಸ್ಥೆಗಳು ನೀಡಿದ್ದ ಅಂಕಿಅಂಶಗಳನ್ನು ಈ ವರದಿ ಆಧರಿಸಿದೆ.

ಆದರೆ, ನವದೆಹಲಿಯಲ್ಲಿ ವಾಯುವಿನ ಗುಣಮಟ್ಟ 2019ಕ್ಕೆ ಹೋಲಿಸಿದರೆ 2020ರಲ್ಲಿ ಶೇ 15ರಷ್ಟು ಉತ್ತಮಗೊಂಡಿದೆ. ಕೋವಿಡ್‌ನಿಂದಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್ ಪರಿಣಾಮ ಮಾಲಿನ್ಯದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ ಎಂದೂ ವರದಿ ತಿಳಿಸಿದೆ.

ಭಾರತದಲ್ಲಿ ವಾಯುಮಾಲಿನ್ಯ ಪ್ರಮಾಣ ಹೆಚ್ಚಲು ವಾಹನಗಳು, ಅಡುಗೆಗೆ ಉರುವಲು ಬಳಕೆ, ಕೈಗಾರಿಕೆ, ನಿರ್ಮಾಣ ಚಟುವಟಿಕೆ ಮತ್ತು ತ್ಯಾಜ್ಯಗಳು ಹಾಗೂ ಮತ್ತು ಕೃಷಿ ತ್ಯಾಜ್ಯಗಳನ್ನು ಸುಡುವ ಪ್ರಕ್ರಿಯೆಗಳು ಕಾರಣ. ಈ ಪೈಕಿ ವಾಹನಗಳ ಕೊಡುಗೆ ಹೆಚ್ಚು ಎಂದು ವರದಿ ವಿವರಿಸಿದೆ.

ಭಾರತದ ದೃಷ್ಟಿಯಿಂದ ಈ ವರದಿಯನ್ನು ವಿಶ್ಲೇಷಿಸಿರುವ ಪರಿಸರ ಕಾರ್ಯಕರ್ತ, ಗ್ರೀನ್‌ಪೀಸ್ ಇಂಡಿಯಾ ಸಂಸ್ಥೆಯ ಅವಿನಾಶ್ ಚಂಚಲ್ ಅವರು, 'ಲಾಕ್‌ಡೌನ್ ಕಾರಣದಿಂದ ದೆಹಲಿ ಸೇರಿ ವಿವಿಧ ನಗರಗಳಲ್ಲಿ ವಾಯುಮಾಲಿನ್ಯ ಕುಗ್ಗಿರಬಹುದು. ಆದರೆ, ಆರ್ಥಿಕ ಮತ್ತು ಆರೋಗ್ಯದ ಮೇಲೆ ಅದರ ಪರಿಣಾಮ ಗಂಭೀರವಾಗಿಯೇ ಇದೆ' ಎನ್ನುತ್ತಾರೆ.

ವಾಯುಮಾಲಿನ್ಯ ಹೆಚ್ಚಿರುವ ದೇಶದ 21 ನಗರಗಳು

- **ಉತ್ತರಪ್ರದೇಶ:** ಗಾಜಿಯಾಬಾದ್, ಬುಲಂದ್‌ಶಹರ್, ಬಿಸ್ರಾಕ್ ಜಲಾಲ್‌ಪುರ, ನೊಯ್ಡಾ, ಗ್ರೇಟರ್ ನೊಯ್ಡಾ, ಕಾನ್ಪುರ, ಲಖನೌ, ಮೀರತ್, ಆಗ್ರಾ, ಮುಜಾಫರ್‌ನಗರ,
- **ಹರಿಯಾಣ:** ಫರೀದಾಬಾದ್, ಜಿಂದ್, ಹಿಸ್ಸಾರ್, ಫತೇಹಾಬಾದ್, ಬಂದ್ವಾರಿ, ಗುರುಗ್ರಾಮ, ಯಮುನಾ ನಗರ್, ರೋಹ್ಟಕ್, ಧರುಹೆರಾ
- **ಬಿಹಾರ:** ಮುಜಾಫರ್ ನಗರ.
- **ರಾಜಸ್ಥಾನ:** ಭಿವಾರಿ

ಮೂಲಸೌಕರ್ಯಕ್ಕೆ ಹಣ ಒದಗಿಸಲು 'ಡಿಎಫ್‌ಐ'

ನವದೆಹಲಿ: ಮೂಲಸೌಕರ್ಯ ಯೋಜನೆಗಳಿಗೆ ಹಣ ಹೂಡಿಕೆ ಮಾಡಲು 'ಅಭಿವೃದ್ಧಿ ಹಣಕಾಸು ಸಂಸ್ಥೆ'ಯನ್ನು (ಡಿಎಫ್‌ಐ) ಆರಂಭಿಸಲು ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು. ಕೇಂದ್ರ ಸರ್ಕಾರದ ವತಿಯಿಂದ ಡಿಎಫ್‌ಐಗೆ ₹ 20 ಸಾವಿರ ಕೋಟಿ ಬಂಡವಾಳ ಒದಗಿಸುವುದಾಗಿ ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. 12

ಬೆಳಗಾವಿ ಲೋಕಸಭೆ, ಬಸವಕಲ್ಯಾಣ, ಮಸ್ಕಿ ವಿಧಾನಸಭೆ

ಏ. 17ರಂದು ಉಪ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ಬೆಳಗಾವಿ ಲೋಕಸಭೆ ಮತ್ತು ಬಸವಕಲ್ಯಾಣ ಹಾಗೂ ಮಸ್ಕಿ ವಿಧಾನಸಭೆ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಣೆಯಾಗಿದ್ದು, ಏಪ್ರಿಲ್ 17ರಂದು ಮತದಾನ ನಡೆಯಲಿದೆ. ಮೇ 2ರಂದು ಮತ ಎಣಿಕೆ ನಡೆಯಲಿದೆ.

ಮಾರ್ಚ್ 23ರಂದು ಉಪ ಚುನಾವಣೆಯ ಅಧಿಸೂಚನೆ ಪ್ರಕಟವಾಗಲಿದ್ದು, ಮಾರ್ಚ್ 30 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. 31ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂದಕ್ಕೆ ಪಡೆಯಲು ಏಪ್ರಿಲ್ 3 ಕೊನೆಯ ದಿನವಾಗಿದೆ.

ಚುನಾವಣೆ ಘೋಷಣೆ ಆದ ದಿನದಿಂದಲೇ ಮಾದರಿ ನೀತಿಸಂಹಿತೆ ಜಾರಿಯಲ್ಲಿರಲಿದೆ ಎಂದು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ನಿಧನದಿಂದ ಬೆಳಗಾವಿ ಲೋಕಸಭೆ ಕ್ಷೇತ್ರ ತೆರವಾಗಿದೆ.

ಪ್ರತಾಪಗೌಡ ಪಾಟೀಲ ಅವರ ರಾಜೀನಾಮೆಯಿಂದ ಮಸ್ಕಿ ವಿಧಾನಸಭೆ ಕ್ಷೇತ್ರ ಮತ್ತು ಶಾಸಕ ನಾರಾಯಣರಾವ್ ಅವರ ನಿಧನದಿಂದ ಬಸವಕಲ್ಯಾಣ ವಿಧಾನಸಭೆ ಕ್ಷೇತ್ರ ತೆರವಾಗಿವೆ.

ಶಾಸಕ ಎಂ.ಸಿ.ಮನಗೂಳಿ ಅವರ ನಿಧನದಿಂದ ತೆರವಾಗಿರುವ ಸಿಂಧಗಿ ವಿಧಾನಸಭೆ ಕ್ಷೇತ್ರಕ್ಕೆ ಉಪಚುನಾವಣೆ ಘೋಷಣೆಯಾಗಿಲ್ಲ.

ಆಂಧ್ರಪ್ರದೇಶದ ತಿರುಪತಿ ಲೋಕಸಭೆ ಕ್ಷೇತ್ರ ಹಾಗೂ ವಿವಿಧ ರಾಜ್ಯಗಳ ಇತರ 12 ವಿಧಾನಸಭೆ ಕ್ಷೇತ್ರಗಳಿಗೂ ಏಪ್ರಿಲ್ 17ರಂದೇ ಉಪ ಚುನಾವಣೆ ನಡೆಯಲಿದೆ.

ಇನ್ನೊಂದು ಸುದ್ದಿ 6

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-9

ಇಂದಿನ ಪಾಡ್‌ಕಾಸ್ಟ್ ವಿಶೇಷ

ಝಣ ಝಣ ಕಾಂಚಾಣ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಖೋಟಾ ನೋಟು ಚಲಾವಣೆ; ಅಪರಾಧಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದಲ್ಲಿ ತಯಾರಿಸುತ್ತಿದ್ದ ಖೋಟಾ ನೋಟುಗಳನ್ನು ಬಾಂಗ್ಲಾದೇಶದ ಗಡಿ ಮೂಲಕ ತಂದು ರಾಜ್ಯದಲ್ಲಿ ಚಲಾವಣೆ ಮಾಡುತ್ತಿದ್ದ ಅಪರಾಧಿ ನಾಸೀರ್‌ಗೆ 4 ವರ್ಷಗಳ ಜೈಲು ಶಿಕ್ಷೆ ವಿಧಿಸಿ 52ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

2013ರ ಆಗಸ್ಟ್ 21ರಂದು ಎಸ್.ಜೆ.ಪಿ ರಸ್ತೆಯ ದಾಸಪ್ಪ ಆಸ್ಪತ್ರೆ ಮುಂಭಾಗದಲ್ಲಿ ಆರೋಪಿ ನಾಸೀರ್ ಹಾಗೂ ಇತರರು, ಖೋಟಾ ನೋಟು ಚಲಾವಣೆ ಮಾಡುತ್ತಿದ್ದರು. ಆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿದ್ದ ಎಸ್.ಜೆ.ಪಾರ್ಕ್ ಪೊಲೀಸರು, ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದ ಮಂಡಿಸಿದ್ದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂಖ್ಯೆ. 06-ಎಕ್ಸ್‌ಇಎನ್-ಡಬ್ಲ್ಯುಎಸ್-ಯುಬಿಎಲ್‌ಎಸ್-2020-21 ದಿನಾಂಕ : 09-03-2021

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಕ್ಯಾರೇಜ್ ರಿಪೇರಿ ಕಾರ್ಯಾಗಾರ, ಹುಬ್ಬಳ್ಳಿಯ ಏರ್-ಬ್ರೇಕ್ ಉತ್ಪಾದನೆ "ಡಿ" ವ್ಹೀಲ್ ಶಾಪ್ ಮತ್ತು ಮಷೀನ್ ಶಾಪ್‌ಗಳ ರೂಫ್ ಗಟ್ಟರ್ಸ್‌ಗಳಿಗೆ ದುರಸ್ತಿ.	ರೂ. 59,51,977/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08-04-2021 ರಂದು 15.00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು ಕ್ಯಾರೇಜ್ ರಿಪೇರಿ ಕಾರ್ಯಾಗಾರ, ಹುಬ್ಬಳ್ಳಿ

ಪಿಯುಬಿ/288/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2020-21

ಮೀಸ್ಟ್ರೋಸ್ ಮೆಡಿಲೈನ್ ಸಿಸ್ಟಮ್ಸ್ ಲಿಮಿಟೆಡ್

(ಇನ್ಸಾಲ್ವನ್ಸಿ & ಬ್ಯಾಂಕ್‌ರಪ್ಸಿ ಕೋಡ್, 2016ರ ಅಡಿಯಲ್ಲಿ ಲಿಕ್ವಿಡೇಶನ್‌ನಲ್ಲಿರುವ)

ಸ್ಥಿರಾಸ್ತಿ ಇ-ಹರಾಜು ಪ್ರಕಟಣೆ

ಭದ್ರತಾ ಠೇವಣಿ ಮೊತ್ತ ಪಾವತಿಸುವ ಕೊನೆಯ ದಿನಾಂಕ: 25 ಮಾರ್ಚ್ 2021

ಇ-ಹರಾಜು ದಿನಾಂಕ: 26 ಮಾರ್ಚ್ 2021

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಮುಂಬೈ ಇವರಿಂದ ಲಿಕ್ವಿಡೇಶನ್‌ನಲ್ಲಿರುವ - ಮೀಸ್ಟ್ರೋಸ್ ಮೆಡಿಲೈನ್ ಸಿಸ್ಟಮ್ಸ್ ಲಿಮಿಟೆಡ್ ಕಂಪನಿಯ ಲಿಕ್ವಿಡೇಟರ್ ಎಂದು ನೇಮಕಗೊಂಡಿರುವ ಶ್ರೀ. ಜಿತೇಂದ್ರ ಕುಮಾರ್ ಜೈನ್ ಇವರ ಸೂಚನೆಯ ಮೇರೆಗೆ, ಇನ್ಸಾಲ್ವನ್ಸಿ & ಬ್ಯಾಂಕ್‌ರಪ್ಸಿ ಕೋಡ್, 2016ರ ನಿಯಮಗಳ ಅಡಿಯಲ್ಲಿ ಕೆಳಕಂಡ ಸ್ವತ್ತನ್ನು ಮಾರಾಟ ಮಾಡಲಾಗುತ್ತಿದೆ.

ಸ್ವತ್ತಿನ ವಿವರ	ಮೀಸಲು ಬೆಲೆ (ಐಎನ್‌ಆರ್)	ಇಎಂಡಿ (ಐಎನ್‌ಆರ್)
ಆಫೀಸ್ ನಂ. 603-604, ಬ್ರಿಗೇಡ್ ಟವರ್ಸ್, 2ಎಂ, ಬ್ರಿಗೇಡ್ ಟವರ್ಸ್, 135 ಬ್ರಿಗೇಡ್ ರೋಡ್, ಬೆಂಗಳೂರು-560025, ಕರ್ನಾಟಕ ಸೂಪರ್ ಬಿಲ್ಟಪ್ ಪ್ರದೇಶ 1,412 ಚ.ಅ.	93,49,666	9,35,000

"ಎಲ್ಲಿದೆಯೊ ಹೇಗಿದೆಯೊ" ಆಧಾರದಲ್ಲಿ ಇ-ಹರಾಜು ಮೂಲಕ www.gaplonline.com ವೆಬ್‌ಸೈಟ್‌ನಲ್ಲಿ ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಮಾರಾಟ ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ: ಗಾಂಧಿ ಆಕ್ಷನಿಯರ್ಸ್ ಪ್ರೈ. ಲಿ., (ಮೊ: 9820106675 ಮತ್ತು ಇಮೇಲ್: office@gaplonline.com)

ಶ್ರೀ. ಜಿತೇಂದ್ರ ಕುಮಾರ್ ಜೈನ್

ಮೀಸ್ಟ್ರೋಸ್ ಮೆಡಿಲೈನ್ ಸಿಸ್ಟಮ್ಸ್ ಲಿಮಿಟೆಡ್‌ನ ಲಿಕ್ವಿಡೇಟರ್

ನೊಂದಣಿ ಸಂ. IBBI/IPA-002/IP-N00033/2016-17/10070

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಮಹಾನಗರ ಆಯುಕ್ತರವರ ಕಛೇರಿ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560052, ದೂ.ಸಂ.080-22263479

ಸಂಖ್ಯೆ: ಬಿಎಂಆರ್‌ಡಿಎ/ಲೆಕ್ಕಶಾಖೆ/15/2020-21 ದಿನಾಂಕ: 12-03-2021

"ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ-ಹರಾಜು GOK ಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: www.eproc.karnataka.gov.in ನಿಂದ ಪಡೆಯಬಹುದಾಗಿದೆ."

ಸಹಿ/- ಸಹಾಯಕ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ಬೆಂ.ನಗರ/3133/ಆಕಾರ್/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹಿರಿಯ ಉಪನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ

ಸಂ: ಹಿಉನಿ/ಸ್ಥಲೆಪವ/ಡಿಇಒ/ಹೊ.ಗು/ಚಿಪು/ಟೆಂಡರ್/3/2020-21 ದಿನಾಂಕ: 12.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಹಿರಿಯ ಉಪ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ ಈ ಕಛೇರಿಗೆ ಅವಶ್ಯವಿರುವ 02 'ಡಿ' ಗ್ರೂಪ್ ರವರ ಸೇವೆಯನ್ನು ಹೊರ ಸಂಪನ್ಮೂಲದಿಂದ ಪಡೆಯಲು ಅರ್ಹ ಆಸಕ್ತ ಏಜೆನ್ಸಿ/ಹೊರಗುತ್ತಿಗೆ ಸಂಸ್ಥೆಗಳಿಂದ ಮುಚ್ಚಿದ ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ವಿವರ ಈ ಕೆಳಕಂಡಂತಿದೆ.

ಉಲ್ಲೇಖ: ಮಾನ್ಯ ಪ್ರಧಾನ ನಿರ್ದೇಶಕರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ರಾಲೆಪ/ಬಿಯುಡಿ/03/ಹೊರಗು/2021-22, ದಿನಾಂಕ: 04.03.2021.

ಕ್ರ. ಸಂ.	ವಿವರ	ಟೆಂಡರ್ ಮೊತ್ತ	ಇಎಂಡಿ ಮೊತ್ತ
1	'ಡಿ' ಗ್ರೂಪ್-2 ಸಂಖ್ಯೆ	ರೂ.3,99,420/-	ರೂ.9,986/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ಪ್ರಾರಂಭದ ದಿನಾಂಕ: **15.03.2021, ಬೆಳಿಗ್ಗೆ 10.30 ಗಂಟೆ.** (2) ಟೆಂಡರ್ ಫಾರಂ ಕಛೇರಿಯಲ್ಲಿ ಪಡೆಯಲು ಕೊನೆಯ ದಿನಾಂಕ: **22.03.2021, ಸಂಜೆ 5.30 ಗಂಟೆ.** (3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **30.03.2021, ಸಂಜೆ 5.30 ಗಂಟೆ.** (4) ಟೆಂಡರ್ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **31.03.2021, ಬೆಳಿಗ್ಗೆ 11.00 ಗಂಟೆ.** (5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **31.03.2021, ಮಧ್ಯಾಹ್ನ 3.00 ಗಂಟೆ.** ಟೆಂಡರ್ ಸಲ್ಲಿಸಲು ಇಚ್ಛೆಯುಳ್ಳ ಏಜೆನ್ಸಿ/ಹೊರಗುತ್ತಿಗೆ ಸಂಸ್ಥೆಯ ಮಾಲೀಕರು ಹಿರಿಯ ಉಪ ನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ ಕಛೇರಿಯಲ್ಲಿ ಟೆಂಡರ್ ಅರ್ಜಿ ಶುಲ್ಕ ಪಾವತಿಸಿ, ಟೆಂಡರ್ ಅರ್ಜಿ ಫಾರಂಗಳನ್ನು ಪಡೆದು ಭರ್ತಿ ಮಾಡಿದ ಟೆಂಡರ್ ದಾಸ್ತಾವೇಜುಗಳನ್ನು ಇಎಂಡಿ ಮೊತ್ತದೊಂದಿಗೆ ನಿಗದಿತ ದಿನಾಂಕ ಹಾಗೂ ಸಮಯದೊಳಗೆ ಕಛೇರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿದ ಹಾಗೂ ಇಎಂಡಿ ಪಾವತಿಸದ ಟೆಂಡರನ್ನು ತಿರಸ್ಕರಿಸಲಾಗುವುದು.

ಸಹಿ/- ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ.

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 367/ಎಂಸಿಎ/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಿಬಿಎಂಪಿ ಆಡಳಿತಾಧಿಕಾರಿ ಗರಿಷ್ಠ ಅವಧಿ ಅಂತ್ಯ– ಆಡಳಿತದಲ್ಲಿ ನಿರ್ವಾತ ಸೃಷ್ಟಿ?

ಬಿಕ್ಕಟ್ಟು ನಿವಾರಿಸದ ಸರ್ಕಾರ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಗೆ ಅನಿವಾರ್ಯ ಕಾರಣಗಳಿಂದ ಆಡಳಿತಾಧಿಕಾರಿಯನ್ನು ನೇಮಿಸಿದರೂ, ಸಂವಿಧಾನದ ಪ್ರಕಾರ ಅವರ ಅವಧಿ ಆರು ತಿಂಗಳು ಮೀರುವಂತಿಲ್ಲ. ಸದ್ಯಕ್ಕೆ ಇರುವ ಯಾವುದೇ ಕಾನೂನುಗಳಲ್ಲೂ ಆಡಳಿತಾಧಿಕಾರಿಯನ್ನು ಮುಂದುವರಿಸುವುದಕ್ಕೆ ಅವಕಾಶಗಳಿಲ್ಲ. ಆದರೆ, ಈ ಬಿಕ್ಕಟ್ಟನ್ನು ಬಗೆಹರಿಸಲು ಸರ್ಕಾರ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ಸರ್ಕಾರ ಬಿಬಿಎಂಪಿಗೆ 2020ರ ಸೆ.10ರಂದು ಆಡಳಿತಾಧಿಕಾರಿಯನ್ನು ನೇಮಿಸಿ ಅಧಿಸೂಚನೆ ಹೊರಡಿಸಿತ್ತು. ಮುಂದಿನ ಆದೇಶದವರೆಗೆ ಗೌರವ್ ಗುಪ್ತ ಆಡಳಿತಾಧಿಕಾರಿಯಾಗಿ ಮುಂದುವರಿಯಲಿದ್ದಾರೆ ಎಂದು ಆ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಸಂವಿಧಾನದ ಪ್ರಕಾರ ಅವರ ಆಡಳಿತಾವಧಿ 2021ರ ಮಾ.10ಕ್ಕೆ ಮುಗಿದಿದೆ.

ಈ ಹಿಂದೆ 1976ರ ಕರ್ನಾಟಕ ಪೌರಾಡಳಿತ ಕಾಯ್ದೆಯ ಸೆಕ್ಷನ್ 100 ಚುನಾಯಿತ ಕೌನ್ಸಿಲ್‌ನನ್ನು ವಿಸರ್ಜಿಸಿದಾಗ ಹಾಗೂ ಇತರ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಿಬಿಎಂಪಿಗೆ ಆಡಳಿತಾಧಿಕಾರಿ ನೇಮಕ ಮಾಡಲು ಅವಕಾಶ ಇತ್ತು. ಈಗ ಬಿಬಿಎಂಪಿ ಕಾಯ್ದೆ ಪ್ರಕಾರ ಪಾಲಿಕೆ ಆಡಳಿತ ನಡೆಯುತ್ತಿದೆ. ಹೊಸ ಬಿಬಿಎಂಪಿ ಕಾಯ್ದೆಯಲ್ಲಿ ಸೆಕ್ಷನ್ 126ರ ಪ್ರಕಾರ ಚುನಾಯಿತ ಕೌನ್ಸಿಲ್ ವಿಸರ್ಜಿಸಲು ಸರ್ಕಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಪಾಲಿಕೆಯನ್ನು ವಿಸರ್ಜಿಸಿದರೆ ಆ ದಿನಾಂಕದಿಂದ ಆರು ತಿಂಗಳ ಒಳಗೆ ಕೌನ್ಸಿಲ್ ಅನ್ನು ಪುನರ್ ರಚಿಸಬೇಕು ಎಂದೇ ಸೆಕ್ಷನ್ 126 (7) ಹೇಳುತ್ತದೆ. ಪಾಲಿಕೆಯ ಚುನಾಯಿತ ಕೌನ್ಸಿಲನ್ನು ವಿಸರ್ಜಿಸಿದರೆ ಮಾತ್ರ ಅಧಿಸೂಚನೆ ಹೊರಡಿಸುವ ಮೂಲಕ ವಿಸರ್ಜನೆಯ ಅವಧಿಗೆ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 127 ಅವಕಾಶ ಕಲ್ಪಿಸುತ್ತದೆ. ಅಗತ್ಯ ಬಿದ್ದರೆ ಆಡಳಿತಾಧಿಕಾರಿಯ ಅವಧಿಯನ್ನು ಮೊಟಕುಗೊಳಿಸಲು ಅಥವಾ ವಿಸ್ತರಿಸುವುದಕ್ಕೂ ಈ ಸೆಕ್ಷನ್ ಅವಕಾಶ ಕಲ್ಪಿಸುತ್ತದೆ.

ಕುಪ್ಪುಸ್ವಾಮಿ ಮತ್ತು ರಾಜ್ಯ ಸರ್ಕಾರದ ನಡುವಿನ ಪ್ರಕರಣದಲ್ಲಿ ಹೈಕೋರ್ಟ್ 1995ರ ಸೆ 12ರಂದು ನೀಡಿದ ಆದೇಶದಲ್ಲೂ ಚುನಾಯಿತ ಕೌನ್ಸಿಲ್‌ನ ಅವಧಿ ಮೀರುವ ಮುನ್ನವೇ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂಬುದನ್ನು ಸ್ಪಷ್ಟಪಡಿಸಲಾಗಿತ್ತು. 'ಚುನಾವಣೆ ನಡೆಯದ ಕಾರಣಕ್ಕೆ ಪಾಲಿಕೆ ಆಡಳಿತದಲ್ಲಿ ನಿರ್ವಾತ ಸೃಷ್ಟಿಯಾದರೆ ಅಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾವು ತನ್ನ ಕಾರ್ಯಾಂಗದ ಅಧಿಕಾರವನ್ನು ಬಳಸಿ ಆಡಳಿತಾಧಿಕಾರಿಯನ್ನು ನೇಮಿಸುವುದನ್ನು ಅನುಮತಿಸಲಾಗದು' ಎಂದು ಹೈಕೋರ್ಟ್ ಸ್ಪಷ್ಟಪಡಿಸಿತ್ತು.

'ಆಡಳಿತಾಧಿಕಾರಿಯನ್ನು ಆರು ತಿಂಗಳಿಗಿಂತ ಹೆಚ್ಚು ಅವಧಿಗೆ ಮುಂದುವರಿಸಿದರೆ ಸಂವಿಧಾನದ ಆಶಯಕ್ಕೆ ಧಕ್ಕೆ ಉಂಟಾಗುತ್ತದೆ. ನ್ಯಾಯದಾನ ಪ್ರಕ್ರಿಯೆ ವಿಳಂಬ ಇಂತಹ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಬಿಬಿಎಂಪಿ ಚುನಾವಣೆ ಮುಂದೂಡಿಕೆಗೆ ಸಂಬಂಧಿಸಿದ ವ್ಯಾಜ್ಯವನ್ನು ಸುಪ್ರೀಂ ಕೋರ್ಟ್ ತ್ವರಿತವಾಗಿ ಇತ್ಯರ್ಥಪಡಿಸಬೇಕು. ಬಿಬಿಎಂಪಿಗೆ ಚುನಾವಣೆ ನಡೆಸುವುದಕ್ಕೆ ಅನುವು ಮಾಡಿಕೊಡಬೇಕು' ಎನ್ನುತ್ತಾರೆ ಸುಪ್ರೀಂ ಕೋರ್ಟ್ ವಕೀಲ ಕೆ.ವಿ.ಧನಂಜಯ.

ಬಿಕ್ಕಟ್ಟು ನಿವಾರಣೆ – ಚುನಾವಣೆಯೊಂದೇ ದಾರಿ?

ಬಿಬಿಎಂಪಿ ಕಾಯ್ದೆಯಲ್ಲಿ ಹೇಳಲಾದ ಅಂಶಗಳ ಅನುಷ್ಠಾನಕ್ಕೆ ಬಿಕ್ಕಟ್ಟು ಎದುರಾದರೆ, ಅದನ್ನು ನಿವಾರಿಸುವುದಕ್ಕೆ ಈ ಕಾಯ್ದೆಯ ಸೆಕ್ಷನ್ 366 ಅವಕಾಶ ಕಲ್ಪಿಸುತ್ತದೆ. ಎದುರಾಗಿರುವ ಬಿಕ್ಕಟ್ಟು ನಿವಾರಿಸಲು ಸರ್ಕಾರ ಸಂದರ್ಭಾನುಸಾರ ಆದೇಶ ಹೊರಡಿಸಿ ಅದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಬಹುದು ಎನ್ನುತ್ತದೆ ಈ ಸೆಕ್ಷನ್. ಆದರೆ, ಈ ಸೆಕ್ಷನ್ ಬಳಸಿ ಆಡಳಿತಾಧಿಕಾರಿಯನ್ನು ಮುಂದುವರಿಸುವುದು ಕಷ್ಟಸಾಧ್ಯ ಎನ್ನುತ್ತಾರೆ ಕಾನೂನು ತಜ್ಞರು.

ಬಿಕ್ಕಟ್ಟು ನಿವಾರಣೆಯ ಅಧಿಕಾರವನ್ನು ಹೇಗೆ ಬಳಸಬೇಕು ಎಂಬುದನ್ನು ಮಾಧವ ಉಪೇಂದ್ರ ಸಿನಾಯ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ (1975 (3) ಎಸ್‌ಸಿಸಿ 765) ಸುಪ್ರೀಂ ಕೋರ್ಟ್ ನಿರ್ದಿಷ್ಟಪಡಿಸಿದೆ. ಈ ಅಧಿಕಾರವನ್ನು ಸರ್ಕಾರ ಬೇಕಾಬಿಟ್ಟಿ ಬಳಸುವುದಕ್ಕೆ ಅವಕಾಶ ಇಲ್ಲ ಎಂಬುದು ತಜ್ಞರ ಅಭಿಪ್ರಾಯ.

'ಸಂವಿಧಾನಾತ್ಮಕವಾಗಿ ಎದುರಾದ ಬಿಕ್ಕಟ್ಟು ನಿವಾರಣೆಗೆ ಬಿಕ್ಕಟ್ಟು ನಿವಾರಣೆಗೆ 'ಹೆನ್ರಿ VIII ವಿಧಿ' ಅಡಿಯ ಅಧಿಕಾರ ಬಳಸುವಂತೆಯೇ ಇಲ್ಲ. ಬಿಕ್ಕಟ್ಟು ನಿವಾರಣೆಗೆ ಕಾರ್ಯಾಂಗದ ಅಧಿಕಾರ ಬಳಸುವುದು ತೀರಾ ಅನಿವಾರ್ಯವೆಂದಾದರೆ, ಅದು ಕಾಯ್ದೆಯ ಅಂಶಗಳನ್ನು ಪರಿಣಾಮಕಾರಿಯಾಗಿಸುವುದಕ್ಕೆ ಸೀಮಿತವಾಗಿರಬೇಕೇ ಹೊರತು, ಅದಕ್ಕಿಂತ ಆಚೆಗಿನ ವ್ಯಾಪ್ತಿಯನ್ನು ಹೊಂದಿರಬಾರದು ಎಂಬುದನ್ನು ಸುಪ್ರೀಂ ಕೋರ್ಟ್ ಈ ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅವರು ತಿಳಿಸಿದರು.

'ಬಿಕ್ಕಟ್ಟು ನಿವಾರಣೆಗೆ ರಾಜ್ಯ ಸರ್ಕಾರವು ಒಂದೋ ಸಂವಿಧಾನದ 243- ಯು ವಿಧಿಯ ಪ್ರಕಾರ ಚುನಾವಣೆ ನಡೆಸಬೇಕು ಅಥವಾ ಆಡಳಿತಾಧಿಕಾರಿಯ ಅವಧಿ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು. ಆಡಳಿತಾಧಿಕಾರಿಯನ್ನು ನೇಮಿಸಿದ್ದರೂ ಅವರ ಗರಿಷ್ಠ ಅವಧಿ ಆರು ತಿಂಗಳು. ಇದೂ ಮಾರ್ಚ್ 10ಕ್ಕೆ ಕೊನೆಗೊಂಡಿದೆ. ಹಾಗಾಗಿ ಚುನಾವಣೆ ನಡೆಸುವುದೊಂದೇ ಸರ್ಕಾರದ ಮುಂದಿರುವ ದಾರಿ' ಎಂದು ಅವರು ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

ಏ.7ರಿಂದ ಸಾರಿಗೆ ನೌಕರರ ಮುಷ್ಕರ

ಬೆಂಗಳೂರು: ನಿಗದಿತ ಗಡುವು ಮೀರಿದ್ದರೂ ಬೇಡಿಕೆಗಳ ಈಡೇರಿಕೆ ಬಗ್ಗೆ ಸರ್ಕಾರದಿಂದ ಸ್ಪಷ್ಟತೆ ಸಿಗದ ಕಾರಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ಏಪ್ರಿಲ್ 7ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದೆ.

ಈ ಸಂಬಂಧ ನೌಕರರ ಕೂಟ ಸರ್ಕಾರಕ್ಕೆ ಮಂಗಳವಾರ ನೋಟಿಸ್ ನೀಡಿದೆ. ನೋಟಿಸ್ ಪ್ರತಿಯನ್ನು ಸಾರಿಗೆ ಸಚಿವರು, ನಾಲ್ಕು ಸಾರಿಗೆ ನಿಗಮಗಳ ಮುಖ್ಯಸ್ಥರು, ಕಾರ್ಮಿಕ ಇಲಾಖೆ ಆಯುಕ್ತರಿಗೂ ಕಳುಹಿಸಿದೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ ಸರ್ಕಾರ ಮತ್ತು ನೌಕರರ ಕೂಟದ ನಡುವೆ ಸಂಧಾನ ನಡೆದಿತ್ತು. ಮೂರು ತಿಂಗಳಲ್ಲಿ ಬೇಡಿಕೆ ಈಡೇರಿಸುವ ಭರವಸೆಯನ್ನು ಸರ್ಕಾರ ನೀಡಿತ್ತು. ಮಾ. 15ಕ್ಕೆ ಈ ಗಡುವು ಪೂರ್ಣಗೊಂಡಿದೆ. ಆದರೆ, ಬೇಡಿಕೆಗಳ ಈಡೇರಿಕೆ ಬಗ್ಗೆ ಯಾವುದೇ ಸ್ಪಷ್ಟ ಸ್ಪಂದನೆ ದೊರೆತಿಲ್ಲ. ಹೀಗಾಗಿ, ಮುಷ್ಕರ ನಡೆಸುತ್ತಿರುವುದಾಗಿ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ.

ಐಎಸ್‌ಡಿ ಕರೆ ಮಾರ್ಪಾಡು: ಟೀ ಅಂಗಡಿ ಮಾಲೀಕ ಬಂಧನ

ಬೆಂಗಳೂರು: ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡು ಮಾಡಿ ಕೇಂದ್ರ ಸರ್ಕಾರಕ್ಕೆ ಹಾಗೂ ದೂರ ಸಂಪರ್ಕ ಇಲಾಖೆಗೆ ನಷ್ಟ ಉಂಟು ಮಾಡುತ್ತಿದ್ದ ಆರೋಪದಡಿ ಅಶ್ರಫ್ ಉಣಿಚಿರವಿಟ್ಟಿಲ್ (33) ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಅಶ್ರಫ್, ಕೆಲ ವರ್ಷಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ಚಿಕ್ಕಬಾಣಾವರದಲ್ಲಿ ಟೀ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಅಂಗಡಿ ಸಮೀಪದಲ್ಲೇ ಬಾಡಿಗೆ ಮನೆಯೊಂದನ್ನು ಮಾಡಿದ್ದ ಆರೋಪಿ, ಅಲ್ಲಿಯೇ ಕರೆಗಳ ಮಾರ್ಪಾಡು ಕೃತ್ಯ ಎಸಗುತ್ತಿದ್ದರು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಕರೆಗಳ ಮಾರ್ಪಾಡು ಬಗ್ಗೆ ಪರಿಣಿತಿ ಹೊಂದಿದ್ದ ಆರೋಪಿ, ಕೃತ್ಯಕ್ಕಾಗಿ ಎಫ್‌ಸಿಟಿ (ಫಿಕ್ಸೆಡ್ ಸೆಲ್ಯುಲರ್ ಟರ್ಮಿನಲ್) ಬಾಕ್ಸ್ ಬಳಸುತ್ತಿದ್ದರು.'

'ಸಿಮ್ ಕಾರ್ಡ್‌ಗಳು, ಕಂಪ್ಯೂಟರ್, ಮೊಬೈಲ್ ಹಾಗೂ ಕೇಬಲ್‌ಗಳನ್ನು ಬಳಸಿ ಎಫ್‌ಸಿಟಿ ಬಾಕ್ಸ್ ಸಿದ್ಧಪಡಿಸಿಕೊಂಡಿದ್ದರು. ಅನಿಯಮಿತ ಕರೆ ಸೌಲಭ್ಯವಿರುವ (ಅನ್‌ಲಿಮಿಟೆಡ್) ಸಿಮ್ ಕಾರ್ಡ್‌ಗಳನ್ನು ಎಫ್‌ಟಿಸಿ ಬಾಕ್ಸ್, ಮೋಡಮ್ ಹಾಗೂ ರೂಟರ್‌ಗೆ ಸಂಪರ್ಕ ಕೊಟ್ಟಿದ್ದರು. ಅದೇ ಉಪಕರಣದ ಮೂಲಕ ಐಎಸ್‌ಡಿ ಕರೆಗಳನ್ನು ಎಸ್‌ಟಿಡಿ ಕರೆಗಳಿಗೆ ಪರಿವರ್ತಿಸುತ್ತಿದ್ದರು. ಇದರಿಂದ ವಿದೇಶಿ ಕರೆಗಳಿಗೂ ಎಸ್‌ಟಿಡಿ ದರವೇ ಅನ್ವಯವಾಗುತ್ತಿತ್ತು' ಎಂದೂ ಮಾಹಿತಿ ನೀಡಿದರು.

ಮನೆ, ಕ್ಲಿನಿಕ್ ಮೇಲೆ ಎನ್‌ಐಎ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆ ಜೊತೆ ನಂಟು ಹೊಂದಿ ಭಯೋತ್ಪಾದನಾ ಕೃತ್ಯ ಎಸಗಲು ಹೊಂಚು ಹಾಕುತ್ತಿದ್ದ ಆರೋಪದಡಿ ಶಂಕಿತ ಉಗ್ರರನ್ನು ಕೇರಳ ಹಾಗೂ ದೆಹಲಿಯಲ್ಲಿ ಇತ್ತೀಚೆಗಷ್ಟೇ ಬಂಧಿಸಿದ್ದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ನಗರದ ಎರಡು ಕಡೆ ದಾಳಿ ಮಾಡಿದರು.

'ಐಎಸ್ ಸಂಘಟನೆ ಧ್ಯೇಯ ಮೈಗೊಡಿಸಿಕೊಂಡಿದ್ದ ಪ್ರಮುಖ ಆರೋಪಿ ಮೊಹಮ್ಮದ್ ಅಮೀನ್ ಅಲಿಯಾಸ್ ಅಬು ಯಾಹ್ಯಾ, ದೇಶದಾದ್ಯಂತ ಸಂಘಟನೆಗೆ ಹೊಸ ಯುವಕರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದ. ಅದಕ್ಕಾಗಿ ಟೆಲಿಗ್ರಾಂ, ಹೋಪ್ ಹಾಗೂ ಇನ್‌ಸ್ಟಾಗ್ರಾಂ ಬಳಕೆ ಮಾಡುತ್ತಿದ್ದ. ದೇಶದಲ್ಲಿ ಭಯೋತ್ಪಾದನಾ ಕೃತ್ಯ ಎಸಗುವುದು ಹಾಗೂ ಐಎಸ್ ಪರ ಪ್ರಚಾರ ಮಾಡುವುದು ಪ್ರಮುಖ ಆರೋಪಿ ಉದ್ದೇಶವಾಗಿತ್ತು' ಎಂದು ಎನ್‌ಐಎ ಅಧಿಕಾರಿಯೊಬ್ಬರು ಹೇಳಿದರು.

'ಶಂಕಿತ ಉಗ್ರರ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕೇರಳ, ಕರ್ನಾಟಕ ಹಾಗೂ ದೆಹಲಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಬೆಂಗಳೂರಿನ ಡಾ. ರಾಹೀಶ್ ರಶೀದ್ ಸೇರಿದಂತೆ 7 ಮಂದಿಯನ್ನು ಬಂಧಿಸಲಾಗಿತ್ತು. ಇದೀಗ ಆರೋಪಿಗಳಿಗೆ ಸೇರಿದ್ದ ಮನೆ ಹಾಗೂ ಕಚೇರಿ ಸೇರಿದಂತೆ 11 ಸ್ಥಳಗಳ ಮೇಲೆ ಸೋಮವಾರ ದಾಳಿ ಮಾಡಲಾಯಿತು' ಎಂದೂ ಅವರು ತಿಳಿಸಿದರು.

'ಡಾ. ರಾಹೀಶ್‌ಗೆ ಸೇರಿದ್ದ ಬೆಂಗಳೂರಿನ ಗುರಪ್ಪನಪಾಳ್ಯದಲ್ಲಿರುವ ಮನೆ ಹಾಗೂ ಕೆಂಗೇರಿಯಲ್ಲಿರುವ ಕ್ಲಿನಿಕ್ ಮೇಲೂ ದಾಳಿ ಮಾಡಿ ಪರಿಶೀಲನೆ ನಡೆಸಲಾಯಿತು. ಒಟ್ಟು 11 ಕಡೆ ನಡೆದ ದಾಳಿಯಲ್ಲಿ ಲ್ಯಾಪ್‌ಟಾಪ್, ಮೊಬೈಲ್, ಸೇರಿದಂತೆ ಹಲವು ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಅಧಿಕಾರಿ ವಿವರಿಸಿದರು.

ದಾಳಿ ಸಂಚು, ಐಎಸ್ ಪರ ಪ್ರಚಾರ ಮೂವರ ಬಂಧನ

ನವದೆಹಲಿ: ಸಾಮಾಜಿಕ ಜಾಲತಾಣಗಳಲ್ಲಿ ಇಸ್ಲಾಮಿಕ್ ಸ್ಟೇಟ್ ಪರ ಪ್ರಚಾರ ನಡೆಸುತ್ತಿದ್ದ ಆರೋಪದಡಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಸೋಮವಾರ ಬೆಂಗಳೂರು, ನವದೆಹಲಿ, ಕೇರಳದಲ್ಲಿ 11 ಕಡೆ ದಾಳಿ ನಡೆಸಿದ್ದು, ಮೂವರನ್ನು ಬಂಧಿಸಿದ್ದಾರೆ.

'ಈ ತಂಡವು ವ್ಯಕ್ತಿಗಳನ್ನು ಗುರುತಿಸಿ ಪ್ರಭಾವ ಬೀರುತ್ತಿತ್ತು. ಹತ್ಯೆ ಸಂಚು ಹಾಗೂ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಜಮ್ಮು ಮತ್ತು ಕಾಶ್ಮೀರಕ್ಕೆ ಧಾರ್ಮಿಕ ವಲಸೆಗೆ ಪ್ರೇರೇಪಿಸುವ ಕಾರ್ಯಗಳಿಗೆ ನೆರವಾಗಲು ಕರ್ನಾಟಕ, ಕೇರಳದಲ್ಲಿ ಕೆಲ ಜನರನ್ನೂ ತಂಡದ ನಾಯಕ ಅಮೀನ್ ಗುರುತಿಸಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರನ್ನು ಮೊಹಮ್ಮದ್ ಅಮೀನ್, ಮುಶಾಬ್ ಅನುವರ್, ಡಾ. ರಾಹೀಸ್ ರಶೀದ್ ಎಂದು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ ಎರಡು, ದೆಹಲಿಯಲ್ಲಿ ಒಂದು ಕಡೆ ಮತ್ತು ಕೇರಳದ ಕಣ್ಣೂರು, ಮಲ್ಲಪುರಂ, ಕೊಲ್ಲಂ, ಕಾಸರಗೋಡು ಜಿಲ್ಲೆಗಳಲ್ಲಿ ದಾಳಿ ನಡೆದಿತ್ತು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಇವರು ಇಸ್ಲಾಮಿಕ್ ಸ್ಟೇಟ್ ಪರ ಪ್ರಚಾರ ಮಾಡಲು ಟೆಲಿಗ್ರಾಂ, ಹೂಪ್, ಇನ್‌ಸ್ಟಾಗ್ರಾಂ ವೇದಿಕೆಗಳ ಮೂಲಕ ಹಲವು ಚಾನಲ್‌ಗಳನ್ನು ನಡೆಸುತ್ತಿದ್ದರು. ಹಿಂಸಾ ಮನೋಭಾವದ ಜಿಹಾದ್ ಚಿಂತನೆ ಹೊಂದಿದ್ದು, ತಂಡವನ್ನು ಸೇರುವಂತೆ ವಿವಿಧ ಜನರನ್ನು ಗುರುತಿಸಿ ಪ್ರಚೋದಿಸುತ್ತಿತ್ತು ಎಂದು ಎನ್‌ಐಎ ಅಧಿಕೃತ ಹೇಳಿಕೆ ತಿಳಿಸಿದೆ.

ದೇಶದ ವಿರುದ್ಧ ಯುದ್ಧ ಸಾರುವ ಮತ್ತು ಕ್ರಿಮಿನಲ್ ಸಂಚು ನಡೆಸಿದ್ದ ಸಂಬಂಧ ಎನ್‌ಐಎ ಈ ಹಿಂದೆ ಏಳು ಜನರ ವಿರುದ್ಧ ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆ (ಯುಎಪಿಎ) ಅನ್ವಯ ಮೊಕದ್ದಮೆ ದಾಖಲಿಸಿತ್ತು. ಮಾರ್ಚ್ 2020ರಲ್ಲಿ ಅಮೀನ್ ಬಹರೇನ್‌ನಿಂದ ಭಾರತಕ್ಕೆ ಬಂದಿದ್ದು, ಹಿಂದೆಯೇ ಜಮ್ಮು ಮತ್ತು ಕಾಶ್ಮೀರಕ್ಕೆ ತೆರಳಿದ್ದ. ಕಳೆದ ಎರಡು ತಿಂಗಳಿನಿಂದ ದೆಹಲಿಯಲ್ಲಿ ನೆಲೆಸಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿವಿಧ ಕಡೆ ದಾಳಿ ನಡೆಸಿದ ಸಂದರ್ಭದಲ್ಲಿ ಎನ್‌ಐಎ ಅಧಿಕಾರಿಗಳು, ಲ್ಯಾಪ್‌ಟಾಪ್, ಮೊಬೈಲ್, ಹಾರ್ಡ್‌ಡಿಸ್ಕ್, ಪೆನ್ ಡ್ರೈವ್ಸ್, ಹಲವು ಸಿಮ್ ಕಾರ್ಡ್‌ಗಳು ಹಾಗೂ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಇವುಗಳನ್ನು ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

2021ನೇ ಸಾಲಿನ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ: ಉದ್ಘಾಟನೆ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಾಹಿತಿ ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಪ್ರದಾನ: ಶಾಸಕ ಸತೀಶ್ ರೆಡ್ಡಿ, ಸುದ್ದಿ ವಾಹಿನಿ ಉದ್ಘಾಟನೆ: ಬಿ. ಶಿವಣ್ಣ, ಮುಖ್ಯ ಅತಿಥಿಗಳು: ಸೌಮ್ಯಾ ರೆಡ್ಡಿ, ವಸುಂಧರಾ ಭೂಪತಿ, ಬಿ. ಗೋಪಾಲ್, ಪ್ರೊ.ಎಸ್. ಜಿ. ಸಿದ್ಧರಾಮಯ್ಯ, ಆಯೋಜನೆ: ಭೀಮಪುತ್ರ ಬ್ರಿಗೇಡ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಬೆಳಿಗ್ಗೆ 10.30

ಸಂಪೂರ್ಣವಾಗಿ ಮಹಿಳೆಯರಿಂದ ನಡೆಸಲ್ಪಡುವ ರೆಸ್ಟೋರೆಂಟ್ ಉದ್ಘಾಟನೆ: ಸಚಿವ ಎಸ್. ಅಂಗಾರ, ಮುಖ್ಯ ಅತಿಥಿಗಳು: ಡಾ. ಚೇವಿಲಿಯರ್ ಆರ್. ಅರುಣಾಚಲಮ್, ಮುನಿರತ್ನ, ನಳಿನಿ ಮಂಜುನಾಥ್, ಜಿ.ಎಚ್. ರಾಮಚಂದ್ರ, ಸ್ಥಳ: ಸ್ಮಾರ್ಟ್ ಮುದ್ದೆ ಸ್ಪೈಸಿ ಫಿಶ್ ರೆಸ್ಟೋರೆಂಟ್, 3ನೇ ಹಂತ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿನಗರ, ಮಧ್ಯಾಹ್ನ 12

ನೂತನ ಸರ್ಕಾರಿ ಮಾದರಿ ಉರ್ದು ಪ್ರಾಥಮಿಕ ಶಾಲೆ ಉದ್ಘಾಟನೆ: ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, ಉಪಸ್ಥಿತಿ: ಶಾಸಕ ಕೃಷ್ಣಬೈರೇಗೌಡ, ಮೈಕಲ್ ಹಾಲೆಂಡ್, ನಿರ್ಮಾಣ: ಎಂಬೆಸಿ ಆಫೀಸ್ ಪಾರ್ಕ್ಸ್ ಆರ್‌ಇಐಟಿ ಮತ್ತು ಎಎನ್‌ಜೆಡ್, ಸ್ಥಳ: ಹೆಗಡೆನಗರ, ಮಧ್ಯಾಹ್ನ 2.30

ಬರಗೂರು ರಾಮಚಂದ್ರಪ್ಪ

ಕಸಾಪ ದತ್ತಿ ಪ್ರಶಸ್ತಿ ಪ್ರದಾನ: 'ನಾಗಡಿಕೆರೆ–ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿ': ವಿಶ್ವೇಶ್ವರ ಭಟ್, 'ಮನೋಹರಿ ಪಾರ್ಥಸಾರಥಿ ದತ್ತಿ ಪ್ರಶಸ್ತಿ': ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, 'ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ': ಡಾ.ವೈ.ಕೆ. ಸಂಧ್ಯಾ ಶರ್ಮಾ, ಮುಖ್ಯ ಅತಿಥಿ: ಎಸ್. ಷಡಕ್ಷರಿ, ಪ್ರಶಸ್ತಿ ಪ್ರದಾನ: ಮನು ಬಳಿಗಾರ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀಕೃಷ್ಣರಾಜ ಪರಿಷನ್ಮಂದಿರ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 4.30

ಉಚಿತ ಕಂಪ್ಯೂಟರ್ ಶಿಕ್ಷಣ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ನಿರುದ್ಯೋಗಿ ಯುವಕ-ಯುವತಿಯರಿಗೆ ಮೂರು ತಿಂಗಳ ಉಚಿತ ಕಂಪ್ಯೂಟರ್ ಕಲಿಕಾ ತರಬೇತಿ ಶಿಕ್ಷಣವನ್ನು ಹಮ್ಮಿಕೊಂಡಿದೆ.

ಕನಿಷ್ಠ ಎಸ್ಸೆಸ್ಸೆಲ್ಸಿಯಲ್ಲಿ ತೇರ್ಗಡೆಯಾಗಿರಬೇಕು. 18ರಿಂದ 27 ವರ್ಷದೊಳಗಿನವರಿಗೆ ಆದ್ಯತೆ ನೀಡಲಾಗುತ್ತದೆ. ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನಗಳು ನಡೆಯಲಿದೆ. ಎಂದು ಸಂಸ್ಥೆಯ ನಿರ್ದೇಶಕ ಎಂ. ವೆಂಕಟೇಶ ಶೇಷಾದ್ರಿ ತಿಳಿಸಿದ್ದಾರೆ. ವಿವರಕ್ಕೆ ದೂ.: 080 23440036, 94485 38107

'ಕೆಆರ್‌ಐಡಿಎಲ್‌ಗೆ ಕಾಮಗಾರಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಂಡರ್ ಕರೆಯದೆಯೇ ₹2 ಕೋಟಿ ಮೊತ್ತದವರೆಗಿನ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅನುಷ್ಠಾನಗೊಳಿಸಲು ರಾಜ್ಯಸರ್ಕಾರ ಮುಂದಾಗಿದೆ. ಯಾವುದೇ ಕಾರಣಕ್ಕೂ ಇದಕ್ಕೆ ಅವಕಾಶ ಕೊಡಬಾರದು ಎಂದು ಗುತ್ತಿಗೆದಾರರು ಹೇಳಿದ್ದಾರೆ.

'ಕೆಆರ್‌ಐಡಿಎಲ್‌ಗೆ ಈ ಅನುಕೂಲ ಮಾಡಿಕೊಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಗೆ (ಕೆಟಿಪಿಪಿ ಕಾಯ್ದೆ) ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಈ ಪ್ರಸ್ತಾವಕ್ಕೆ ಹಣಕಾಸು ಇಲಾಖೆ ಮತ್ತು ಕಾನೂನು ಇಲಾಖೆ ವಿರೋಧ ವ್ಯಕ್ತಪಡಿಸಿದ್ದರೂ ಸರ್ಕಾರ ಈ ನಿಟ್ಟಿನಲ್ಲಿ ಮುಂದುವರಿಯುತ್ತಿದೆ' ಎಂದು ಕರ್ನಾಟಕ ರಾಜ್ಯ ಎಸ್‌.ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ದೂರಿದ್ದಾರೆ.

'ಕೆಆರ್‌ಐಡಿಎಲ್ ಸಂಸ್ಥೆಗೆ ಮಾತ್ರ ಈ ರೀತಿ ವಿನಾಯಿತಿ ನೀಡುವುದು ಸಂವಿಧಾನದ 14ನೇ ಅನುಚ್ಛೇದಕ್ಕೆ ವಿರುದ್ಧ. ಸರ್ಕಾರದ ಒಂದು ಅಂಗ ಸಂಸ್ಥೆಗೆ ಇಂತಹ ವಿನಾಯಿತಿ ನೀಡಿದರೆ, ಉಳಿದ ಸಂಸ್ಥೆಗಳಿಗೂ ನೀಡಬೇಕಾಗುತ್ತದೆ. ಕಾಯ್ದೆಯ ಮೂಲ ಉದ್ದೇಶಕ್ಕೂ ಇದರಿಂದ ಧಕ್ಕೆಯಾಗುತ್ತದೆ ಎಂದು ಅಡ್ವೊಕೇಟ್ ಜನರಲ್ ಅಭಿಪ್ರಾಯ ನೀಡಿದ್ದರು. ಇದರ ನಂತರವೂ ಸರ್ಕಾರ ಮತ್ತೊಮ್ಮೆ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯ ಕೇಳಲು ಮುಂದಾಗಿದೆ' ಎಂದು ಹೇಳಿದರು.

'ಗುತ್ತಿಗೆ ಮೀಸಲಾತಿ ಆದೇಶ ದುರ್ಬಲಗೊಳಿಸಲು ಉದ್ದೇಶಪೂರ್ವಕವಾಗಿ ಸರ್ಕಾರ ಈ ರೀತಿ ಮಾಡುತ್ತಿದೆ. ಸರ್ಕಾರದ ಪ್ರಸ್ತಾವಕ್ಕೆ ಕಾನೂನು ಇಲಾಖೆ ವಿರೋಧ ವ್ಯಕ್ತಪಡಿಸಿದ ಮೇಲೆ ಮತ್ತೆ ಅಭಿಪ್ರಾಯ ಕೇಳುವ ಅವಶ್ಯಕತೆ ಏನಿತ್ತು' ಎಂದೂ ಅವರು ಪ್ರಶ್ನಿಸಿದರು.

ಕದ್ದ ಆಭರಣ ಅಡವಿಟ್ಟು ಐಷಾರಾಮಿ ಜೀವನ

ಬೆಂಗಳೂರು: ಒಂಟಿಯಾಗಿ ಓಡಾಡುವ ಮಹಿಳೆಯರನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ಯುತ್ತಿದ್ದ ಆರೋಪದಡಿ ನಾಲ್ವರನ್ನು ಉತ್ತರ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ವಿದ್ಯಾರಣ್ಯಪುರದ ಲಕ್ಷ್ಮೀಪುರ ಕ್ರಾಸ್ ನಿವಾಸಿ ಶಿವರಾಜ್ (23), ಪ್ರಕಾಶ್ ಅಲಿಯಾಸ್ ಪಕ್ಕು (27), ಯಲಹಂಕ ಸೋಮೇಶ್ವರನಗರದ ಪ್ರಸನ್ನ ರಾಜ್ (27) ಹಾಗೂ ಎಂ.ವಿ. ರತ್ನಾ (32) ಬಂಧಿತರು. ಅವರಿಂದ ₹ 10 ಲಕ್ಷ ಮೌಲ್ಯದ 134 ಗ್ರಾಂ ಚಿನ್ನಾಭರಣ, ₹1.50 ಲಕ್ಷ ನಗದು ಹಾಗೂ 2 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ತಿಳಿಸಿದರು.

ಆಭರಣ ಅಡವಿಡುತ್ತಿದ್ದ ಮಹಿಳೆ: 'ಆರೋಪಿಗಳಾದ ಶಿವರಾಜ್, ಪ್ರಸನ್ನರಾಜ್ ಹಾಗೂ ಪ್ರಕಾಶ್, ದ್ವಿಚಕ್ರ ವಾಹನದಲ್ಲಿ ಸುತ್ತಾಡಿ ಒಂಟಿ ಮಹಿಳೆಯರನ್ನು ಗುರುತಿಸಿ ಸರಗಳವು ಮಾಡುತ್ತಿದ್ದರು. ಅವರು ತರುತ್ತಿದ್ದ ಆಭರಣಗಳನ್ನು ರತ್ನಾ ವಿಲೇವಾರಿ ಮಾಡುತ್ತಿದ್ದರು' ಎಂದೂ ಡಿಸಿಪಿ ಧರ್ಮೇಂದ್ರಕುಮಾರ್ ಹೇಳಿದರು.

'ಗಿರವಿ ಅಂಗಡಿಯಲ್ಲಿ ಆಭರಣ ಅಡವಿಡುತ್ತಿದ್ದ ರತ್ನಾ, ಹಣ ಪಡೆದುಕೊಂಡು ಬಂದು ಆರೋಪಿಗಳಿಗೆ ನೀಡುತ್ತಿದ್ದರು. ನಂತರ, ಅದೇ ಆಭರಣ ಬಿಡಿಸಿಕೊಡುವಂತೆ ಕೋರಿ ಅಟ್ಟಿಕಾ ಗೋಲ್ಡ್ ಹಾಗೂ ಜೆ.ಎಸ್. ಗೋಲ್ಡ್ ಸೇರಿದಂತೆ ಹಲವು ಕಂಪನಿ ಪ್ರತಿನಿಧಿಗಳಿಗೆ ಕರೆ ಮಾಡುತ್ತಿದ್ದರು. ಅವರ ಮೂಲಕ ಆಭರಣ ಬಿಡಿಸಿಕೊಂಡು, ಅದೇ ಕಂಪನಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಅದರಿಂದ ಬಂದ ಹಣವನ್ನೂ ಆರೋಪಿಗಳು ಹಂಚಿಕೊಂಡು, ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ತಿಳಿಸಿದರು.

ನಿಧನ ವಾರ್ತೆ

ರಾಮಕೃಷ್ಣ ಗಾಂಧಿ

ಬೆಂಗಳೂರು: ನಿವೃತ್ತ ಔಷಧ ನಿಯಂತ್ರಕ ಎಸ್. ರಾಮಕೃಷ್ಣ ಗಾಂಧಿ (73) ಅವರು ಮಂಗಳವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಬುಧವಾರ ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಪತ್ರಕರ್ತ ಎಂ.ಕೆ. ಮಧುಸೂಧನ್



ಬೆಂಗಳೂರು: ಹಿರಿಯ ಪತ್ರಕರ್ತ ಎಂ.ಕೆ. ಮಧುಸೂಧನ್ (63) ಹೃದಯಾಘಾತದಿಂದ ಮಂಗಳವಾರ ನಿಧನರಾದರು.

ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ.

ದಿ ಟೈಮ್ಸ್ ಆಫ್ ಡೆಕ್ಕನ್, ಇಂಡಿಯಾ ಇನ್ಫೋ, ಡಿಎನ್‌ಎ ಹಾಗೂ ಟೈಮ್ಸ್ ಆಫ್ ಇಂಡಿಯಾದಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿಯಾಗಿದ್ದರು.

ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ 10.30ಕ್ಕೆ ಕೊಮ್ಮಘಟ್ಟ ರಸ್ತೆಯಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನಡೆಯಲಿದೆ.

ಕೋವಿಡ್ ಪ್ರಕರಣ ಏರಿಕೆ ಹಿನ್ನೆಲೆ

ಚಲನಚಿತ್ರೋತ್ಸವ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಾರ್ಚ್ 24ರಿಂದ 31ರವರೆಗೆ ಹಮ್ಮಿಕೊಳ್ಳಲು ಉದ್ದೇಶಿಸಿದ್ದ 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಕೋವಿಡ್ ಕಾರಣದಿಂದಾಗಿ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಲ್ಲಿ ಈ ಉತ್ಸವ ಪ್ರತಿ ವರ್ಷ ನಡೆಯುತ್ತದೆ.

ಆರೋಗ್ಯ ಇಲಾಖೆ ನೀಡಿದ ಎಚ್ಚರಿಕೆಯ ಹಿನ್ನೆಲೆಯಲ್ಲಿ ವಾರ್ತಾ ಇಲಾಖೆಯ ಹಿರಿಯ ಅಧಿಕಾರಿಗಳು, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಜತೆ ಸಭೆ ನಡೆಸಿದರು.

ಕೋವಿಡ್ ಹಾವಳಿ ಸಂಪೂರ್ಣ ನಿಯಂತ್ರಣಕ್ಕೆ ಬಂದ ಬಳಿಕ ಚಿತ್ರೋತ್ಸವ ಹಮ್ಮಿಕೊಳ್ಳಲಾಗುವುದು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು. ಅದರಂತೆ ಚಿತ್ರೋತ್ಸವವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿ ಸರ್ಕಾರದ ಅಧೀನ ಕಾರ್ಯದರ್ಶಿ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ) ಎಂ.ಜೆಸಿಂತ ಅವರು ಆದೇಶ ಹೊರಡಿಸಿದ್ದಾರೆ.

ಚಿತ್ರೋತ್ಸವದ ಉದ್ಘಾಟನೆ ಮತ್ತು ಸಮಾರೋಪಕ್ಕೆ ರಾಜ್ಯ ಸರ್ಕಾರ ಅತಿಯಾಗಿ ವೆಚ್ಚ ಮಾಡುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿ ವಿಧಾನ ಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ ಅವರು ಅಧಿವೇಶನದಲ್ಲಿ ಪ್ರಶ್ನಿಸಿದ್ದರು. ಈ ವರ್ಷದ ಚಿತ್ರೋತ್ಸವಕ್ಕಾಗಿ ₹ 7.79 ಕೋಟಿ ಮೀಸಲಿರಿಸಲಾಗಿದೆ ಎಂದು ಸರ್ಕಾರ ಉತ್ತರಿಸಿದ್ದು, ದುಂದುವೆಚ್ಚ ಮಾಡುತ್ತಿಲ್ಲ ಎಂದು ಸ್ಪಷ್ಟನೆ ನೀಡಿದೆ.

ಈಗ ಚಿತ್ರೋತ್ಸವ ಅನಿರ್ದಿಷ್ಟಾವಧಿ ಮುಂದೂಡಿಕೆ ಆಗಿರುವುದರಿಂದ ನಿಗದಿಪಡಿಸಿದ ಬಜೆಟ್‌ನಲ್ಲೂ ವ್ಯತ್ಯಾಸವಾಗುವ ಸಾಧ್ಯತೆ ಇದೆ ಎಂದು ಸಂಘಟಕರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಜೆಪಿ ರಥಯಾತ್ರೆ ಬಸ್ ಧ್ವಂಸ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಪುರುಲಿಯಾದಲ್ಲಿ ಮಂಗಳವಾರ ಬಿಜೆಪಿ ರಥಯಾತ್ರೆಯ ಬಸ್ ಒಂದನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿದ್ದಾರೆ. ದಾಳಿಯಿಂದ ಬಸ್‌ನ ಮುಂಭಾಗದ ಗಾಜು ಪುಡಿಯಾಗಿದ್ದು, ಚಾಲಕನಿಗೆ ಗಾಯವಾಗಿದೆ.

'ದಾಳಿಗೆ ಟಿಎಂಸಿ ಕಾರ್ಯಕರ್ತರೇ ಕಾರಣ, ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರಗಳಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ಹೊಣೆಗಾರರು' ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಆರೋಪಿಸಿದ್ದಾರೆ.

'ಬೆಲೆ ಏರಿಕೆ: ಮಹಿಳೆಗೆ ಹೆಚ್ಚು ಕಷ್ಟ'

ಬೆಂಗಳೂರು: 'ಕೊರೊನಾ ನಂತರ ಆರ್ಥಿಕವಾಗಿ ಜಗತ್ತೇ ಸಂಕಷ್ಟಕ್ಕೆ ಈಡಾಗಿದೆ. ಈಗ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಮಹಿಳೆಯರು ಹೆಚ್ಚು ಕಷ್ಟ ಅನುಭವಿಸುತ್ತಿದ್ದಾರೆ' ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಎ. ಶಾಂತಾ ದೂರಿದ್ದಾರೆ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ-584115, ಲಿಂಗಸುಗೂರು-ತಾ. ರಾಯಚೂರು ಜಿಲ್ಲೆ, ಕರ್ನಾಟಕ

ದೂ: 08537-275740/276339/275463 ಇ-ಮೇಲ್: material276339@gmail.com, www.huttigold.co.in

ಟೆಂಡರ್ ಪ್ರಕಟಣೆ ನಂ. 61/ 20-21 ದಿನಾಂಕ: 17.03.2021

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು) ಇವರಿಂದ ಈ ಕೆಳಗಿನ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತಯಾರಕರು ಮತ್ತು ಪರಿಗಣಿಸಲ್ಪಟ್ಟ ವಿತರಕರಿಂದ ಆಹ್ವಾನಿಸಿದ್ದಾರೆ.

ಕ್ರ. ಸಂ.	ಸಾಮಗ್ರಿ ವಿವರ	ಪ್ರಮಾಣ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)
1	ತೊಗರಿಬೇಳೆ (ಪಟಕಾ) ಪೂರೈಸುವುದು 2.ಕೆಜಿ ಸ್ಯಾಂಪಲ್ ಕೊಡುವುದು ಹಂತ ಹಂತವಾಗಿ ಪೂರೈಸುವುದು. HGML/2020-21/INDENT3067	25,500 ಕೆಜಿ	26.68
2	300 MM ERW ಪೈಪ್ ಮತ್ತು ಪೈಪ್ ಫಿಟ್ಟಿಂಗ್ ಪೂರೈಸುವುದು HGML/2020-21/INDENT3039	ಪಟ್ಟಿಯ ಪ್ರಕಾರ	56.24
3	GM ವೀಲ್ ವಾಲ್ವ್ ಪೂರೈಸುವುದು HGML/2020-21/INDENT2928	ಪಟ್ಟಿಯ ಪ್ರಕಾರ	15.26
4	ಫ್ಲೋಕ್ಯುಲಂಟ್ ಪೂರೈಸುವುದು. HGML/2020-21/INDENT3064	9000 ಕೆಜಿ	17.55

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 31.03.2021, ಸಂಜೆ 4.00 ಗಂಟೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 03.04.2021, ಬೆಳಿಗ್ಗೆ 10.00 ಗಂಟೆಗೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲಸಿಕೆ ಪಡೆದ 107 ವರ್ಷದ ವೃದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಫೋರ್ಟಿಸ್ ಆಸ್ಪತ್ರೆಯಲ್ಲಿ 107 ವರ್ಷದ ವೃದ್ಧರೊಬ್ಬರು ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಈವರೆಗೆ ದೇಶದಲ್ಲಿ ಲಸಿಕೆ ಪಡೆದವರಲ್ಲಿ ಇವರು ಹಿರಿಯ ವ್ಯಕ್ತಿ ಎನ್ನಲಾಗಿದೆ.

ಕೇವಲ್ ಕಿಶನ್ ಎಂಬುವರು ಲಸಿಕೆ ಪಡೆದ ವ್ಯಕ್ತಿಯಾಗಿದ್ದು, ಇವರಿಗೆ 105ನೇ ವರ್ಷದಲ್ಲಿ ಪಾರ್ಶ್ವವಾಯು ಸಮಸ್ಯೆ ಕಾಣಿಸಿಕೊಂಡಿತ್ತು. ಆ ವೇಳೆ ಅವರ ಮಿದುಳಿನ ಎಡಭಾಗದ ರಕ್ತನಾಳಕ್ಕೆ ಸ್ಟೆಂಟ್ ಅಳವಡಿಕೆ ಮಾಡಲಾಗಿತ್ತು. ಈಗ ಆರೋಗ್ಯದಿಂದ ಇರುವ ಅವರು, ಕುಟುಂಬದ ಸದಸ್ಯರೊಂದಿಗೆ ಬಂದು ಲಸಿಕೆ ಪಡೆದುಕೊಂಡಿದ್ದಾರೆ. 30 ನಿಮಿಷಗಳು ಅವರ ಆರೋಗ್ಯದ ಮೇಲೆ ವಿಶೇಷ ನಿಗಾ ಇರಿಸಲಾಗಿತ್ತು. ಈ ವೇಳೆ ಅವರಲ್ಲಿ ಯಾವುದೇ ಅಡ್ಡ ಪರಿಣಾಮ ಕಾಣಿಸಿಕೊಂಡಿಲ್ಲ ಎಂದು ಆಸ್ಪತ್ರೆ ತಿಳಿಸಿದೆ.

‘107 ವರ್ಷದಲ್ಲೂ ಆಸ್ಪತ್ರೆಗೆ ಬಂದು ಲಸಿಕೆ ಪಡೆಯುವ ಮೂಲಕ ಅವರು ಮಾದರಿಯಾಗಿದ್ದು, ಲಸಿಕೆ ಪಡೆದ ಕ್ಷಣ ವೀಕ್ಷಿಸುವುದು ಹೃದಯ ಸ್ಪರ್ಶಿಯಾಗಿತ್ತು. ಲಸಿಕೆಯಿಂದ ಅವರಿಗೆ ಯಾವುದೇ ಅಡ್ಡಪರಿಣಾಮಗಳು ಆಗಿಲ್ಲ. ಈ ಹಿಂದೆ ಅವರು ಪಾರ್ಶ್ವವಾಯುವಿಗೆ ಒಳಗಾಗಿದ್ದ ಸಂದರ್ಭದಲ್ಲಿ ಮಿದುಳಿನ ಎಡಭಾಗಕ್ಕೆ ರಕ್ತ ಪೂರೈಸುವ ಪ್ರಮುಖ ರಕ್ತನಾಳಕ್ಕೆ ಶೇ 95ರಷ್ಟು ಅಡ್ಡಿ ಉಂಟಾಗಿತ್ತು. ಅದಕ್ಕಾಗಿ ಅವರಿಗೆ ಕ್ಯಾರೋಟಿಡ್ ಆರ್ಟರಿ ಸ್ಟೆಂಟ್ ಅಳವಡಿಕೆ ಮೂಲಕ ಚಿಕಿತ್ಸೆ ನೀಡಲಾಗಿತ್ತು. ನಂತರದಲ್ಲಿ ಅವರ ಆರೋಗ್ಯದಲ್ಲಿ ಬಹಳಷ್ಟು ಚೇತರಿಕೆ ಕಂಡು ಬಂದಿದೆ’ ಎಂದು ಫೋರ್ಟಿಸ್ ಎಸ್ಕಾರ್ಟ್ಸ್ ಹಾರ್ಟ್ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಡಾ. ಅಶೋಕ್ ಸೇಠ್ ತಿಳಿಸಿದ್ದಾರೆ.

ಡಾ. ಅಶೋಕ್ ಸೇಠ್ ಸಮ್ಮುಖದಲ್ಲಿ 107 ವರ್ಷದ ಕೇವಲ್ ಕಿಶನ್ ಲಸಿಕೆ ಪಡೆದುಕೊಂಡರು

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,12,699 ಒಟ್ಟು ಸೋಂಕಿತರು

4,01,339 ಗುಣಮುಖರಾದವರು

6,832 ಸಕ್ರಿಯ ಪ್ರಕರಣ

4,527 ಸಾವು

ಮಂಗಳವಾರದ ಏರಿಕೆ

710 ದೃಢಪಟ್ಟ ಪ್ರಕರಣ

329 ಗುಣಮುಖ

03 ಸಾವು

ಡಯಾಲಿಸಿಸ್ ರೋಗಿಗಳಿಗೆ ಉಚಿತ ಲಸಿಕೆ

ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಕೋವಿಡ್ ಲಸಿಕೆ ನೀಡುವುದಾಗಿ ರೀಗಲ್ ಆಸ್ಪತ್ರೆ ಘೋಷಿಸಿದೆ. 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ 45ರಿಂದ 59 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಿಗೆ ಲಸಿಕೆ ನೀಡಲಾಗುತ್ತಿದೆ. ಇವರಲ್ಲಿ ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಲಸಿಕೆ ಒದಗಿಸಲಾಗುವುದು. ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಸೇವೆ ಲಭ್ಯ ಇರುತ್ತದೆ ಎಂದು ಆಸ್ಪತ್ರೆ ತಿಳಿಸಿದೆ.

ಹೆಸರು ನೋಂದಾಯಿಸಿಕೊಳ್ಳಲು ದೂರವಾಣಿ ಸಂಖ್ಯೆ: 8884048888.

ಕೋವಿಡ್: 82 ಸಾವಿರ ಮಂದಿಗೆ ಲಸಿಕೆ ವಿತರಣೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 1,983 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 82,038 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ.

ಇವರಲ್ಲಿ 53,896 ಮಂದಿ ಹಿರಿಯ ನಾಗರಿಕರು ಸೇರಿದ್ದಾರೆ. ಲಸಿಕೆ ಪಡೆದವರಲ್ಲಿ ಒಬ್ಬರಿಗೆ ಗಂಭೀರ ಸ್ವರೂಪದ ಅಡ್ಡ ಪರಿಣಾಮ ಕಾಣಿಸಿಕೊಂಡಿದೆ. ಚಿಕ್ಕಬಳ್ಳಾಪುರದಲ್ಲಿ 70 ವರ್ಷದ ವೃದ್ಧರೊಬ್ಬರು ಮಾ.8ರಂದು ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಪಡೆದುಕೊಂಡಿದ್ದರು. ಬಳಿಕ ಅವರಿಗೆ ಜ್ವರ, ಕೆಮ್ಮು, ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಅವರನ್ನು ಬೆಂಗಳೂರಿನ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಈವರೆಗೆ ಲಸಿಕೆ ಪಡೆದವರಲ್ಲಿ ಒಟ್ಟು 24 ಮಂದಿಯಲ್ಲಿ ಅಡ್ಡ ಪರಿಣಾಮ ಕಾಣಿಸಿಕೊಂಡಿದೆ.

ಈವರೆಗೆ 16.35 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 4.94 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 2.97 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 5.20 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 1.14 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.





ಸಿ.ಡಿ ವಿವಾದ: ಬಿಜೆಪಿ–ಕಾಂಗ್ರೆಸ್ ಟ್ವೀಟ್ ಜಗಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸದ ಆಮಿಷವೊಡ್ಡಿದ್ದ ಮಾಜಿ ಸಚಿವ ರಮೇಶ ಜಾರಕಿಹೊಳಿ ಯುವತಿಯೊಬ್ಬಳನ್ನು ಲೈಂಗಿಕವಾಗಿ ದುಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ಸಿ.ಡಿ ವಿವಾದದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಂಗಳವಾರ ಟ್ವೀಟರ್‌ನಲ್ಲಿ ತೀವ್ರ ವಾಕ್ಸಮರ ನಡೆಯಿತು.

'ಆ ಘಟನೆಯ (ಸಿ.ಡಿ ಪ್ರಕರಣ) ಹಿಂದೆ ಭ್ರಷ್ಟಾಚಾರದ ಆರೋಪಿಯೊಬ್ಬರು, ಜೈಲಿನಿಂದ ಜಾಮೀನಿನ ಮೇಲೆ ಹೊರಗಡೆ ಬಂದಿರುವ ಮತ್ತು ಒಬ್ಬ ಮಹಾ ನಾಯಕನ ಕೈವಾಡ ಇದೆ ಎಂಬ ಸುದ್ದಿ ಇದೆ. ಆ ಮಹಾ ನಾಯಕ ಕೂಡ ತನ್ನನ್ನು ಸಿಲುಕಿಸುವ ಕುತಂತ್ರ ನಡೆಯುತ್ತಿದೆ ಎಂದು ಹೇಳಿ ಮುಟ್ಟಿ ನೋಡಿಕೊಂಡಿದ್ದಾರೆ. ರಾಹುಲ್ ಗಾಂಧಿ ಏಕೆ ಸುಮ್ಮನೆ ದೇವರಂತೆ ಮೌನವಾಗಿದ್ದಾರೆ? ಒಮ್ಮೆಯೂ ಧ್ವನಿ ಎತ್ತಿಲ್ಲ' ಎಂದು ಬಿಜೆಪಿ ರಾಜ್ಯ ಘಟಕ ಟ್ವೀಟರ್‌ನಲ್ಲಿ ಪ್ರಶ್ನಿಸಿದೆ.

'ಈ ಪ್ರಕರಣದಲ್ಲಿ ನನ್ನ ಹೆಸರು ಬರುತ್ತಿದೆ ಎಂದು ಮಹಾ ನಾಯಕ ಯೊಬ್ಬರು ಹೇಳಿದ್ದಾರೆ. ಬೆಂಕಿ ಇಲ್ಲದ ಹೊಗೆಯಾಡುವುದೇ? ಪಕ್ಷ ತೊರೆದವರ ವಿರುದ್ಧ ಕಾಂಗ್ರೆಸ್ ಹಗೆತನ ಸಾಧಿಸುತ್ತಿದೆ' ಎಂದು ಬಿಜೆಪಿ ಆರೋಪಿಸಿದೆ.

ಕಾಂಗ್ರೆಸ್ ತಿರುಗೇಟು: ಬಿಜೆಪಿಯ ಟ್ವೀಟ್‌ಗಳಿಗೆ ಟ್ವಿಟರ್‌ನಲ್ಲೇ ತಿರುಗೇಟು ನೀಡಿರುವ ಕಾಂಗ್ರೆಸ್, 'ಜಾಮೀನಿನ ಮೇಲೆ ಜೈಲಿನಿಂದ ಹೊರ ಬಂದಿರುವ ಭ್ರಷ್ಟಾಚಾರದ ಆರೋಪಿ ಮಹಾ ನಾಯಕ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರತ್ತ ಏಕೆ ಗುರಿ ಇಟ್ಟಿದ್ದೀರಿ? ವಿಜಯೇಂದ್ರ ಸಿ.ಡಿ ಫ್ಯಾಕ್ಟರಿ ಮೂಲಕ ಬ್ಲ್ಯಾಕ್‌ಮೇಲ್ ಮಾಡುತ್ತಾರೆ ಎಂಬ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಯನ್ನು ಪರೋಕ್ಷವಾಗಿ ಹೇಳುತ್ತಾ ಅಭಿಯಾನ ಮುಂದುವರಿಸುತ್ತೀರಾ' ಎಂದು ಕೇಳಿದೆ.

'ನಿಮ್ಮ ಶ್ರೀನಿವಾಸ್ ಪ್ರಸಾದ್ ಹೇಳಿದಂತೆ ನಿಮ್ಮದು ವಾಮಮಾರ್ಗದ ಸರ್ಕಾರ. ನಿಮ್ಮವರೇ ಹೇಳಿದಂತೆ ಬ್ಲ್ಯಾಕ್‌ಮೇಲ್ ಸಂಪುಟ. ಹನಿಟ್ರ್ಯಾಪ್ ಮೂಲಕವೇ ಆಪರೇಷನ್ ಕಮಲ ನಡೆಸಲಾಗಿದೆ. ಯತ್ನಾಳ್ ಆರೋಪಿಸಿದಂತೆ ಯಡಿಯೂರಪ್ಪ ಕುಟುಂಬದ ಸರ್ಕಾರ. 'ದಂಡ'ದ ಸರ್ಕಾರಕ್ಕೆ 'ಮಾನ' ಎಲ್ಲಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

ರಮೇಶ ಜಾರಕಿಹೊಳಿ ಪ್ರಕರಣದಲ್ಲಿ ಸರ್ಕಾರ ಯುವತಿಗೆ ರಕ್ಷಣೆ ಒದಗಿಸುವುದೆ ಅಥವಾ ಮಹಿಳಾ ವಿರೋಧಿ ಧೋರಣೆ ಮುಂದುವರಿಸುವುದೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಸಿ.ಡಿ ಪ್ರಕರಣ: ರಮೇಶ ಮನೆಗೇ ತೆರಳಿ ಹೇಳಿಕೆ ದಾಖಲಿಸಿಕೊಂಡ ವಿಶೇಷ ತನಿಖಾ ತಂಡ

₹5 ಕೋಟಿಗೆ ಬ್ಲ್ಯಾಕ್‌ಮೇಲ್: ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ರಮೇಶ ಅವರ ಹೇಳಿಕೆಯನ್ನು ಸೋಮವಾರ ರಾತ್ರಿ ದಾಖಲಿಸಿಕೊಂಡಿದ್ದಾರೆ.

ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಆಧರಿಸಿ ತನಿಖೆ ನಡೆಸುತ್ತಿರುವ ಅಧಿಕಾರಿಗಳು, ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಶಂಕಿತರ ಹೇಳಿಕೆಯನ್ನು ಪಡೆಯುತ್ತಿದ್ದಾರೆ. ದೂರುದಾರ ರಮೇಶ ಹೇಳಿಕೆಯನ್ನೂ ಸದಾಶಿವನಗರದಲ್ಲಿರುವ ಅವರ ಮನೆಯಲ್ಲಿ ಪಡೆದುಕೊಂಡು ತನಿಖೆ ಮುಂದುವರಿಸಿದ್ದಾರೆ.

ರಮೇಶ ಹೇಳಿದ್ದೇನು: 'ಯುವತಿ ಜತೆಗಿನ ನಕಲಿ ವಿಡಿಯೊ ಮುಂದಿಟ್ಟು ಬ್ಲ್ಯಾಕ್‌ಮೇಲ್ ಮಾಡಿದ್ದ ತಂಡ, ನನ್ನಿಂದ ಸ್ವಲ್ಪ ಹಣ ಸುಲಿಗೆ ಮಾಡಿತ್ತು. ನಾನು ಹೆದರಿದ್ದನ್ನೇ ಬಂಡವಾಳ ಮಾಡಿಕೊಂಡಿದ್ದ ತಂಡ, ಮೊದಲು ₹5 ಕೋಟಿ ಕೇಳಿ, ಬಳಿಕ ದೊಡ್ಡ ಮೊತ್ತಕ್ಕೆ ಬೇಡಿಕೆ ಇಟ್ಟಿತ್ತು. ಕೇಳಿದಷ್ಟು ಹಣ ನೀಡಲಿಲ್ಲವೆಂದು ತಂಡದ ಸದಸ್ಯರು ಸಂಚು ರೂಪಿಸಿ ಸಿ.ಡಿ ಬಹಿರಂಗಪಡಿಸಿದ್ದಾರೆ' ಎಂದು ರಮೇಶ ಹೇಳಿಕೆಯಲ್ಲಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

'ನನ್ನ ಆಪ್ತರಲ್ಲಿ ಒಬ್ಬರಾದ ಮಾಜಿ ಶಾಸಕ ಎಂ.ವಿ.ನಾಗರಾಜ್ ಅವರನ್ನು ಸಂಪರ್ಕಿಸಿದ್ದ ತಂಡದ ಸದಸ್ಯರು, 'ರಮೇಶ ಜಾರಕಿಹೊಳಿ ಅವರ ಸಿ.ಡಿ ನಮ್ಮ ಬಳಿ ಇದೆ. ಅದನ್ನು ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತೇವೆ. ಆ ರೀತಿ ಮಾಡಬಾರದೆಂದರೆ ಹಣ ಕೊಡಿಸಿ' ಎಂದಿದ್ದರು. ನನ್ನನ್ನು ರಾಜಕೀಯವಾಗಿ ಮುಗಿಸಲು ಸಂಚು ರೂಪಿಸುತ್ತಿರುವ ಹಾಗೂ ನಕಲಿ ವಿಡಿಯೊ ಸೃಷ್ಟಿಸಿ ತೇಜೋವಧೆ ಮಾಡಲು ಪ್ರಯತ್ನಿಸುತ್ತಿದ್ದ ತಂಡದ ಬಗ್ಗೆ ನಾಗರಾಜ್ ಗಮನಕ್ಕೆ ತಂದಿದ್ದರು. ಸುಮ್ಮನೇ ಏಕೆ ಮರ್ಯಾದೆ ಕಳೆದುಕೊಳ್ಳುವುದು ಎಂದು ಸ್ವಲ್ಪ ಹಣವನ್ನು ಆರೋಪಿಗಳಿಗೆ ಕೊಟ್ಟಿದ್ದೆ.'

'ಹಣದ ರುಚಿ ಹತ್ತುತ್ತಿದ್ದಂತೆ ಆರೋಪಿಗಳು ಪುನಃ ಕೋಟ್ಯಂತರ ರೂಪಾಯಿಗೆ ಬೇಡಿಕೆ ಇಟ್ಟಿದ್ದರು. ಹಣ ಕೊಡಲು ನಿರಾಕರಿಸಿದ್ದೆ. ಅದೇ ಸಿ.ಡಿ ಇಟ್ಟುಕೊಂಡು ತಂಡದ ಸದಸ್ಯರು, ಎದುರಾಳಿಗಳ ಬಳಿ ಹೋಗಿರಬಹುದು. ಅವರಿಂದ ಕೋಟ್ಯಂತರ ರೂಪಾಯಿ ಹಣ ಪಡೆದು ಸಿ.ಡಿ ಬಿಡುಗಡೆ ಮಾಡಿರುವ ಅನುಮಾನವೂ ಇದೆ. ಇದರಲ್ಲಿ ಮಹಾನಾಯಕನ ಪಾತ್ರವೂ ಇರಬಹುದು. ಪ್ರಕರಣದ ಬಗ್ಗೆ ಸೂಕ್ತ ತನಿಖೆ ಮಾಡಿ' ಎಂದು ಹೇಳಿಕೆಯಲ್ಲಿ ರಮೇಶ ತಿಳಿಸಿರುವುದಾಗಿ ಗೊತ್ತಾಗಿದೆ.

ಜಾಹೀರಾತು ಕಂಪನಿಗೆ ನೋಟಿಸ್?

ವಿಡಿಯೊ ಸಂಕಲನ ಮಾಡಿದ್ದಾರೆ ಎನ್ನಲಾದ ಜಾಹೀರಾತು ಕಂಪನಿಯೊಂದರ ಮಾಲೀಕರಿಗೆ ಎಸ್‌ಐಟಿ ನೋಟಿಸ್ ನೀಡಿದೆ.

ಕುಮಾರಕೃಪಾ ರಸ್ತೆಯಲ್ಲಿರುವ ಜಾಹೀರಾತು ಕಂಪನಿ ಮೇಲೆ ಇತ್ತೀಚೆಗಷ್ಟೇ ಎಸ್‌ಐಟಿ ಅಧಿಕಾರಿಗಳು ದಾಳಿ ಮಾಡಿದ್ದರು. ಕಂಪ್ಯೂಟರ್, ಹಾರ್ಡ್‌ಡಿಸ್ಕ್ ಸೇರಿದಂತೆ ಹಲವು ದಾಖಲೆಗಳನ್ನು ಜಪ್ತಿ ಮಾಡಿದ್ದರು. ಇದೀಗ ಅದೇ ಕಂಪನಿ ಮಾಲೀಕರಿಗೆ ನೋಟಿಸ್ ನೀಡಿದ್ದು, ತುರ್ತಾಗಿ ವಿಚಾರಣೆಗೆ ಹಾಜರಾಗುವಂತೆ ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರವೂ ಇಬ್ಬರನ್ನು ವಿಚಾರಣೆಗೆ ಒಳಪಡಿಸಿದ ಅಧಿಕಾರಿಗಳು, ಪ್ರಕರಣದ ಪ್ರಮುಖ ಆರೋಪಿಗಳು ಎನ್ನಲಾದ ವ್ಯಕ್ತಿಗಳ ಬಗ್ಗೆ ಮಾಹಿತಿ ಕಲೆಹಾಕಿದರು.

ಭುವನಹಳ್ಳಿಗೆ ಎಸ್‌ಐಟಿ ತಂಡ

ಶಿರಾ: ತಾಲ್ಲೂಕಿನ ಭುವನಹಳ್ಳಿ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ ಎಸ್‌ಐಟಿ ಅಧಿಕಾರಿಗಳು, ಸುದ್ದಿವಾಹಿನಿ ವರದಿಗಾರ ನರೇಶ್ ಗೌಡ ಅವರ ಪತ್ನಿಯ ವಿಚಾರಣೆ ನಡೆಸಿದ್ದಾರೆ.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧ ಪಟ್ಟಿದೆ ಎನ್ನಲಾದ ಸಿ.ಡಿ ಪ್ರಕರಣದಲ್ಲಿ ನರೇಶ್ ಗೌಡ ಹೆಸರು ಕೇಳಿ ಬರುತ್ತಿದೆ. ಶುಕ್ರವಾರ (ಮಾ.12) ರಾತ್ರಿ ಎಸ್‌ಐಟಿ ಅಧಿಕಾರಿಗಳು ಭುವನಹಳ್ಳಿಗೆ ಭೇಟಿ ನೀಡಿದ್ದರು. ಆ ಸಮಯದಲ್ಲಿ ನರೇಶ್ ಗೌಡ ಮನೆಯಲ್ಲಿ ಇರಲಿಲ್ಲ. ಆತನ ಪತ್ನಿ ಹಾಗೂ ತಾಯಿಯ ಬಳಿ ಮಾಹಿತಿ ಪಡೆದು ತೆರಳಿದ್ದರು.

ಬೆಂಗಳೂರಿನ ಬಸವನಗುಡಿಯಲ್ಲಿರುವ ಪೊಲೀಸ್ ಠಾಣೆಗೆ ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ನರೇಶ್ ಗೌಡ ಪತ್ನಿಗೆ ಎಸ್‌ಐಟಿ ಸೋಮವಾರ ನೋಟಿಸ್ ನೀಡಿತ್ತು.

ಎಸ್‌ಐಟಿ ನೋಟಿಸ್ ಜಾರಿ ಮಾಡಿದ್ದರೂ ಅವರು ವಿಚಾರಣೆಗೆ ಹಾಜರಾಗಿರಲಿಲ್ಲ. ಇವರ ಪರ ವಕೀಲರು ಹಾಜರಾಗಿ ಮಗು ಮತ್ತು ಅವರ ಅತ್ತೆ ಆರೋಗ್ಯ ಸರಿ ಇಲ್ಲದ ಕಾರಣ ವಿಚಾರಣೆಗೆ ಬರಲು ಕಾಲಾವಕಾಶ ನೀಡುವಂತೆ ಮನವಿ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಮಂಗಳವಾರ ಸಂಜೆ ಎಸ್‌ಐಟಿ ತಂಡವೇ ಭುವನಹಳ್ಳಿಗೆ ಮಹಿಳಾ ಸಿಬ್ಬಂದಿ ಜೊತೆ ಬಂದಿದ್ದು, ಸುಮಾರು 2 ಗಂಟೆ ವಿಚಾರಣೆ ನಡೆಸಿ ಮಾಹಿತಿ ಪಡೆದಿದ್ದಾರೆ.

ಪುತ್ರಿ ಅಪಹರಣ: ತಂದೆಯಿಂದ ದೂರು

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಯಲ್ಲಿರುವ ಯುವತಿಯನ್ನು ಬೆಂಗಳೂರಿನಲ್ಲಿ ಯಾರೋ ಅಪಹರಿಸಿ, ಕಿರುಕುಳ ನೀಡುತ್ತಿದ್ದಾರೆ ಎಂದು ಆಕೆಯ ತಂದೆ ಇಲ್ಲಿನ ಎಪಿಎಂಸಿ ಪೊಲೀಸ್ ಠಾಣೆಗೆ ಮಂಗಳವಾರ ದೂರು ನೀಡಿದ್ದಾರೆ.

ಪೊಲೀಸರು, ಐಪಿಸಿ ಸೆಕ್ಷನ್ 363, 368, 343, 346, 354, 354ಎ ಹಾಗೂ 506ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದೂರಿನಲ್ಲೇನಿದೆ?: 'ಪುತ್ರಿಯು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ಪಿ.ಜಿ.ಯಲ್ಲಿ ಇರುತ್ತಿದ್ದಳು. ರಜೆ ಇದ್ದಾಗ ಮನೆಗೆ ಬಂದು ಹೋಗುತ್ತಿದ್ದಳು. ಇತ್ತೀಚೆಗೆ ಟಿ.ವಿ. ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಅಶ್ಲೀಲ ವಿಡಿಯೊ ಹರಿಬಿಟ್ಟಿದ್ದು, ಅದರಲ್ಲಿ ನಮ್ಮ ಮಗಳಂತೆ ಕಾಣುವ ಯುವತಿಯು ವ್ಯಕ್ತಿಯೊಂದಿಗೆ ಅಶ್ಲೀಲವಾಗಿ ವರ್ತಿಸುತ್ತಿದ್ದುದ್ದನ್ನು ನೋಡಿ ಗಾಬರಿಯಾಯಿತು. ಈ ವಿಷಯವಾಗಿ ಪುತ್ರಿಯನ್ನು ಸಂಪರ್ಕಿಸಿದಾಗ, 'ವಿಡಿಯೊದಲ್ಲಿರುವುದು ನಾನಲ್ಲ. ನನ್ನಂತೆ ಕಾಣುವಂತೆ ವಿಡಿಯೊ ಎಡಿಟ್ ಮಾಡಿ, ನನ್ನ ಧ್ವನಿಯಂತೆ ನಕಲಿ ಧ್ವನಿ ಸೇರಿಸಿ ಹರಿಬಿಟ್ಟಿದ್ದಾರೆ. ಇದರಲ್ಲಿ ನನ್ನ ಪಾತ್ರವೇನೂ ಇಲ್ಲ' ಎಂದು ತಿಳಿಸಿದ್ದಳು. ಕೂಡಲೇ ಮನೆಗೆ ಬಾ ಎಂದಾಗ ಸುರಕ್ಷಿತವಾಗಿದ್ದೇನೆ ಎಂದು ತಿಳಿಸಿದ್ದಳು'.

'ಸಿ.ಡಿ.ಯು ನಕಲಿ ಎನ್ನುವುದು ಸಾಬೀತಾದ ಮೇಲೆ ಬರುತ್ತೇನೆ ಎಂದಿದ್ದಳು. 2–3 ದಿನ ನಮ್ಮ ಸಂಪರ್ಕದಲ್ಲಿದ್ದಳು. ಮತ್ತೊಮ್ಮೆ ಕರೆ ಮಾಡಿ ಮನೆಗೆ ಬರುವಂತೆ ಕರೆದಾಗ, ಭಯದಲ್ಲಿ ಮಾತನಾಡುತ್ತಿದ್ದಳು. ನಾನು ಸದ್ಯಕ್ಕೆ ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ಎಲ್ಲಿದ್ದೇನೆ ಎನ್ನುವುದೇ ನನಗೆ ಗೊತ್ತಿಲ್ಲ. ಮನೆಗೆ ಬಂದ ಮೇಲೆ ಎಲ್ಲವನ್ನೂ ತಿಳಿಸುತ್ತೇನೆ ಎಂದು ಕರೆ ಕಡಿತಗೊಳಿಸಿದ್ದಳು. ಅವಳಾಗಿಯೇ ಮನೆಗೆ ಬರುತ್ತಾಳೆಂಬ ನಂಬಿಕೆಯಲ್ಲಿ ನಾವಿದ್ದೆವು'.

'3–4 ದಿನಗಳ ಹಿಂದೆ ನನ್ನ ಮಗಳಂತೆ ಕಾಣುವ ಯುವತಿ ಮಾತನಾಡಿದ ವಿಡಿಯೊ ಟಿ.ವಿ.ಗಳಲ್ಲಿ ಬಂದಿತ್ತು. ಆತ್ಮಹತ್ಯೆಗೆ ಯತ್ನಿಸಿದ್ದೇನೆ ಹಾಗೂ ಕುಟುಂಬದವರು ಆತ್ಮಹತ್ಯೆಗೆ ಯತ್ನಿಸಿದ್ದೇವೆ ಎಂದು ಹೇಳಿ ರಕ್ಷಣೆ ಕೋರಿದ್ದನ್ನು ಗಮನಿಸಿದ್ದೇವೆ. ಈ ಅಂಶಗಳನ್ನು ನೋಡಿದಾಗ ಮಗಳನ್ನು ಯಾರೋ ಅಪಹರಿಸಿ, ಒತ್ತೆಯಾಳಾಗಿ ಇರಿಸಿಕೊಂಡು ಒತ್ತಾಯಪೂರ್ವಕವಾಗಿ ಅವಳ ವಿಡಿಯೊ ಮಾಡಿ ಬಿಡುತ್ತಿದ್ದಾರೆ ಎನಿಸುತ್ತದೆ. ಮಗಳ ಮೊಬೈಲ್ ಫೋನ್ ಸ್ವಿಚ್ಡ್‌ಆಫ್ ಆಗಿದ್ದು, ಅವಳನ್ನು ಸಂಪರ್ಕಿಸಲು 7–8 ದಿನಗಳಿಂದಲೂ ಸಾಧ್ಯವಾಗಿಲ್ಲ'.

'ಬೆಂಗಳೂರಿಗೆ ಹೋಗಿ ದೂರು ದಾಖಲಿಸುವುದಕ್ಕೆ ಭಯ ಆಗುತ್ತಿರುವುದರಿಂದ ಇಲ್ಲೇ ಕೊಟ್ಟಿದ್ದೇನೆ. ಮಗಳನ್ನು ಮಾರ್ಚ್ 2ಕ್ಕೂ ಮುನ್ನವೇ ಅಪಹರಿಸಿ ಒತ್ತೆಯಾಳಾಗಿ ಇರಿಸಿಕೊಂಡಿದ್ದಾರೆ. ಆಕೆಯ ಜೀವಕ್ಕೆ ಅಪಾಯವಿದೆ. ನಮಗೆ ರಕ್ಷಣೆ ನೀಡಬೇಕು ಹಾಗೂ ಮಗಳನ್ನು ಹುಡುಕಿಕೊಡಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

'ಮಕ್ಕಳಿಗೆ ಬಾಲ್ಯದಿಂದಲೇ ಲೌಕಿಕ ಶಿಕ್ಷಣದ ಜತೆಗೆ ಧಾರ್ಮಿಕ ಸಂಸ್ಕಾರ ಕಲಿಸುವ ಅಗತ್ಯವಿದೆ'

ಅಂತರ್ಜಾತಿ ವಿವಾಹ ತಡೆಗೆ ಮಾತೃ ಮಂಡಳಿ

ಶಿವಮೊಗ್ಗ: 'ಬ್ರಾಹ್ಮಣ ಹೆಣ್ಣುಮಕ್ಕಳು ಇತರೆ ಜಾತಿ, ಧರ್ಮದ ಯುವಕರನ್ನು ವರಿಸುತ್ತಿರುವ ಕುರಿತು ಗಂಭೀರ ಚಿಂತನೆಯ ಅಗತ್ಯವಿದೆ. ಇಂತಹ ಪ್ರಕರಣಗಳ ತಡೆಗೆ ಕುಟುಂಬದ ಹಿರಿಯರನ್ನು ಒಳಗೊಂಡ ಮಾತೃಮಂಡಳಿ ರಚಿಸಬೇಕು' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಬ್ರಾಹ್ಮಣ ವಿದ್ಯಾರ್ಥಿನಿಲಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶ್ರೀಯಜುಃ ಸಂಹಿತಾಯಾಗ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮನೆಗಳಲ್ಲಿ ನಮ್ಮ ಹೆಣ್ಣುಮಕ್ಕಳ ಸ್ಥಿತಿ ಏನಿದೆ? ಅವರು ಇಂತಹ ಸುಸಂಸ್ಕೃತ ಸಮಾಜ ತೊರೆದು ಬೇರೆ ಸಮಾಜದ ಯುವಕರನ್ನು ವರಿಸಲು ಕಾರಣಗಳೇನು ಎನ್ನುವ ಅಂಶಗಳನ್ನು ಮಾತೃಮಂಡಳಿ ಮೂಲಕ ಅರಿಯಬೇಕಿದೆ. ಗಣನೀಯವಾಗಿ ಇಳಿಕೆಯಾಗುತ್ತಿರುವ ಬ್ರಾಹ್ಮಣರ ಜನಸಂಖ್ಯೆಗೂ ಪರಿಹಾರ ಕಂಡುಕೊಳ್ಳಬೇಕಿದೆ' ಎಂದರು.

ರಾಮಮಂದಿರಕ್ಕೆ ಮತಾಂತರಿಗಳಿಂದಲೇ ಆಪತ್ತು: 'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಇದ್ದ ಅಡೆತಡೆ ನಿವಾರಣೆಯಾಗಿದೆ. ಶೀಘ್ರದಲ್ಲೇ ಮಂದಿರವೂ ಸಿದ್ಧವಾಗಲಿದೆ. ಈಗಿರುವುದು ಅದರ ನಿರ್ವಹಣೆಯ ಸವಾಲು. ಮತಾಂತರ ಹೊಂದುತ್ತಿರುವ ಹಿಂದೂ ಯುವಕರಿಂದಲೇ ಭವಿಷ್ಯದಲ್ಲಿ ಮಂದಿರಕ್ಕೆ ಆಪತ್ತು ಎದುರಾಗಬಹುದು. ಇಂತಹ ಆಪತ್ತುಗಳನ್ನು ನಿವಾರಿಸಲು ಈಗಲೇ ಸಿದ್ಧತೆಗಳು ಆರಂಭವಾಗಬೇಕು. ಮಕ್ಕಳಿಗೆ ದೇವರ ವೇಷಭೂಷಣ ತೊಡಿಸಬೇಕು. ಸಂಸ್ಕಾರ ಧಾರೆ ಎರೆಯಬೇಕು. ಮಾತೃ ಮಂಡಳಿ ಪ್ರಾಥಮಿಕ ಹಂತದಲ್ಲೇ ಇಂತಹ ಜವಾಬ್ದಾರಿ ನಿಭಾಯಿಸಬೇಕು. ಮಕ್ಕಳಲ್ಲಿ ಧರ್ಮ, ಸಂಸ್ಕೃತ ಭಾಷೆಯ ಅಭಿರುಚಿ ಮೂಡಿಸಬೇಕು' ಎಂದು ಕಿವಿಮಾತು ಹೇಳಿದರು.

ಕೃಷ್ಣ ಕೊಲ್ಹಾರ, ಎನ್‌.ಎಸ್‌.ಲೀಲಾಗೆ ಕರ್ನಾಟಕ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕೃಷ್ಣ ಕೊಲ್ಹಾರ

ಎನ್‌.ಎಸ್‌.ಲೀಲಾ

ಶಿವಮೊಗ್ಗ: ಕರ್ನಾಟಕ ಸಂಘದ ಪ್ರಸಕ್ತ ವರ್ಷದ ಜೀವಮಾನ ಸಾಧನೆ ಪ್ರಶಸ್ತಿ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಹಾಗೂ ಡಾ.ಎನ್.ಎಸ್.ಲೀಲಾ ಅವರಿಗೆ ಸಂದಿದೆ.

ವಿಜಯಪುರದ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರನ್ನು ಡಾ.ಶಂಬಾ ಜೋಷಿ ಸಂಶೋಧನಾ ಪ್ರಶಸ್ತಿ ಹಾಗೂ ಬೆಂಗಳೂರಿನ ಡಾ.ಎನ್.ಎಸ್.ಲೀಲಾ ಅವರನ್ನು ಡಾ.ಶಿವರಾಮ ಕಾರಂತ ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕರ್ನಾಟಕ ಸಂಘ 1991ರಿಂದ ಜೀವಮಾನಸಾಧನೆಪ್ರಶಸ್ತಿ, 2003ರಿಂದ ವಿಜ್ಞಾನ ಸಾಹಿತ್ಯ ಪ್ರಸಸ್ತಿ ನೀಡುತ್ತಾ ಬಂದಿದೆ. ಪ್ರಶಸ್ತಿಗಳು ತಲಾ ₹25 ಸಾವಿರ ನಗದು, ಫಲಕ ಒಳಗೊಂಡಿವೆ ಎಂದು ಸಂಘದ ಗೌರವ ಕಾರ್ಯದರ್ಶಿ ಪ್ರೊ.ಎಂ.ಆಶಾಲತಾ ತಿಳಿಸಿದ್ದಾರೆ.

ಹೊಸ ರಸ್ತೆ ನಿರ್ಮಾಣ ಕೈಬಿಟ್ಟ ಯಶ್ ಕುಟುಂಬ

ಹಾಸನ: ಜಮೀನಿಗೆ ರಸ್ತೆ ನಿರ್ಮಿಸುವ ವಿಚಾರವಾಗಿ ತಾಲ್ಲೂಕಿನ ತಿಮ್ಮಾಪುರ ಗ್ರಾಮದ ರೈತರೊಂದಿಗೆ ಉಂಟಾಗಿದ್ದ ಸಮಸ್ಯೆಯನ್ನು, ಚಲನಚಿತ್ರ ನಟ ಯಶ್ ಕುಟುಂಬದವರು ಮಾತುಕತೆ ಮೂಲಕ ಮಂಗಳವಾರ ಬಗೆಹರಿಸಿಕೊಂಡಿದ್ದಾರೆ.

ಗ್ರಾಮದ ಭೈರವೇಶ್ವರ ದೇವಾಲಯದ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಯಶ್ ಅವರ ಮ್ಯಾನೇಜರ್ ಚೇತನ್, 'ಹೊಸ ರಸ್ತೆ ನಿರ್ಮಾಣ ವಿಚಾರವನ್ನು ಕೈ ಬಿಡಲಾಗಿದೆ. ಹಳೇ ರಸ್ತೆ ಮೂಲಕವೇ ಓಡಾಡಲಾಗುವುದು. ರೈತರಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಲಾಗುವುದು' ಎಂದು ತಿಳಿಸಿದರು. ಇದಕ್ಕೆ, ರೈತರು ಒಪ್ಪಿಗೆ ಸೂಚಿಸಿದರು.

'ಯಶ್ ಅವರ ಜಮೀನಿಗೆ ಹೋಗಲು ರಸ್ತೆಯ ಅವಶ್ಯಕತೆ ಇದ್ದರೆ, ಆ ಜಾಗವನ್ನು ಮುಂದಿನ ದಿನಗಳಲ್ಲಿ ನಾವೇ ಬಿಟ್ಟು ಕೊಡುತ್ತೇವೆ' ಎಂದು ರೈತರಾದ ರಮೇಶ್, ಕಾಂತರಾಜ, ಕೃಷ್ಣೇಗೌಡ ತಿಳಿಸಿದರು.

ಜಮೀನಿಗೆ ರಸ್ತೆ ನಿರ್ಮಿಸುವ ವಿಚಾರವಾಗಿ ಮಾರ್ಚ್ 9ರಂದು ಯಶ್ ತಂದೆ– ತಾಯಿ ಮತ್ತು ಗ್ರಾಮಸ್ಥರ ನಡುವೆ ಗಲಾಟೆ ನಡೆದು, ಪ್ರಕರಣ ದುದ್ದ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು. ಅಂದು ಠಾಣೆಗೆ ಭೇಟಿ ನೀಡಿದ್ದ ಯಶ್, ಪೊಲೀಸ್ ಅಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸಿದ್ದರು. ಬಳಿಕ ಮಾತನಾಡಿದ್ದ ಅವರು, ಸಮಸ್ಯೆ ಇದ್ದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದರು.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, 1ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560002,
ದೂರವಾಣಿ ಸಂಖ್ಯೆ: 080–22107704/22484516
ವೆಬ್‌ಸೈಟ್: www.kannadapustakapradhikara.com
ಇ–ಮೇಲ್ : kannadappradhikara@gmail.com
ಸಂಖ್ಯೆ : ಕಪುಪ್ರಾ/57/ವಾ.ಬಾ.ಬ/2020–21 ದಿನಾಂಕ: 16–03–2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ 2021–22ನೇ ಸಾಲಿನ ಆರ್ಥಿಕ ವರ್ಷಕ್ಕೆ ಅನ್ವಯವಾಗುವಂತೆ ಆಡಳಿತಾಧಿಕಾರಿಗಳು ಇವರ ರಾಜ್ಯದೊಳಗಿನ ಕಛೇರಿ ಕಾರ್ಯನಿಮಿತ್ತ ಓಡಾಟಕ್ಕಾಗಿ ಬಳಸಲು ಮಾಸಿಕ ಬಾಡಿಗೆ ಆಧಾರದಲ್ಲಿ A/C ಹೊಂದಿರುವ ವಾಹನ (ಕಾರು)ನ್ನು ಪಡೆಯಬೇಕಾಗಿರುತ್ತದೆ. ಈ ಸಂಬಂಧ ಆಸಕ್ತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ ಎಲ್ಲಾ ತೆರಿಗೆಗಳು ಸೇರಿದಂತೆ ಮಾಸಿಕ ರೂ. 30,000/–. ಇ–ಟೆಂಡರ್ ದಸ್ತಾವೇಜು ಹಾಗೂ ಇತರೆ ಮಾಹಿತಿಗಳನ್ನು https://eproc.karnataka.gov.inನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002, ದೂರವಾಣಿ ಸಂಖ್ಯೆ: 080–22107704/22484516 ಹಾಗೂ www.kannadapustakapradhikara.com ಇಲ್ಲಿ ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿ
ವಾ.ಸಾ.ಸಂ.ಇ/ಬೆಂ.ನಗರ/3109/ಆಕಾರ್/2020–21
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ: 16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–52. ದೂರವಾಣಿ: 080–22268677/78/79
ಫ್ಯಾಕ್ಸ್: 080–22268667 ಇ–ಮೇಲ್ : kerc-ka@nic.in
ವೆಬ್‌ಸೈಟ್: https//karunadu.karnataka.gov.in/kerc
ಸಂಖ್ಯೆ : ಎಸ್/03/01/1582 ದಿನಾಂಕ: 15.03.2021

ಸಾರ್ವಜನಿಕ ವಿಚಾರಣೆ ನೋಟಿಸ್

ವಿಷಯ: ''ಮುನಿಸಿಪಲ್ ಘನ ತ್ಯಾಜ್ಯ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಿಂದ ಮುಂದಿನ ನಿಯಂತ್ರಣ ಅವಧಿ, ಆ.ವ. 2021–22ರಿಂದ ಆ.ವ. 2023–24ರವರೆಗೆ, ವಿದ್ಯುತ್ ಖರೀದಿ ಮಾನದಂಡಗಳ ನಿರ್ಧರಣೆ ಹಾಗೂ ದರ ಪರಿಷ್ಕರಣೆ''–ಸಾರ್ವಜನಿಕ ವಿಚಾರಣೆ.

ಆಯೋಗವು ಈ ಮೇಲಿನ ವಿಷಯದ ಬಗ್ಗೆ ಒಂದು ಚರ್ಚಾಪತ್ರವನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: www.karunadu.karnataka.gov.in/kerc ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು ದಿನಾಂಕ : 22.03.2021ರಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ನಂ.16ಸಿ–1, ಮಿಲ್ಲರ್‌ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052ರಲ್ಲಿ ಬೆಳಿಗ್ಗೆ 11.00 ಗಂಟೆಗೆ, ಆಯೋಗದ ನ್ಯಾಯಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು/ಸೂಚನೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಾರ್ವಜನಿಕ ವಿಚಾರಣೆಯಲ್ಲಿ ಪಾಲ್ಗೊಳ್ಳುವ ಆಸಕ್ತ ವ್ಯಕ್ತಿಗಳು, ಕೋವಿಡ್–19ರ ಶಿಷ್ಟಾಚಾರದನುಸಾರ ಮುನ್ಸೂಚನಾ ಕ್ರಮವನ್ನು (SOP guidelines) ಕಡ್ಡಾಯವಾಗಿ ಪಾಲಿಸತಕ್ಕದ್ದು.

ಸಹಿ/– ಕಾರ್ಯದರ್ಶಿ, ಕವಿನಿಆ, ಬೆಂಗಳೂರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ.
NO: EE/VJNL/YPDNo. 1/ SDP /TNR-11/2020-21/1801
Dated:15-03-2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಎತ್ತಿನಹೊಳೆ ಯೋಜನೆಯ ಹಂತ–1ರ ಅಡಿಯಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ 2020–21ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ (ಎಸ್.ಡಿ.ಪಿ) 1) Improvement to Gummanhalli, Singarahalli, Karjuvalli and Hirevatige kodige road 2)Improvement to road Rajanahalli, Yedehalli to Danayakahalli, irakarava valli and Mallarahosahalli Tarimara of Alur and Belur Taluk of Hassan District ರಸ್ತೆ ಕಾಮಗಾರಿಗಳಿಗೆ ಎರಡು ಲಕ್ಕೋಟೆ ಪದ್ಧತಿಯಲ್ಲಿ KPWD Class-I/VJNL Category-III and above ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ https://eproc.karnataka.gov.in ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ: 18–03–2021 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 01–04–2021 ರಂದು ಘಂಟೆ 17:30 ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ:23.03.2021 ರಂದು ಸಮಯ 15:00 ರಿಂದ 16.00 ಗಂಟೆಯ ವರೆಗೆ ಮುಖ್ಯ ಇಂಜಿನಿಯರ್ ರವರ ಕಛೇರಿ,ವಿಜನಿನಿ,ಎತ್ತಿನಹೊಳೆ ಯೋಜನಾ ವಲಯ ತುಮಕೂರಿನಲ್ಲಿ ನಡೆಸಲಾಗುವುದು. ಇಂಡೆಂಟ್ ಸಂಖ್ಯೆ, ಟೆಂಡರ್‌ಗಿಟ್ಟ ಕಾಮಗಾರಿಯ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ/ ಟೆಂಡರ್ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ, ಇತರೆ ವಿಚಾರಣೆ ಇತ್ಯಾದಿ ವಿವರಗಳಿಗೆ https://eproc.karnataka.gov.in ಮೂಲಕ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ದಿನಾಂಕ:31.03.2021 ರವರೆಗೆ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ಇ–ಪೋರ್ಟಲ್‌ನಲ್ಲಿ ದಿನಾಂಕ: 05–04–2021 ರಂದು ಘಂಟೆ 11:30ರ ನಂತರ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ ರವರ ಕಛೇರಿಯಲ್ಲಿ ತೆರೆಯಲಾಗುವುದು ಹಾಗು ತಾಂತ್ರಿಕ ಬಿಡ್ಡಿಗೆ ಅನುಮೋದನೆ ಪಡೆದುಕೊಂಡ ನಂತರ ಆರ್ಥಿಕ ಬಿಡ್ಡನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.ಮುಂದಿನ ಯಾವುದೇ ತಿದ್ದುಪಡಿ (Corrigendum/Addendum)ಸೂಚನೆಯನ್ನು ಇ–ಪೋರ್ಟಲ್ ಮುಖಾಂತರ ಮಾತ್ರ ಪ್ರಕಟಿಸಲಾಗುವುದು

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1 ಸಕಲೇಶಪುರ
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ
Email:itstaff_ulb_channarayapatna@yahoo.co.in,
Phone:08176-255411
ನಂ:ಮುನಿಸಿ(3)ಕಂ,ಶಾ:ಸಿಆರ್01:2020–21 ದಿನಾಂಕ: 16.03.2021

ಬಹಿರಂಗ ಮರು ಹರಾಜು ಮುಂದೂಡಿರುವ ಬಗ್ಗೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳೀಯಪಡಿಸುವುದೇನೆಂದರೆ, ಚನ್ನರಾಯಪಟ್ಟಣ ಪುರಸಭೆಯ 2021–22ನೇ ಸಾಲಿಗೆ ದಿನಾಂಕ: 01.04.2021 ರಿಂದ 31.03.2022 ರವರೆಗಿನ ವಾರದ ಸಂತೆ ಸುಂಕ ಮತ್ತು ದಿನವಹಿ ಮಾರುಕಟ್ಟೆ ಸುಂಕದ ವಸೂಲಿ ಹರಾಜು ಪ್ರಕ್ರಿಯೆಯನ್ನು ದಿನಾಂಕ: 20.03.2021 ರಂದು ನಡೆಸಲು ಪ್ರಕಟಣೆಯನ್ನು ಹೊರಡಿಸಲಾಗಿದ್ದು. ದಿನಾಂಕ: 15.03.2021 ರ ತುರ್ತು ಸಭೆಯ ತೀರ್ಮಾನದಂತೆ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಮುಂದೂಡಲಾಗಿದೆ. ಮುಂದಿನ ಹರಾಜು ಪ್ರಕ್ರಿಯೆ ದಿನಾಂಕವನ್ನು ಸಾರ್ವಜನಿಕರಿಗೆ ಪ್ರಚುರಪಡಿಸಲಾಗುತ್ತದೆ. ಸಾರ್ವಜನಿಕರು ಸಹಕರಿಸಬೇಕಾಗಿ ಕೋರಿದೆ. ಇನ್ನಿತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಂದಾಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಮುಖ್ಯಾಧಿಕಾರಿ,
ಪುರಸಭೆ ಚನ್ನರಾಯಪಟ್ಟಣ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/715/2020–21
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಕನಕನಪಾಳ್ಯ, ಬೆಂಗಳೂರು–560 011
ಸಂಖ್ಯೆ: ಕಾಪಾಅ/ಚಿಪೇ/ಇ–ಪ್ರೊಕ್/15/2020–21 ದಿನಾಂಕ: 16.03.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಚಿಕ್ಕಪೇಟೆ ವಿಭಾಗ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–1,2,3 & 4)

ಕಾಮಗಾರಿಯ ಹೆಸರು	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)
ವಾರ್ಡ್ ಸಂಖ್ಯೆ–153, ಜಯನಗರದ ಬಿಹೆಚ್‌ಇಎಲ್ ಬಡಾವಣೆಯ ಸಿಎ ನಿವೇಶನದಲ್ಲಿ ಶಟಲ್ ಬ್ಯಾಡ್ಮಿಂಟನ್ ಅಂಗಳ ನಿರ್ಮಾಣ ಮತ್ತು ಇತರೆ ನಿರ್ಮಾಣಗಳು ಹಾಗೂ ವಿವಿಧೋದ್ದೇಶ ಕಟ್ಟಡಕ್ಕೆ ಸುಧಾರಣೆಗಳನ್ನು ಮಾಡುವುದು.	600.00
ಇಎಂಡಿ (₹. ಗಳಲ್ಲಿ)	ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಇ 675, ವೆಚ್ಚ–12/2020, ಬೆಂಗಳೂರು ಇದರಂತೆ ದಿನಾಂಕ: 22–12–2020 ರಿಂದ 31–12–2021 ರವರೆಗೆ ಮಾತ್ರ ಇಎಂಡಿಗೆ ವಿನಾಯಿತಿ ನೀಡಲಾಗಿದೆ.

‘ಯಡಿಯೂರಪ್ಪ ಅವರು ಕುಟುಂಬವನ್ನು ದೂರ ಇಡಬೇಕು ಎಂದು ಹೇಳುತ್ತೀಯಲ್ಲ. ನೀನು ಮೊದಲು ನಿನ್ನ ಹೆಂಡತಿ ಮತ್ತು ಮಕ್ಕಳನ್ನು ಮನೆಯಿಂದ ಹೊರಗೆ ಕಳಿಸು. ಆಮೇಲೆ ಯಡಿಯೂರಪ್ಪ ಕುಟುಂಬದ ಬಗ್ಗೆ ಮಾತನಾಡು. ನೀನು ಬಿಜೆಪಿ ಬಿಟ್ಟು ಹೋದಾಗ ಶೆಟ್ಟರು, ಭಟ್ಟರ ಪಕ್ಷ ಎಂದು ಬಿಜೆಪಿಯನ್ನು ಟೀಕಿಸಿರಲಿಲ್ಲವೇ? ಆಗ ಪ್ರಲ್ಹಾದ ಜೋಶಿ, ಅನಂತಕುಮಾರ್, ಜಗದೀಶ ಶೆಟ್ಟರ್ ಅವರನ್ನು ಒಪ್ಪಿಸಿ ನಿನ್ನನ್ನು ಕರೆತಂದಿದ್ದು ಯಡಿಯೂರಪ್ಪ ಅವರಲ್ಲವೇ? ಅವೆಲ್ಲ ಮರೆತುಹೋಯಿತಾ’ ಎಂದು ಕಿಡಿಕಾರಿದರು. ‘ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸಲು ಯಡಿಯೂರಪ್ಪ ಮತ್ತು ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಕೂಡಲೇ ಶಾಸಕಾಂಗ ಪಕ್ಷ ಸಭೆ ಕರೆಯಬೇಕು’ ಎಂದು ಹೇಳಿದರು.

ಮಾಡಾಳ್ ವಿರೂಪಾಕ್ಷಪ್ಪ ಮಾತನಾಡಿ, ‘ಯತ್ನಾಳ್ ವಿರುದ್ಧ ಕ್ರಮ ಜರುಗಿಸದೇ ಇದ್ದರೆ ಅಧಿವೇಶನ ಮುಗಿದ ಬಳಿಕ ವರಿಷ್ಠರನ್ನು ಭೇಟಿ ಮಾಡಿ ಮನವಿ ಮಾಡುತ್ತೇವೆ. ಅದು ಫಲ ಕೊಡದೇ ಇದ್ದರೆ ಪಕ್ಷದ ರಾಜ್ಯ ಕಚೇರಿ ಎದುರು ಧರಣಿ ಮಾಡುತ್ತೇವೆ’ ಎಂದರು.

‘ನಳಿನ್ ಕಟೀಲ್ ಬದಲಾವಣೆ ಇಲ್ಲ’

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಬದಲಾವಣೆ ಇಲ್ಲ ಎಂದು ಬಿಜೆಪಿ ವಕ್ತಾರ ಗಣೇಶ್ ಕಾರ್ಣಿಕ್ ತಿಳಿಸಿದ್ದಾರೆ.

ಪಕ್ಷ ಸಂಘಟನೆಯ ಕಾರ್ಯ ಶೈಲಿ, ಜನಪರ ನಿಲುವಿನಿಂದಾಗಿ ನಳಿನ್ ಅವರ ಕುರಿತು ಪಕ್ಷದಲ್ಲಿ ಮತ್ತು ಜನಸಾಮಾನ್ಯರಲ್ಲಿ ಅಪಾರ ಗೌರವ ಹಾಗೂ ಅಭಿಮಾನ ಬೆಳೆದಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ನಡೆದ 15 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ 12 ಕ್ಷೇತ್ರಗಳಲ್ಲಿ ಮತ್ತು ವಿಧಾನಪರಿಷತ್‌ನ 4 ಕ್ಷೇತ್ರಗಳ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿನಲ್ಲಿ ನಳಿನ್ ಅವರ ಮಾರ್ಗದರ್ಶನ ಮತ್ತು ಕಾರ್ಯತಂತ್ರ ಮಹತ್ವದ ಪಾತ್ರವಹಿಸಿದೆ. ರಾಜ್ಯ ಎಲ್ಲ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಪಕ್ಷದ ಸಂಘಟನೆಯನ್ನು ಬಲಪಡಿಸಿದ್ದಾರೆ ಎಂದೂ ಅವರು ಹೇಳಿದ್ದಾರೆ.

‘ಜೀವನ ಕೌಶಲದಿಂದ ಸಮಗ್ರ ವ್ಯಕ್ತಿತ್ವ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಯಾವುದೇ ಕೆಲಸ ಪ್ರಾರಂಭಿಸುವುದಕ್ಕೆ ಮುನ್ನ ಅದರ ಪೂರ್ವ ತಯಾರಿ ಮಾಡಿಕೊಂಡಿದ್ದರೆ ಯಶಸ್ಸು ಸಾಧ್ಯ. ಅದೇ ರೀತಿಯಲ್ಲಿ ಸಮಗ್ರ ಬದುಕು ಮತ್ತು ವ್ಯಕ್ತಿತ್ವ ರೂಪಿಸಲು ಜೀವನ ಕೌಶಲಗಳು ಸಹಕಾರಿಯಾಗಿವೆ’ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಸಚ್ಚಿದಾನಂದ ಹೇಳಿದರು.

ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬ ಅಂಗವಾಗಿ ಎನ್‌ಎಸ್‌ಎಸ್ ಅಧಿಕಾರಿಗಳಿಗಾಗಿ ಸೋಮವಾರ ಏರ್ಪಡಿಸಿದ್ದ ಜೀವನ ಕೌಶಲ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಧನಾತ್ಮಕ ಚಿಂತನೆಯ ಮೂಲಕ ಸಮಾಜದಲ್ಲಿ ಬದಲಾವಣೆ ಹೇಗೆ ಸಾಧ್ಯ ಎನ್ನುವ ಅಂಶವನ್ನು ಆದ್ಯತೆಯಾಗಿಟ್ಟುಕೊಂಡು ಈ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಜೀವನ ಕೌಶಲಗಳಾದ ಪರಿಣಾಮಕಾರಿ ಸಂವಹನ, ಮಾನಸಿಕ ಒತ್ತಡ ನಿರ್ವಹಣೆ, ಕ್ರಿಯಾಶೀಲ ನಾಯಕತ್ವ, ಸಮುದಾಯ ಸೇವೆ, ಸ್ವಯಂ ಅರಿವು, ಪರಿಣಾಮಕಾರಿಯಾಗಿ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದನೆ, ಮೌಲ್ಯಾಧಾರಿತ ವ್ಯಕ್ತಿತ್ವ ನಿರ್ಮಾಣಗಳ ಬಗ್ಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರಗೋಷ್ಠಿ ನಡೆಯುತ್ತಿದ್ದು, ಇದರ ಸದುಪಯೋಗವಾಗಬೇಕು’ ಎಂದರು.

ನಿಮ್ಹಾನ್ಸ್ ಡೀನ್ ಡಾ. ಸತೀಶ್ ಗಿರಿಮಾಜಿ, ಕೇಂದ್ರ ಸರ್ಕಾರದ ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಖಾದ್ರಿ ನರಸಿಂಹಯ್ಯ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಡಾ. ಗಿರೀಶ್ ಹಾಗೂ ವಿಶ್ವವಿದ್ಯಾಲಯದ ಉಪ ಕುಲಸಚಿವ ಡಾ. ಬಿ. ವಸಂತ ಶೆಟ್ಟಿ ಹಾಜರಿದ್ದರು.

ವಿಶ್ವವಿದ್ಯಾಲಯ ವ್ಯಾಪ್ತಿಗೊಳಪಟ್ಟ ಕಾಲೇಜುಗಳ ಎನ್‌ಎಸ್‌ಎಸ್ ಅಧಿಕಾರಿಗಳಿಗೆ ತರಬೇತಿ ನೀಡಲಾಯಿತು. ಮಾ.20ರವರೆಗೆ ಕಾರ್ಯಾಗಾರ ನಡೆಯಲಿದೆ.

ಕಾರ್ಯಾಗಾರವನ್ನು ಡಾ.ಎಸ್. ಸಚ್ಚಿದಾನಂದ ಉದ್ಘಾಟಿಸಿದರು. ಡಾ. ಸತೀಶ್ ಗಿರಿಮಾಜಿ, ಖಾದ್ರಿ ನರಸಿಂಹಯ್ಯ, ಪ್ರತಾಪ್ ಲಿಂಗಯ್ಯ, ಡಾ. ಗಿರೀಶ್, ಡಾ.ಬಿ. ವಸಂತಶೆಟ್ಟಿ ಇತರರು ಇದ್ದರು

ಜಲಜೀವನ ಮಿಷನ್: ರಾಜ್ಯದಲ್ಲಿ ಮಂಡ್ಯ ಉತ್ತಮ ಸಾಧನೆ

ನಲ್ಲಿಗಳ ಸಂಪರ್ಕ: ಕರ್ನಾಟಕದ ಕಳಪೆ ಸಾಧನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರಾಮೀಣ ಪ್ರದೇಶಗಳ ಪ್ರತಿ ಮನೆಗೂ ನಲ್ಲಿಯ ಮೂಲಕ ನೀರು ಪೂರೈಸುವಲ್ಲಿ ಕರ್ನಾಟಕವು ಇತರ ರಾಜ್ಯಗಳಿಗಿಂತ ಸಾಕಷ್ಟು ಹಿಂದೆ ಇದೆ.

ಕೇಂದ್ರ ಸರ್ಕಾರದ ಸಮೀಕ್ಷೆಯ ಪ್ರಕಾರ, ರಾಷ್ಟ್ರದಾದ್ಯಂತ ಗ್ರಾಮೀಣರ ಮನೆಗಳ ನೀರು ಪೂರೈಕೆಯ ಪ್ರಮಾಣ ಶೇ 36.83ರಷ್ಟಿದ್ದರೆ, ಕರ್ನಾಟಕದ ಶೇ 29.91 ಗ್ರಾಮಗಳಲ್ಲಿ ಮಾತ್ರ ನಲ್ಲಿಗಳ ಮೂಲಕ ನೀರು ಪೂರೈಕೆ ಇದೆ ಎಂದು ಜಲಶಕ್ತಿ ಸಚಿವಾಲಯ ಹೇಳಿದೆ.

ದೇಶದ ಒಟ್ಟು 19.19 ಕೋಟಿ ಗ್ರಾಮೀಣ ಕುಟುಂಬಗಳ ಪೈಕಿ 7.06 ಕೋಟಿ (ಶೇ 36.83) ಕುಟುಂಬಗಳು ವಾಸವಿರುವ ಮನೆಗಳಿಗೆ ನಲ್ಲಿ ಮೂಲಕ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ರಾಜ್ಯದಲ್ಲಿರುವ 91.19 ಲಕ್ಷ ಕುಟುಂಬಗಳ ಪೈಕಿ ಕೇವಲ 27.27 ಲಕ್ಷ ಕುಟುಂಬಗಳು ನೀರಿನ ಸಂಕರ್ಪ ಹೊಂದಿವೆ ಎಂದು ಸಚಿವಾಲಯದ ವರದಿ ತಿಳಿಸಿದೆ.

ಮನೆಮನೆಗೆ ನೀರು ಪೂರೈಸುವಲ್ಲಿ ಕರ್ನಾಟಕವು 19ನೇ ಸ್ಥಾನದಲ್ಲಿದೆ. ನೆರೆಯ ಗೋವಾ ಮತ್ತು ತೆಲಂಗಾಣಗಳು ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ನೀರು ಒದಗಿಸಿ ಶೇ 100ರಷ್ಟು ಸಾಧನೆ ತೋರಿ ಮೊದಲ ಸ್ಥಾನದಲ್ಲಿವೆ. ಕೇಂದ್ರಾಡಳಿತ ಪ್ರದೇಶವಾದ ಅಂಡಮಾನ್ ಮತ್ತು ನಿಕೋಬಾರ್ ದ್ವಿತೀಯ ಸ್ಥಾನದಲ್ಲಿದ್ದು, ಶೇ 98.29ರ ಸಾಧನ ಕಂಡುಬಂದಿದೆ.

ಗ್ರಾಮೀಣ ಪ್ರದೇಶದ ಪ್ರತಿ ವ್ಯಕ್ತಿಗೆ ಆಯಾ ರಾಜ್ಯಗಳ ಸಹಭಾಗಿತ್ವದಲ್ಲಿ ನಿತ್ಯ 55 ಲೀಟರ್ ಕುಡಿಯುವ ನೀರು ಪೂರೈಸುವ ಉದ್ದೇಶದೊಂದಿಗೆ 2019ರ ಆಗಸ್ಟ್‌ನಲ್ಲಿ ‘ಜಲಜೀವನ ಮಿಷನ್’ ಪ್ರಾರಂಭಿಸಿರುವ ಕೇಂದ್ರ ಸರ್ಕಾರ, 2024ರೊಳಗೆ ಯೋಜನೆ ಪೂರ್ಣಗೊಳಿಸುವ ಗುರಿ ಹೊಂದಿದೆ.

ಅಗ್ರ ಸ್ಥಾನದಲ್ಲಿ ಮಂಡ್ಯ: ಮನೆಯ ಅಂಗಳಕ್ಕೆ ನೀರು ಒದಗಿಸಿರುವ ಪ್ರಮಾಣದಲ್ಲಿ ರಾಜ್ಯದ ಮಂಡ್ಯ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು, ಒಟ್ಟು 3.87 ಲಕ್ಷ ಕುಟುಂಬಗಳ ಪೈಕಿ 2.20 ಲಕ್ಷ ಕುಟುಂಬಗಳಿಗೆ (ಶೇ 56.98) ಸಂಪರ್ಕ ಕಲ್ಪಿಸಲಾಗಿದೆ. 2.89 ಲಕ್ಷ ಕುಟುಂಬಗಳ ಪೈಕಿ 1.52 ಲಕ್ಷ ಕುಟುಂಬಗಳಿಗೆ (ಶೇ 52.57) ನೀರು ಒದಗಿಸಿರುವ ದಕ್ಷಿಣ ಕನ್ನಡ ಜಿಲ್ಲೆ ನಂತರದ ಸ್ಥಾನದಲ್ಲಿದ್ದರೆ, ಧಾರವಾಡ (45.53) ಮತ್ತು ಕೊಪ್ಪಳ (43.07) ಜಿಲ್ಲೆಗಳು ಯೋಜನೆಯ ಯಶಸ್ವಿ ಅನುಷ್ಠಾನದಲ್ಲಿ ಕ್ರಮವಾಗಿ 3 ಮತ್ತು 4ನೇ ಸ್ಥಾನದಲ್ಲಿವೆ.

ಒಟ್ಟು 2.67 ಲಕ್ಷ ಮನೆಗಳ ಪೈಕಿ ಕೇವಲ 23,721 (ಶೇ 8.86) ಮನೆಗಳಿಗೆ ನಲ್ಲಿ ಸಂಪರ್ಕ ಒದಗಿಸಿರುವ ಉತ್ತರ ಕನ್ನಡ ಜಿಲ್ಲೆಯದ್ದು, ರಾಜ್ಯದಲ್ಲಿ ಕಂಡುಬಂದಿರುವ ಕಳಪೆ ಸಾಧನೆಯಾಗಿದೆ.

2.22 ಲಕ್ಷದ ಪೈಕಿ 34,194 ಕುಟುಂಬಗಳಿಗೆ ಮಾತ್ರ ನೀರಿನ ಸೌಲಭ್ಯ ನೀಡಿರುವ ಯಾದಗಿರಿ ಜಿಲ್ಲೆಯೂ ಕಳಪೆ ಸಾಧನೆಯಲ್ಲಿ ದ್ವಿತೀಯ ಸ್ಥಾನ ಹೊಂದಿದೆ. ಹಾಸನ ಜಿಲ್ಲೆಯ 4.19 ಲಕ್ಷ ಕುಟುಂಬಗಳಲ್ಲಿ ಇದುವರೆಗೆ 66,859 (ಶೇ 15.95) ಕುಟುಂಬಗಳು ಕುಡಿಯುವ ನೀರಿನ ನೇರ ಸಂಪರ್ಕ ಪಡೆದಿವೆ.

ಬೆಂಗಳೂರು ನಗರ (ಶೇ 20.51) ಮತ್ತು ಬೆಂಗಳೂರು ಗ್ರಾಮೀಣ (ಶೇ 19.28) ಹಾಗೂ ಚಿಕ್ಕಬಳ್ಳಾಪುರ, ವಿಜಯಪುರ, ಬೀದರ್, ಕಲಬುರ್ಗಿ ಜಿಲ್ಲೆಗಳಲ್ಲೂ ಮನೆಮನೆ ನೀರು ಪೂರೈಕೆ ಪ್ರಮಾಣ ಆಶಾದಾಯಕವಾಗಿಲ್ಲ.

ದಾವಣಗೆರೆ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನ ಕಳಪೆ ಮಟ್ಟದಲ್ಲಿದೆ.

ಆದರೆ, ರಾಜ್ಯದ ದಕ್ಷಿಣ ಕನ್ನಡ, ಗದಗ, ಬಳ್ಳಾರಿ, ಹಾಸನ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನ ಕ್ಷಿಪ್ರಗತಿಯಲ್ಲಿದೆ ಎಂದೂ ವರದಿ ತಿಳಿಸಿದೆ.

ಪ್ರಗತಿ ಪಥದತ್ತ ಬೆಂಗಳೂರು ಸಿಟಿ ಕೋಆಪರೇಟಿವ್ ಬ್ಯಾಂಕ್

19ರಂದು 3 ಶಾಖೆಗಳಲ್ಲಿ ಎಟಿಎಂ ಉದ್ಘಾಟನೆ

ಬೆಂಗಳೂರು: ಬ್ಯಾಂಕಿಂಗ್ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿರುವ ದಿ ಬೆಂಗಳೂರು ಸಿಟಿ ಕೋಆಪರೇಟಿವ್ ಬ್ಯಾಂಕ್ ಇದೇ 19ರಂದು ತನ್ನ ಮೂರು ಶಾಖೆಗಳಲ್ಲಿ ಎಟಿಎಂಗಳನ್ನು ತೆರೆಯುತ್ತಿದೆ.

ಪದ್ಮನಾಭ ನಗರ, ವಿಜಯನಗರ ಹಾಗೂ ಟಿ.ದಾಸರಹಳ್ಳಿ ಶಾಖೆಗಳಲ್ಲಿ ಈ ಸೇವೆ ಒದಗಿಸಲಾಗುತ್ತಿದ್ದು, ಬ್ಯಾಂಕ್‌ನ ಅಧ್ಯಕ್ಷ ಆವಲಹಳ್ಳಿ ಆರ್. ಚಂದ್ರಪ್ಪ ಹಾಗೂ ಉಪಾಧ್ಯಕ್ಷ ಡಾ.ಜಿ.ಎಂ. ದೇವರಾಜ್ ಮತ್ತು ಆಡಳಿತ ಮಂಡಳಿಯ ಸದಸ್ಯರು ಚಾಲನೆ ನೀಡಲಿದ್ದಾರೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

‘2018ರ ಜುಲೈ 11ರಂದು ಯಲಹಂಕ, ಕೋಣನಕುಂಟೆ ಹಾಗೂ ಜಯನಗರ ಶಾಖೆಗಳಲ್ಲಿ ಕೂಡ ಒಂದೇ ದಿನ ಎಟಿಎಂಗಳನ್ನು ತೆರೆಯಲಾಗಿತ್ತು. ಈಗಲೂ ಮೂರು ಶಾಖೆಗಳಲ್ಲಿ ಏಕಕಾಲಕ್ಕೆ ಈ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ’ ಎಂದು ಆರ್. ಚಂದ್ರಪ್ಪ ಹೇಳಿದ್ದಾರೆ.

‘ಸದಸ್ಯರ ಸಂಖ್ಯೆ, ಸಾಲ ವಿತರಣೆ, ದುಡಿಯುವ ಬಂಡವಾಳ ಹಾಗೂ ಅನುತ್ಪಾದಕ ಆಸ್ತಿಗಳ ನಿರ್ವಹಣೆಯಲ್ಲಿ ಹಾಗೂ ಇನ್ನೂ ಹಲವು ವಿಚಾರಗಳಲ್ಲಿ ನಮ್ಮ ಬ್ಯಾಂಕ್ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿದೆ. ರಾಷ್ಟ್ರೀಕೃತ, ಖಾಸಗಿ ಹಾಗೂ ವಿದೇಶಿ ಬ್ಯಾಂಕುಗಳ ಪೈಪೋಟಿಯ ನಡುವೆಯೂ ಪ್ರಗತಿ ಸಾಧಿಸುತ್ತಿದ್ದೇವೆ. 15 ವರ್ಷಗಳ ಹಿಂದಿನ ಸಾಧನೆಗೆ ಹೋಲಿಸಿದರೆ, ಹತ್ತು ಪಟ್ಟು ಪ್ರಗತಿ ಸಾಧಿಸಿದ್ದೇವೆ’ ಎಂದು ಅವರು ಹೇಳಿದ್ದಾರೆ.

‘ಗ್ರಾಹಕ ಸ್ನೇಹಿ ಯೋಜನೆಗಳನ್ನು ಹಮ್ಮಿಕೊಂಡಿರುವುದಕ್ಕೆ ಈ ಪ್ರಗತಿ ಸಾಧ್ಯವಾಗಿದೆ. ವರ್ಷಕ್ಕೆ ಎರಡು ಬಾರಿ ಉತ್ತಮ ಗ್ರಾಹಕರಿಗೆ ಸನ್ಮಾನ, ಹಿರಿಯ ನಾಗರಿಕರಿಗೆ ಶುಲ್ಕರಹಿತ ಪೇ ಆರ್ಡರ್ ಹಾಗೂ ಚೆಕ್‌ಬುಕ್ ಸೌಲಭ್ಯ, ಸಕಾಲದಲ್ಲಿ ಸಾಲ ಮರುಪಾವತಿಸಿದವರಿಗೆ ಸಾಲದ ಬಡ್ಡಿ ದರದಲ್ಲಿ ರಿಯಾಯಿತಿ, ಸದಸ್ಯರು ಮರಣ ಹೊಂದಿದಾಗ ಅವರ ಕುಟುಂಬಕ್ಕೆ ₹10 ಸಾವಿರ ಧನಸಹಾಯ, ಕಡಿತವಿಲ್ಲದೆ ಠೇವಣಿ ಮೇಲೆ ತಿಂಗಳ ಬಡ್ಡಿ ಪಡೆಯುವ ಸವಲತ್ತು ಹೀಗೆ ಹತ್ತು ಹಲವು ಸೌಲಭ್ಯಗಳನ್ನು ಗ್ರಾಹಕರಿಗೆ ನೀಡಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

ಈ ಸಹಕಾರಿ ಬ್ಯಾಂಕ್ ಸದ್ಯ 22 ಶಾಖೆಗಳು, 6 ಎಟಿಎಂಗಳು ಹಾಗೂ 264 ಸಿಬ್ಬಂದಿಯನ್ನು ಒಳಗೊಂಡಿದೆ.

ಕುಡಿಯುವ ನೀರು: ತಾಲ್ಲೂಕಿಗೆ ₹50 ಲಕ್ಷ

ಬೆಂಗಳೂರು: ಮೂರು ವರ್ಷಗಳಿಂದ ಬರಪೀಡಿತವಾಗಿರುವ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಪ್ರತಿ ತಾಲ್ಲೂಕಿನ ಕಾರ್ಯಪಡೆಗೆ ₹35 ಲಕ್ಷ ಹಾಗೂ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಖಾತೆಗೆ ₹15 ಲಕ್ಷ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ’ಎರಡು ವರ್ಷಗಳಿಂದ ಬರಪೀಡಿತವಾಗಿರುವ ತಾಲ್ಲೂಕಿಗೆ ₹35 ಲಕ್ಷ (ಕಾರ್ಯಪಡೆಗೆ ₹25 ಲಕ್ಷ, ಸಿಇಒ ಖಾತೆಗೆ ₹10 ಲಕ್ಷ), ಒಂದು ವರ್ಷದಿಂದ ಬರಪೀಡಿತವಾಗಿರುವ ತಾಲ್ಲೂಕಿಗೆ ₹25 ಲಕ್ಷ (ಕಾರ್ಯಪಡೆಗೆ ₹15 ಲಕ್ಷ, ಸಿಇಒ ಖಾತೆಗೆ ₹10 ಲಕ್ಷ) ಹಾಗೂ ಬರಪೀಡಿತವಲ್ಲದ ತಾಲ್ಲೂಕಿಗೆ ₹15 ಲಕ್ಷ (ಕಾರ್ಯಪಡೆಗೆ ₹10 ಲಕ್ಷ) ಬಿಡುಗಡೆ ಮಾಡಲಾಗುವುದು‘ ಎಂದರು.

ವಿಧಾನ ಪರಿಷತ್‌ನಲ್ಲಿ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಹೇಳಿಕೆ

ಸಹಕಾರ ಕಾಯ್ದೆ ತಿದ್ದುಪಡಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್ ಕಲಾಪದಲ್ಲಿ ಸಚಿವ ಎಸ್‌.ಟಿ.ಸೋಮಶೇಖರ್ ಮಾತನಾಡಿದರು

ಬೆಂಗಳೂರು: ವಾರ್ಷಿಕ ಸರ್ವ ಸದಸ್ಯರ ಸಭೆಗೆ ಗೈರಾಗುವ ಸದಸ್ಯರನ್ನು ಸಹಕಾರ ಸಂಸ್ಥೆಗಳ ಮತದಾರರ ಪಟ್ಟಿಯಿಂದ ಕೈಬಿಡಲು ಕಾರಣವಾಗಿರುವ ಸಹಕಾರ ಕಾಯ್ದೆಯ ಸೆಕ್ಷನ್ 20ಕ್ಕೆ ತಿದ್ದುಪಡಿ ತರುವ ಪ್ರಸ್ತಾವ ರಾಜ್ಯ ಸರ್ಕಾರದ ಮುಂದಿದೆ ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿಳಿಸಿದರು.

ಮಂಗಳವಾರ ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಈಗ ಇರುವ ಕಾಯ್ದೆಯಿಂದ ಹೆಚ್ಚು ಜನರು ಮತದಾನದ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ ಎಂಬ ಆಕ್ಷೇಪವಿದೆ. ಅದನ್ನು ಪರಿಹರಿಸಲು ಸಹಕಾರ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ತೀರ್ಮಾನಿಸಿದೆ’ ಎಂದರು.

‘ರಾಜ್ಯ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡು ನಾಮ ನಿರ್ದೇಶಿತ ಸದಸ್ಯರನ್ನೇ ಸಹಕಾರ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರನ್ನಾಗಿ ಮಾಡುತ್ತಿದೆ’ ಎಂದು ಮರಿತಿಬ್ಬೇಗೌಡ ದೂರಿದರು. ಆರೋಪ ಅಲ್ಲಗಳೆದ ಸಚಿವರು, ‘ಅಂತಹ ಪ್ರಯತ್ನ ಸರ್ಕಾರದಿಂದ ನಡೆದಿಲ್ಲ. ಆಯಾ ಸಹಕಾರ ಸಂಸ್ಥೆಗಳ ನಿರ್ದೇಶಕರೇ ಪದಾಧಿಕಾರಿಗಳನ್ನು ಚುನಾಯಿಸುತ್ತಾರೆ. ಮಂಡ್ಯ ಮತ್ತು ಕಲಬುರ್ಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಲ್ಲಿ ನಾಮ ನಿರ್ದೇಶಿತ ಸದಸ್ಯರು ಅಧ್ಯಕ್ಷರಾಗಿದ್ದು, ಅದು ಆ ಸಂಸ್ಥೆಗಳ ನಿರ್ದೇಶಕರೇ ಕೈಗೊಂಡ ನಿರ್ಧಾರ’ ಎಂದು ಉತ್ತರಿಸಿದರು.

ದುಂದು ವೆಚ್ಚ ತಡೆಗೆ ಆಗ್ರಹ: ‘ಬೆಂಗಳೂರು ಚಲನಚಿತ್ರೋತ್ಸವದ ಹೆಸರಿನಲ್ಲಿ ದುಂದುವೆಚ್ಚ ನಡೆಯುತ್ತಿದೆ. ಕರೀನಾ ಕಪೂರ್, ಜಯಾ ಬಚ್ಚನ್ ಅವರಂತಹ ನಟಿಯರನ್ನು ಕೋಟಿಗಟ್ಟಲೆ ಹಣ ವ್ಯಯಿಸಿ ಕಾರ್ಯಕ್ರಮಕ್ಕೆ ಕರೆಸಲಾಗುತ್ತಿದೆ. ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳಿಗೆ ಗುತ್ತಿಗೆ ನೀಡಿ, ಕೋಟಿಗಟ್ಟಲೆ ಹಣ ಪಾವತಿಸಲಾಗುತ್ತಿದೆ. ಈ ರೀತಿಯ

ವಿಧಾನ ಮಂಡಲದಲ್ಲಿ

ದುಂದುವೆಚ್ಚ ತಡೆಯಬೇಕು’ ಎಂದು ಕಾಂಗ್ರೆಸ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ ಆಗ್ರಹಿಸಿದರು.

ಚಿತ್ರೋತ್ಸವವನ್ನು ವಾರ್ತಾ ಇಲಾಖೆಯ ಮೂಲಕ ನಡೆಸುವುದು ಸರಿಯಲ್ಲ. ಚಲನಚಿತ್ರ ಅಕಾಡೆಮಿಯ ಮೂಲಕವೇ ಚಿತ್ರೋತ್ಸವ ನಡೆಸಬೇಕು ಎಂದು ಆಗ್ರಹಿಸಿದರು.

ವಾರ್ತಾ ಸಚಿವರ ಪರವಾಗಿ ಉತ್ತರ ನೀಡಿದ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್, ‘ಚಿತ್ರೋತ್ಸವದಲ್ಲಿ ದುಂದುವೆಚ್ಚಕ್ಕೆ ಅವಕಾಶ ನೀಡಿಲ್ಲ. 2017–18ರಲ್ಲಿ ₹ 6.65 ಕೋಟಿ, 2018–19ರಲ್ಲಿ ₹ 4.61 ಕೋಟಿ ಮತ್ತು 2019–20ರಲ್ಲಿ ₹ 7.79 ಕೋಟಿ ವೆಚ್ಚ ಮಾಡಲಾಗಿದೆ. ಚಿತ್ರೋತ್ಸವದ ವೆಚ್ಚ ನಿರ್ವಹಣೆಗೆ ಪ್ರತ್ಯೇಕ ಸಮಿತಿಯೇ ಇರುತ್ತದೆ. 2020–21ನೇ ಸಾಲಿನ ಚಿತ್ರೋತ್ಸವವನ್ನು ಕೋವಿಡ್ ಕಾರಣದಿಂದ ಮುಂದೂಡಲಾಗಿದೆ’ ಎಂದರು.

ಸುದ್ದಿ 2 ನಿಮಿಷ

ಸಾಹಿತಿ ಭೈರಪ್ಪ ವಿರುದ್ಧ 3 ದೂರು

ಬೆಂಗಳೂರು: ಸಾಹಿತಿ ಎಸ್.ಎಲ್. ಭೈರಪ್ಪ ಫೆಬ್ರುವರಿ 21ರಂದು ಮೈಸೂರಿನ ಸಮಾರಂಭವೊಂದರಲ್ಲಿ ದ್ರೌಪದಿಯ ಕುರಿತು ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮೂರು ದೂರುಗಳು ಸಲ್ಲಿಕೆಯಾಗಿದ್ದು, ವಿಚಾರಣಾ ಹಂತದಲ್ಲಿವೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ವಿಧಾನ ಪರಿಷತ್‌ನಲ್ಲಿ ಶೂನ್ಯವೇಳೆಯಲ್ಲಿ ಮಾಡಿದ್ದ ಪ್ರಸ್ತಾಪಕ್ಕೆ ಮಂಗಳವಾರ ಉತ್ತರ ನೀಡಿದ ಗೃಹ ಸಚಿವರು, ‘ಭೈರಪ್ಪ



ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಒತ್ತಾಯಿಸಿ ದೇವನಹಳ್ಳಿ ಹಾಗೂ ಬೆಂಗಳೂರು ನಗರದ ಸಿದ್ಧಾಪುರ ಪೊಲೀಸ್ ಠಾಣೆಗಳಿಗೆ ದೂರುಗಳು ಬಂದಿವೆ. ಬೆಂಗಳೂರು ನಗರ ಪೊಲೀಸ್ ಕಮಿಷನರ್ ಅವರಿಗೂ ಒಂದು ದೂರು ಬಂದಿದೆ’ ಎಂದು ಮಾಹಿತಿ ನೀಡಿದ್ದಾರೆ.

ದೇವನಹಳ್ಳಿ ತಾಲ್ಲೂಕು ತಿಗಳರ ಸಂಘದಿಂದ ದೇವನಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ರಾಜ್ಯ ಸರ್ಕಾರಿ ತಿಗಳ ನೌಕರರ/ವೃತ್ತಿಪರರ ಸಂಘದ ಅಧ್ಯಕ್ಷರು ಸಿದ್ಧಾಪುರ ಠಾಣೆಗೆ ದೂರು ನೀಡಿದ್ದಾರೆ. ವೈ. ಜಗದೀಶ್ ಎಂಬುವವರು ಪೊಲೀಸ್ ಕಮಿಷನರ್‌ಗೆ ದೂರು ಸಲ್ಲಿಸಿದ್ದಾರೆ. ಎಲ್ಲವೂ ವಿಚಾರಣಾ ಹಂತದಲ್ಲಿವೆ. ಹಿಂದೆ ಇದೇ ರೀತಿಯ ದೂರುಗಳು ಬಂದ ಸಂದರ್ಭದಲ್ಲಿ ಕೈಗೊಂಡಿರುವ ಕ್ರಮಗಳ ಅನುಸಾರ ಈ ದೂರುಗಳನ್ನೂ ವಿಚಾರಣೆ ಮಾಡಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

ಗ್ರಾಮ ವಾಸ್ತವ್ಯ; ಶಿಷ್ಟಾಚಾರ ಉಲ್ಲಂಘನೆ

ಬೆಂಗಳೂರು: ಹಳ್ಳಿಗಳ ಕಡೆಗೆ ಜಿಲ್ಲಾಧಿಕಾರಿ ನಡೆ ಕಾರ್ಯಕ್ರಮದ ವೇಳೆ ಶಾಸಕರಿಗೆ ಮಾಹಿತಿ ನೀಡದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಸದಸ್ಯರು ಆಕ್ಷೇಪಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆ ವೇಳೆ ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ, ‘ಇದೊಂದು ಒಳ್ಳೆಯ ಕಾರ್ಯಕ್ರಮ. ಆದರೆ, ಜಿಲ್ಲಾಧಿಕಾರಿ ಮಾತ್ರ ಗ್ರಾಮ ವಾಸ್ತವ್ಯ ಮಾಡುತ್ತಿದ್ದಾರೆ. ನಮ್ಮ ಶಾಸಕ ಎಲ್ಲಿ ಎಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ. ಶಾಸಕರು ಸಹ ಗ್ರಾಮ ವಾಸ್ತವ್ಯ ಮಾಡಲು ಅವಕಾಶ ನೀಡಬೇಕು‘ ಎಂದು ಕೋರಿದರು.

ಆಗ ಜೆಡಿಎಸ್‌ನ ಕೆ.ಅನ್ನದಾನಿ, ಸಾ.ರಾ.ಮಹೇಶ್, ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ಎಚ್‌.ಪಿ.ಮಂಜುನಾಥ್, ಯತೀಂದ್ರ ಸಿದ್ದರಾಮಯ್ಯ, ಡಾ.ರಂಗನಾಥ್, ’ಈ ಕಾರ್ಯಕ್ರಮದ ವೇಳೆ ಶಿಷ್ಟಾಚಾರ ಉಲ್ಲಂಘನೆ ಆಗುತ್ತಿದೆ. ಸವಲತ್ತು ವಿತರಣೆ ವೇಳೆ ಶಾಸಕರನ್ನು ಆಹ್ವಾನಿಸುತ್ತಿಲ್ಲ‘ ಎಂದು ಅಸಮಾಧಾನ ವ್ಯಕ್ತಪಡಿಸಿದರು.

’ಸಂಜೆ 4 ಗಂಟೆಗೆ ಸವಲತ್ತು ವಿತರಣೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದ್ದರಲ್ಲ‘ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

’ಈ ಕಾರ್ಯಕ್ರಮಕ್ಕೆ ಆಹ್ವಾನ ಪತ್ರ ಮುದ್ರಿಸದಂತೆ ಸೂಚಿಸಲಾಗಿದೆ. ಎಲ್ಲ ಜನಪ್ರತಿನಿಧಿಗಳಿಗೆ ಎಸ್‌ಎಂಎಸ್ ಸಂದೇಶ ಕಳುಹಿಸಲು ನಿರ್ದೇಶನ ನೀಡಿದ್ದೇನೆ. ಆಸಕ್ತಿ ಇರುವ ಶಾಸಕರು ಜಿಲ್ಲಾಧಿಕಾರಿ ಜತೆಗೆ ಗ್ರಾಮ ವಾಸ್ತವ್ಯ ಮಾಡಬಹುದು‘ ಎಂದು ಕಂದಾಯ ಸಚಿವ ಆರ್‌.ಅಶೋಕ ಹೇಳಿದರು.

‘ಅನೈತಿಕ ಶಿಶು’ ಸರ್ಕಾರ: ಚರ್ಚೆಗೆ ಅವಕಾಶ ಕೇಳಿದ ಕಾಂಗ್ರೆಸ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಏಕೆ ಕಾಂಗ್ರೆಸ್ ತೊರೆದು ಬಿಜೆಪಿಗೆ ಹೋದೆವು ಎಂಬುದನ್ನು ಒಂದು ಗಂಟೆ ಕಾಲ ಚರ್ಚೆ ಮಾಡಲು ಅವಕಾಶ ನೀಡಿದರೆ ಚರ್ಚಿಸಬಹುದು’ ಎಂದು ಜವಳಿ ಸಚಿವ ಶ್ರೀಮಂತ ಪಾಟೀಲ ವಿಧಾನ ಪರಿಷತ್‌ನಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನೇ ಉಲ್ಲೇಖಿಸಿ, ಸಾರ್ವಜನಿಕ ಮಹತ್ವದ ವಿಷಯವೆಂದು ನಿಯಮ 58ರ ಅಡಿ ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡುವಂತೆ ಸಭಾಪತಿಗೆ ಕಾಂಗ್ರೆಸ್ ಪತ್ರ ನೀಡಿದೆ.

ಚಿಕ್ಕಬಳ್ಳಾಪುರದಲ್ಲಿ ಕಾನೂನುಬಾಹಿರ ಗಣಿಗಾರಿಕೆ ಕುರಿತು ಮಂಗಳವಾರ ನಡೆದ ಚರ್ಚೆಯ ವೇಳೆ ವಿರೋಧ ಪಕ್ಷದ ನಾಯಕ ಎಸ್‌.ಆರ್. ಪಾಟೀಲ, ‘ಈ ಸರ್ಕಾರ ಅನೈತಿಕ ಶಿಶು. ವಿವಾಹೇತರ ಸಂಬಂಧದಿಂದ ಹುಟ್ಟಿದ್ದು. ನಮ್ಮಲ್ಲಿದ್ದವರನ್ನು ಕರೆದುಕೊಂಡು ಹೋಗಿ ಸರ್ಕಾರ ರಚಿಸಿದರು. ನಮ್ಮವರನ್ನು ರಾಜೀನಾಮೆ ಕೊಡಿಸಿ ಚುನಾವಣೆಗೆ ನಿಲ್ಲಿಸಿದರು. ಸರ್ಕಾರ ರಚನೆಯ ವೇಳೆ ಲಿವಿಂಗ್ ಟುಗೆದರ್ ಇದ್ದರು’ ಎಂದು ಛೇಡಿಸಿದರು.

ಈ ವೇಳೆ ಮಾತನಾಡಿದ ಶ್ರೀಮಂತ ಪಾಟೀಲ, ‘ಈ ಬಗ್ಗೆ ಒಂದು ಗಂಟೆ ಚರ್ಚೆಗೆ ಅವಕಾಶ ನೀಡಿದರೆ ನಾವು ಏಕೆ ಹೋದೆವು ಎಂಬ ಬಗ್ಗೆ ಚರ್ಚೆ ಮಾಡುತ್ತೇವೆ’ ಎಂದರು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ‘ಚರ್ಚೆಗೆ ಅವಕಾಶ ಕೊಡಿ. ಎಲ್ಲಾ ಚರ್ಚೆ ಆಗಲಿ’ ಎಂದು ಪಟ್ಟು ಹಿಡಿದರು.

ಕಾಂಗ್ರೆಸ್‌ನ ಎಂ. ನಾರಾಯಣಸ್ವಾಮಿ, ‘ಆಪರೇಷನ್ ಕಮಲ ನಡೆಯದಂತೆ ಶಾಸಕರನ್ನು ನೋಡಿಕೊಳ್ಳುವ ಜವಾಬ್ದಾರಿ ನನಗೆ ಕೊಟ್ಟಿದ್ದರು. ನಮ್ಮ ಶಾಸಕರೆಲ್ಲಾ ಹೋಟೆಲ್‌ನಲ್ಲಿ ಇದ್ದೆವು. ಈ ಶ್ರೀಮಂತ ಪಾಟೀಲ ಶೌಚಾಲಯಕ್ಕೆ ಹೋಗಬೇಕು ಎಂದು ಹೇಳಿ ರಾತ್ರೋರಾತ್ರಿ ಓಡಿ ಹೋದರು’ ಎಂದರು.

ಆಗ ಬಿಜೆಪಿ ಮತ್ರ ಕಾಂಗ್ರೆಸ್ ಸದಸ್ಯರ ಮಧ್ಯೆ ಮಾತಿನ ಜಟಾಪಟಿ ನಡೆಯಿತು.

ಬಳಿಕ ಚರ್ಚೆಗೆ ಅವಕಾಶ ಕೋರಿ ಸಭಾಪತಿಗೆ ನಾರಾಯಣ ಸ್ವಾಮಿ ಪತ್ರ ನೀಡಿದರು.

ಹೊಸ ‘ಗಣಿ ನೀತಿ’ಯ ಕರಡು ಸಿದ್ಧ

‘ಭ್ರಷ್ಟಾಚಾರ ತಡೆಯಲು ಬದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಣಿಗಾರಿಕೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ನಿಜ. ಅದನ್ನು ತಡೆಯಲು ಈಗಾಗಲೇ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ’ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ವ್ಯಾಪ್ತಿಯ ಹಿರೇನಾಗವಲ್ಲಿ ಗ್ರಾಮದ ಬಳಿ ಕಾನೂನುಬಾಹಿರವಾಗಿ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ವಿಧಾನರಿಷತ್‌ನಲ್ಲಿ ನಡೆದ ಸುದೀರ್ಘ ಚರ್ಚೆಗೆ ಉತ್ತರಿಸಿದ ಅವರು, ‘ಹೊಸ ಗಣಿ ನೀತಿಯ ಕರಡು ಸಿದ್ಧವಾಗಿದೆ. ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಲ್ಲರಿಗೂ ಅದನ್ನು ಕಳುಹಿಸಿಕೊಟ್ಟು ಅಭಿಪ್ರಾಯ ಪಡೆದ ಬಳಿಕ ಅಂತಿಮಗೊಳಿಸಲಾಗುವುದು’ ಎಂದರು.

‘ಇಲಾಖೆಯಲ್ಲಿ ಶೇ 40ರಷ್ಟು ಸಿಬ್ಬಂದಿ ಕೊರತೆಯಿದೆ. ಅಕ್ರಮ ಗಣಿಗಾರಿಕೆಯಲ್ಲಿ ಎಷ್ಟೇ ಪ್ರಭಾವಿಗಳಿದ್ದರೂ ಅಂಥವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಸವಾಲಿನ ಕೆಲಸವಾದರೂ ಸುಧಾರಣೆಗೆ ಬದ್ಧನಾಗಿದ್ದೇನೆ. ಹೊಸ ಗಣಿ ನೀತಿ ಜಾರಿಯಿಂದ ಪರವಾನಗಿ, ನಿರಾಪೇಕ್ಷಣಾ ಪತ್ರ ಪಡೆಯುವ ವ್ಯವಸ್ಥೆ ಸರಳೀಕರಣವಾಗಲಿದೆ’ ಎಂದರು.

‘ಗಣಿಗಳಲ್ಲಿ ಕೌಶಲ ಹೊಂದಿದ ಕೆಲಸಗಾರರಿಲ್ಲ. ಈ ಕಾರಣಕ್ಕೆ ಸ್ಕೂಲ್ ಆಫ್ ಮೈನಿಂಗ್ ಆರಂಭಿಸಿ ತರಬೇತಿ ನೀಡಲು ಚಿಂತನೆಯಿದೆ. ಮುಂದೆ ಗಣಿ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆಯೂ ಯೋಚನೆಯಿದೆ’ ಎಂದ ಅವರು, ‘ಕಳೆದೊಂದು ತಿಂಗಳಿಂದ ಗಣಿಗಾರಿಕೆ ಸ್ಥಗಿತಗೊಂಡಿದೆ. ಪರವಾನಗಿ ಪಡೆಯಲು ಕನಿಷ್ಠ 3 ತಿಂಗಳು ಬೇಕಿದೆ. ಹೀಗಾಗಿ, 60 ದಿನಗಳ ಒಳಗೆ ಪರವಾನಗಿ ಪಡೆದುಕೊಳ್ಳುವಂತೆ ಷರತ್ತಿನಲ್ಲಿ ಅನುಮತಿ ನೀಡಲು ಉದ್ದೇಶಿಸಲಾಗಿದೆ. ನಾಲ್ಕು ವಿಭಾಗಗಳು ಮತ್ತು ಮಂಗಳೂರಿನಲ್ಲಿ ಗಣಿ ಅದಾಲತ್ ಆಯೋಜಿಲು ಕೂಡಾ ತೀರ್ಮಾನಿಸಲಾಗಿದೆ’ ಎಂದರು.

‘ಮರಳು ನೀತಿಯನ್ನು ಕೂಡಾ ಶೀಘ್ರದಲ್ಲಿಯೇ ಜಾರಿಗೆ ತರುವ ಚಿಂತನೆಯಿದೆ. ಆ ಮೂಲಕ, ₹ 10 ಲಕ್ಷಕ್ಕೆ ಕಡಿಮೆ ವೆಚ್ಚದಲ್ಲಿ ಮನೆ ಕಟ್ಟುವರಿಗೆ ಉಚಿತವಾಗಿ ಮರಳು ಒದಗಿಸಲು ಮತ್ತು ₹ 10 ಲಕ್ಷಕ್ಕಿಂತ ಹೆಚ್ಚಿನ ವೆಚ್ಚದಲ್ಲಿ ಮನೆ, ಕಟ್ಟಡ ಕಟ್ಟುವರಿಗೆ ಚದರ ಅಡಿ ಲೆಕ್ಕ ಹಾಕಿ ರಾಜಸ್ವ ಸಂಗ್ರಹಿಸಲು ಉದ್ದೇಶಿಸಲಾಗಿದೆ’ ಎಂದು ವಿವರಿಸಿದರು.

‘ಚಿಕ್ಕಬಳ್ಳಾಪುರ ಬಳಿ ನಡೆದ ಸ್ಫೋಟ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ಘಟನೆಗೆ ಕಾರಣರಾದವರನ್ನು ಈಗಾಗಲೇ ಬಂಧಿಸಲಾಗಿದೆ. ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ವಾಸ್ತವಾಂಶ ಪೊಲೀಸ್ ತನಿಖೆಯಿಂದ ಹೊರಬರುವ ವಿಶ್ವಾಸವಿದೆ’ ಎಂದರು.

ಚರ್ಚೆ ವೇಳೆ ಮಾತನಾಡಿದ ವಿರೋಧ ಪಕ್ಷದ ನಾಯಕ ಎಸ್‌.ಆರ್. ಪಾಟೀಲ, ‘ಕಲ್ಲು ಕ್ವಾರಿಗಳಲ್ಲಿ ಹಫ್ತಾ ವಸೂಲಿ ಎಗ್ಗಿಲ್ಲದೆ ನಡೆಯುತ್ತಿದೆ. ಅಕ್ರಮ ನಿಲ್ಲಿಸಲು ಸ್ವತಃ ಮುಖ್ಯಮಂತ್ರಿಯೇ ಅಸಹಾಯಕರಾಗಿರುವ ಸ್ಥಿತಿ ಬಂದಿದೆ’ ಎಂದರು.

‘ಪರವಾನಗಿ ಹೊಂದಿರುವವರು ಮಾತ್ರ ಸ್ಫೋಟಕ ಬಳಸಲು ವ್ಯವಸ್ಥೆ ಮಾಡಬೇಕು. ಚಿಕ್ಕಬಳ್ಳಾಪುರದಲ್ಲಿ ಸಂಭವಿಸಿದ ಘಟನೆಯನ್ನು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು. ಕಾಂಗ್ರೆಸ್‌ನ ನಾರಾಯಣಸ್ವಾಮಿ, ಪ್ರತಾಪ್‌ಚಂದ್ರ ಶೆಟ್ಟಿ, ಹರೀಶ್ ಕುಮಾರ್, ಪ್ರಸನ್ನ ಕುಮಾರ್, ಪ್ರಕಾಶ್ ರಾಥೋಡ್ ಕೂಡಾ ಪಾಟೀಲರ ಆಗ್ರಹಕ್ಕೆ ಧ್ವನಿಗೂಡಿಸಿದರು.

ಕೆ.ಎಚ್‌. ಪಾಟೀಲರಿಗೆ ಕೈತಪ್ಪಿದ್ದ ಸಿ.ಎಂ ಹುದ್ದೆ: ಸಂಸದ ಬಸವರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಜಿ.ಎಸ್‌.ಬಸವರಾಜ್, ಪಿ.ವಿಶ್ವನಾಥ ಶೆಟ್ಟಿ, ಕೆ.ಎಚ್‌.ಪಾಟೀಲ ಅಭಿಮಾನಿಗಳ ಬಳಗದ ಕಾರ್ಯದರ್ಶಿ ಕೆ.ದಿವ್ಯಾನಂದ ಮತ್ತು ವಿ.ಆರ್‌.ಸುದರ್ಶನ್ ಅವರು ಕೆ.ಎಚ್‌.ಪಾಟೀಲರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಿಸ್ವಾರ್ಥ ಮನೋಭಾವದ ಕೆ.ಎಚ್. ಪಾಟೀಲರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಬಂದಿತ್ತು. ಆದರೆ, ರಾಜಕೀಯ ಕಾರಣಗಳಿಗಾಗಿ ಈ ಅವಕಾಶ ಅವರ ಕೈ ತಪ್ಪಿತು’ ಎಂದು ತುಮಕೂರು ಸಂಸದ ಜಿ.ಎಸ್. ಬಸವರಾಜ್ ನೆನಪು ಮಾಡಿಕೊಂಡರು.

ದಿವಂಗತ ಕೆ.ಎಚ್. ಪಾಟೀಲರ 97ನೇ ಜನ್ಮದಿನದ ಅಂಗವಾಗಿ ಮಂಗಳವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರಾಜಕೀಯ ಮುತ್ಸದ್ದಿಯಾಗಿದ್ದ ಕೆ. ಎಚ್ ಪಾಟೀಲರು ತಮಗಾಗಿ ಮತ್ತು ಕುಟುಂಬಕ್ಕಾಗಿ ಯಾವುದೇ ಆಸ್ತಿಯನ್ನು ಮಾಡದೇ ಸಮಾಜದ ಅಭಿವೃದ್ಧಿಗೆ ಶ್ರಮಿಸಿದರು’ ಎಂದು ಹೇಳಿದರು.

‘ಸಹಕಾರ ರಂಗದ ಭೀಷ್ಮ ಎನಿಸಿದ್ದ ಅವರು ಹುಲಕೋಟಿ ಹುಲಿ ಎಂದೇ ಪ್ರಸಿದ್ಧರಾಗಿದ್ದರು. ದೆಹಲಿಯ ರಾಜಕೀಯವನ್ನು ಹಳ್ಳಿಗೆ ತಂದವರು ಅವರು. ಇಂದಿರಾಗಾಂಧಿಯವರು ಚಿಕ್ಕಮಗಳೂರು ಚುನಾವಣೆಯಲ್ಲಿ ಸ್ಪರ್ಧಿಸಿದ್ದ ವೇಳೆ, ಜನತಾ ಪಕ್ಷದಿಂದ ಸ್ಪರ್ಧಿಸಿದ್ದ ವೀರೇಂದ್ರ ಪಾಟೀಲರ ಪರವಾಗಿ ಏಕಾಂಗಿಯಾಗಿ ಕೆ.ಎಚ್. ಪಾಟೀಲರು ಹೋರಾಡಿದ್ದರು’ ಎಂದು ಸ್ಮರಿಸಿದರು.

ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ್ ಶೆಟ್ಟಿ, ‘ಅಪರೂಪದ ವ್ಯಕ್ತಿಯಾಗಿದ್ದ ಪಾಟೀಲರು ಸಮಾಜ ಸೇವೆಯನ್ನೇ ಉಸಿರಾಗಿಸಿಕೊಂಡಿದ್ದರು. ಅವರಂತಹ ಸಾವಿರಾರು ಜನ ಹುಟ್ಟಿ ಬಂದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ’ ಎಂದರು.

ಉಪಚುನಾವಣೆ: ಸ್ಪರ್ಧೆಯ ಬಗ್ಗೆ ತೀರ್ಮಾನಿಸದ ಜೆಡಿಎಸ್

ಬಿಜೆಪಿ– ಕಾಂಗ್ರೆಸ್ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರ, ಬಸವಕಲ್ಯಾಣ ಮತ್ತು ಮಸ್ಕಿ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ವೇದಿಕೆ ಸಜ್ಜುಪಡಿಸಿಕೊಂಡಿದ್ದು, ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ಜೆಡಿಎಸ್ ತೀರ್ಮಾನ ಇನ್ನಷ್ಟೇ ಹೊರಬೀಳಬೇಕಿದೆ.

ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳಲ್ಲೂ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಹೆಚ್ಚೇ ಇದೆ. ಬಿಜೆಪಿಯಿಂದ ದಿವಂಗತ ಸುರೇಶ್ ಅಂಗಡಿ ಪುತ್ರಿ ಶ್ರದ್ಧಾ ಶೆಟ್ಟರ್, ರಮೇಶ ಕತ್ತಿ, ಪ್ರಭಾಕರ ಕೋರೆ, ಮಹಂತೇಶ ಕವಟಗಿಮಠ ಅವರ ಹೆಸರು ಮುಂಚೂಣಿಯಲ್ಲಿದ್ದರೆ, ಕಾಂಗ್ರೆಸ್‌ನಿಂದ ಸತೀಶ ಜಾರಕಿಹೊಳಿ, ಪ್ರಕಾಶ್ ಹುಕ್ಕೇರಿ, ಅಂಜಲಿ ನಿಂಬಾಳ್ಕರ್, ಚೆನ್ನರಾಜ್(ಲಕ್ಷ್ಮಿ ಹೆಬ್ಬಾಳ್ಕರ್ ತಮ್ಮ) ಅವರ ಹೆಸರು ಚಾಲ್ತಿಯಲ್ಲಿವೆ.

ಬಿಜೆಪಿ ಈಗಾಗಲೇ ಕೆಲವು ಹೆಸರುಗಳನ್ನು ಪಕ್ಷದ ವರಿಷ್ಠರಿಗೆ ಕಳುಹಿಸಿದೆ. ಅಂತಿಮವಾಗಿ ಪಕ್ಷದ ವರಿಷ್ಠರೇ ತೀರ್ಮಾನವನ್ನು ತೆಗೆದುಕೊಳ್ಳಲಿದ್ದು, ಚಾಲ್ತಿಯಲ್ಲಿ ಇಲ್ಲದ ಹೆಸರು ಹೊರಬಿದ್ದರೂ ಅಚ್ಚರಿ ಇಲ್ಲ ಎನ್ನುತ್ತವೆ ಬಿಜೆಪಿ ಮೂಲಗಳು.

ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ಪ್ರತಾಪ ಗೌಡ ಪಾಟೀಲ ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರಿಂದ ಉಪಚುನಾವಣೆ ಎದುರಾಗಿದೆ. ಈ ಕ್ಷೇತ್ರದಿಂದ ಪ್ರತಾಪಗೌಡ ಅವರನ್ನೇ ಕಣಕ್ಕೆ ಇಳಿಸುವ ಸಾಧ್ಯತೆ ಹೆಚ್ಚು. ಕಾಂಗ್ರೆಸ್‌ನಿಂದ ಬಸನಗೌಡ ತುರವಿಹಾಳ್ ಅಭ್ಯರ್ಥಿಯಾಗುವ ಸಾಧ್ಯತೆ ಹೆಚ್ಚು. ಇವರು ಇತ್ತೀಚೆಗೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.

ಬಸವಕಲ್ಯಾಣ ಕ್ಷೇತ್ರದ ಶಾಸಕರಾಗಿದ್ದ ಬಿ. ನಾರಾಯಣ ರಾವ್ ಅವರ ನಿಧನದಿಂದ ಉಪ ಚುನಾವಣೆ ಎದುರಾಗಿದೆ. ಇಲ್ಲೂ ಎರಡೂ ಪಕ್ಷಗಳಲ್ಲಿ ಟಿಕೆಟ್ ಆಕಾಂಕ್ಷಿಗಳು ಇದ್ದಾರೆ. ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಹೆಸರೂ ಕೇಳಿಬಂದಿತ್ತು. ಆದರೆ ತಾವು ಆಕಾಂಕ್ಷಿಯಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಬಿಜೆಪಿಯಿಂದ ಎಂ.ಜಿ. ಮುಳೆ, ಶರಣು ಸಲಗಾರ, ಮಲ್ಲಿಕಾರ್ಜುನ ಖೂಬ. ಕಾಂಗ್ರೆಸ್‌ನಿಂದ ನಾರಾಯಣರಾವ್ ಪತ್ನಿ ಮಲ್ಲಮ್ಮ, ವಿಧಾನಪರಿಷತ್ತಿನ ಸದಸ್ಯರಾಗಿರುವ ವಿಜಯ್ ಸಿಂಗ್, ಚಂದ್ರಶೇಖರ ಪಾಟೀಲ ಅವರ ಹೆಸರೂ ಇವೆ.

ಬಿಜೆಪಿ ಮೂರೂ ಕ್ಷೇತ್ರಗಳಿಗೂ ಉಸ್ತುವಾರಿ ಮತ್ತು ಸಹ ಉಸ್ತುವಾರಿಗಳನ್ನು ನೇಮಕ ಮಾಡಿದೆ. ರಾಜ್ಯದ ಸರ್ಕಾರದ ಹಿರಿಯ ಸಚಿವರಿಗೆ ಉಸ್ತುವಾರಿ ನೀಡಲಾಗಿದೆ. ಕಾಂಗ್ರೆಸ್ ಕೂಡ ಪ್ರಭಾವಿ ಮುಖಂಡರನ್ನು ಉಸ್ತುವಾರಿಗಳನ್ನಾಗಿ ನೇಮಿಸಿದೆ. ಎರಡೂ ಪಕ್ಷಗಳು ಇಲ್ಲಿ ಚುನಾವಣೆಗೆ ಸಿದ್ಧತೆ ನಡೆಸಿವೆ. ಪ್ರಚಾರ ಕಾರ್ಯವೂ ಆರಂಭವಾಗಿದೆ.

ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ಯಾವುದೇ ಸ್ಪಷ್ಟ ತೀರ್ಮಾನ ತೆಗೆದುಕೊಂಡಿಲ್ಲ. ಎಚ್‌.ಡಿ. ಕುಮಾರಸ್ವಾಮಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವುದಿಲ್ಲ ಎಂದು ಹೇಳಿದ್ದರು. ಆ ಬಳಿಕ ತಮ್ಮ ಹೇಳಿಕೆ ಬದಲಿಸಿ, ಕಣಕ್ಕೆ ಇಳಿಸುವುದಾಗಿ ತಿಳಿಸಿದ್ದರು.

ಕೇಂದ್ರಾಡಳಿತದ ಪ್ರಸ್ತಾವವಿಲ್ಲ

ಒಂದನೇ ಪುಟದಿಂದ

ಕೇಂದ್ರಾಡಳಿತ ಪ್ರದೇಶಕ್ಕೆ ಆಗ್ರಹ: ಬೆಳಗಾವಿಯಲ್ಲಿರುವ ಮರಾಠಿ ಭಾಷಿಕರ ಮೇಲಿನ ಕನ್ನಡಪರ ಸಂಘಟನೆಗಳ ದೌರ್ಜನ್ಯ ನಿಲ್ಲುತ್ತಿಲ್ಲ. ಹೀಗಾಗಿ ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಶಿವಸೇನಾ ಮಂಗಳವಾರ ಆಗ್ರಹಿಸಿದೆ.

ಪಕ್ಷದ ಮುಖವಾಣಿ ‘ಸಾಮ್ನಾ’ದ ಸಂಪಾದಕೀಯದಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದೆ.

ಬೆಳಗಾವಿಯಲ್ಲಿ ಮರಾಠಿ ಮಾತನಾಡುವವರ ಮೇಲೆ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಇತ್ತೀಚೆಗೆ ಹಲ್ಲೆ ನಡೆಸಿದ್ದಾರೆ. ಅಂಗಡಿಗಳಿಗೆ ಅಳವಡಿಸಲಾಗಿದ್ದ ಮರಾಠಿ ಫಲಕಗಳನ್ನು ಕಿತ್ತೆಸೆಯಲಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಕ್ರಿಯಾಶೀಲರಾಗಿರುವ ಮರಾಠಿಪರ ಜನರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗುತ್ತಿದೆ ಎಂದು ಸಂಪಾದಕೀಯದಲ್ಲಿ ಟೀಕಿಸಲಾಗಿದೆ.

ಕರ್ನಾಟಕದ ಪೊಲೀಸರೂ ಮರಾಠಿ ಭಾಷಿಕರಿಗೆ ಕಿರುಕುಳ ನೀಡುತ್ತಿದ್ದಾರೆ. ಸ್ಥಳೀಯರಿಂದಲೂ ದೌರ್ಜನ್ಯ ಮುಂದುವರಿದಿದೆ. ಕರ್ನಾಟಕದ ಆಡಳಿತಾರೂಢ ಬಿಜೆಪಿ ಸರ್ಕಾರ ಇಂಥ ದುಷ್ಕೃತ್ಯಗಳನ್ನು ಬೆಂಬಲಿಸುತ್ತಿದೆ ಎಂಬ ಅನುಮಾನ ಮೂಡುತ್ತಿದೆ ಎಂದು ಶಿವಸೇನಾ ಆರೋಪಿಸಿದೆ.

‘ಮಹಾರಾಷ್ಟ್ರದಲ್ಲಿ ವಿವಿಧ ಭಾಷೆ ಮಾತನಾಡುವವರು ಅನೇಕ ದಶಕಗಳಿಂದ ವಾಸಿಸುತ್ತಿದ್ದಾರೆ. ಆದರೆ, ಪರಭಾಷಿಕರೊಂದಿಗೆ ಮರಾಠಿಗರು ಎಂದೂ ಕೆಟ್ಟದಾಗಿ ನಡೆದುಕೊಂಡಿಲ್ಲ. ಇಂದೋರ್, ವಡೋದರಾ ನಗರಗಳಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಮರಾಠಿಗರು ಇದ್ದಾರೆ. ಆದರೆ, ಅವರು ಸ್ಥಳೀಯರೊಂದಿಗೆ ಸಂಘರ್ಷ ಎದುರಿಸಿಲ್ಲ’ ಎಂದೂ ಸಂಪಾದಕೀಯದಲ್ಲಿ ವಿವರಿಸಲಾಗಿದೆ.

‘ಈ ವಿಷಯ ಕುರಿತು ಕರ್ನಾಟಕದ ಮುಖ್ಯಮಂತ್ರಿ, ಕೇಂದ್ರದ ಸಚಿವರೊಂದಿಗೆ ಚರ್ಚಿಸಬೇಕು’ ಎಂದು ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಅವರಿಗೆ ಮನವಿ ಮಾಡಲಾಗಿದೆ.

ಸಚಿವರಿಗೆ ‘ಬಹಿಷ್ಕಾರ’ದ ಮುಜುಗರ

ಒಂದನೇ ಪುಟದಿಂದ

ಪರಿಷತ್‌ನಲ್ಲಿ ಧರಣಿ: ಕಾಂಗ್ರೆಸ್‌ನ ಪಿ.ಆರ್. ರಮೇಶ್ ‘ನೈತಿಕತೆ’ಯ ಕಾರಣ ನೀಡಿ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಅವರಿಗೆ ಪ್ರಶ್ನೆ ಕೇಳುವುದನ್ನು ಬಹಿಷ್ಕರಿಸುವುದಾಗಿ ಹೇಳಿದರು.

ರಮೇಶ್ ನಿಲುವನ್ನು ವಿರೋಧಿಸಿದ ಬಿಜೆಪಿ ಸದಸ್ಯರು, ಉಪ ಪ್ರಶ್ನೆ ಕೇಳಲು ಅವಕಾಶ ಕೋರಿದರು. ‘ಪ್ರಶ್ನೆಯನ್ನು ಬಹಿಷ್ಕರಿಸಲು ನಿಯಮಗಳಲ್ಲಿ ಅವಕಾಶವಿಲ್ಲ’ ಎಂದು ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಹೇಳಿದರು. ಪ್ರಶ್ನೆ ಬಹಿಷ್ಕರಿಸುವುದು ದಾಖಲಾಗಬೇಕು ಎಂದು ಪಟ್ಟು ಹಿಡಿದ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ಆರಂಭಿಸಿದರು. ಅದರ ನಡುವೆಯೇ ಬಿಜೆಪಿಯ ಸುನೀಲ್ ಸುಬ್ರಮಣಿ ಉಪ ಪ್ರಶ್ನೆ ಕೇಳಿದರು.

ಗದ್ದಲ ಜೋರಾಗುತ್ತಿದ್ದಂತೆ ಹತ್ತು ನಿಮಿಷ ಕಲಾಪ ಮುಂದೂಡಿದ ಉಪ ಸಭಾಪತಿ, ನಾಯಕರನ್ನು ಸಂಧಾನಕ್ಕಾಗಿ ತಮ್ಮ ಕೊಠಡಿಗೆ ಆಹ್ವಾನಿಸಿದರು. ಸಂಧಾನ ಸಭೆಯಲ್ಲಿ ಪ್ರಶ್ನೆ ಕೇಳದಿರುವ ಕಾಂಗ್ರೆಸ್ ನಿಲುವನ್ನು ಬಿಜೆಪಿ ಒಪ್ಪಿಕೊಂಡಿತು. ಕಲಾಪ ಆರಂಭವಾಗುತ್ತಿದ್ದಂತೆ, ನಿರ್ಧಾರ ಪ್ರಕಟಿಸಲಾಯಿತು. ಕಾಂಗ್ರೆಸ್ ಸದಸ್ಯರು ಧರಣಿ ಹಿಂಪಡೆದರು.

ಭೋವಿ ಸಮುದಾಯಕ್ಕೆ ವಿನಾಯ್ತಿ

ಬೆಂಗಳೂರು: ಸಾಂಪ್ರದಾಯಿಕವಾಗಿ ಬೆಂಕಿ ಉರಿಸಿ ಬಂಡೆಗಳನ್ನು ಒಡೆಯುವ ಕುಲ ಕಸುಬು ಮಾಡುತ್ತಿರುವ ಭೋವಿ ಸಮುದಾಯದ ಜನರಿಗೆ ಹೊಸ ಗಣಿ ನೀತಿಯಲ್ಲಿ ಕೆಲವು ವಿನಾಯ್ತಿಗಳನ್ನು ನೀಡಲಾಗುವುದು ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಭರವಸೆ ನೀಡಿದರು.

ಮಂಗಳವಾರ ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಗೋವಿಂದ ರಾಜು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಪ್ರಸ್ತುತ ಜಾರಿಯಲ್ಲಿರುವ ಗಣಿ ನೀತಿಯ ಪ್ರಕಾರ ಪರವಾನಗಿ ಪಡೆಯದೆ ನಡೆಸುವ ಎಲ್ಲ ರೀತಿಯ ಕಲ್ಲು ಗಣಿಗಾರಿಕೆಯನ್ನೂ ಅಕ್ರಮ ಎಂದು ಪರಿಗಣಿಸಲಾಗುತ್ತಿದೆ. ಭೋವಿ ಸಮುದಾಯದ ಜನರು ಸಾಂಪ್ರದಾಯಿಕವಾಗಿ ನಡೆಸುವ ಕಲ್ಲು ಗಣಿಗಾರಿಕೆಗೆ ಸರಳವಾಗಿ ಅನುಮತಿ ನೀಡುವುದಕ್ಕೆ ಹೊಸ ಗಣಿ ನೀತಿಯಲ್ಲಿ ಅವಕಾಶ ಕಲ್ಪಿಸಲಾಗುವುದು’ ಎಂದರು.

ಉತ್ತರದಲ್ಲಿ ಬಿರುಸುಗೊಂಡಿರುವ ರೈತ ಚಳವಳಿಯನ್ನು ದಕ್ಷಿಣ ಭಾರತಕ್ಕೆ ವಿಸ್ತರಿಸುವ ಯತ್ನ

ರಾಜ್ಯದಲ್ಲೂ ರೈತ ಮಹಾ ಪಂಚಾಯತ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ದಕ್ಷಿಣ ರಾಜ್ಯಗಳಲ್ಲೇ ಮೊದಲ ರೈತ ಮಹಾ ಪಂಚಾಯತ್ ಮಾ.20ರಂದು
- ‘ಸಂಯುಕ್ತ ಹೋರಾಟ–ಕರ್ನಾಟಕ’ ಹೆಸರಿನಲ್ಲೂ ಹೋರಾಟ ಮುನ್ನಡೆ
- 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ

ಬೆಂಗಳೂರು: ಉತ್ತರ ಭಾರತದಲ್ಲಿ ಬಿರುಸುಗೊಂಡಿರುವ ರೈತ ಚಳವಳಿಯನ್ನು ದಕ್ಷಿಣ ಭಾರತಕ್ಕೆ ವಿಸ್ತರಿಸುವ ಯತ್ನದ ಭಾಗವಾಗಿ ರೈತ ಮಹಾ ಪಂಚಾಯತ್ ನಡೆಸಲು ಸಂಘಟನೆಗಳು ಸಿದ್ಧತೆ ನಡೆಸಿವೆ.

ದಕ್ಷಿಣ ರಾಜ್ಯಗಳಲ್ಲೇ ಮೊದಲ ರೈತ ಮಹಾ ಪಂಚಾಯತ್ ಮಾ.20ರಂದು ಶಿವಮೊಗ್ಗದಲ್ಲಿ ನಡೆಯಲಿದೆ. ದೆಹಲಿಯ ಗಡಿಗಳಲ್ಲಿ ರೈತರ ಹೋರಾಟ ಆರಂಭವಾದ ದಿನದಿಂದ ಕರ್ನಾಟಕದಲ್ಲಿ ರೈತ, ದಲಿತ, ಕಾರ್ಮಿಕ ಸಂಘಟನೆಗಳ ಐಕ್ಯ ಹೋರಾಟ ಸಮಿತಿ ನೇತೃತ್ವದಲ್ಲಿ ಒಗ್ಗಟ್ಟಿನ ಹೋರಾಟ ನಡೆಯುತ್ತಿದೆ. ಬಳಿಕ ‘ಸಂಯುಕ್ತ ಹೋರಾಟ–ಕರ್ನಾಟಕ’ ಹೆಸರಿನಲ್ಲೂ ಹೋರಾಟ ಮುನ್ನಡೆಯುತ್ತಿದೆ.

ಶಿವಮೊಗ್ಗದಲ್ಲಿ ನಡೆಯಲಿರುವ ರೈತ ಮಹಾ ಪಂಚಾಯತ್‌ಗೆ ಎಲ್ಲಾ ರೈತ, ಕಾರ್ಮಿಕ ಮತ್ತು ದಲಿತ ಸಂಘಟನೆಗಳು ಬೆಂಬಲ ನೀಡಿವೆ. ಹೀಗಾಗಿ, ಶಿವಮೊಗ್ಗದ ಈ ಮಹಾ ಪಂಚಾಯತ್ ರೈತ ಚಳವಳಿಗೆ ಹೊಸ ಭಾಷ್ಯವನ್ನೇ ಬರೆಯಲಿದೆ ಎಂಬುದು ಸಂಘಟಕರ ವಿಶ್ವಾಸ.

ಈ ಮಹಾ ಪಂಚಾಯತ್‌ನಲ್ಲಿ ಹೋರಾಟಗಾರರಾದ ರಾಕೇಶ್ ಟಿಕಾಯತ್, ಡಾ.ದರ್ಶನ್ ಪಾಲ್ ಮತ್ತು ಯುದ್ಧವೀರ ಸಿಂಗ್ ಭಾಗವಹಿಸುತ್ತಿರುವುದು ರೈತರ ಈ ಸಂಚಲನಕ್ಕೆ ಕಾರಣವಾಗಿದೆ. ರೈತ ಸಂಘಟನೆಗಳ ವಿಘಟನೆಯಿಂದ ಬೇಸರಗೊಂಡು ಹೋರಾಟಗಳಿಂದ ದೂರ ಉಳಿದಿದ್ದ ಹಲವು ರೈತ ಮುಖಂಡರು ಈ ಮಹಾ ಪಂಚಾಯತ್‌ನಲ್ಲಿ ಭಾಗವಹಿಸಲು ಮುಂದಾಗಿದ್ದಾರೆ ಎಂದು ಶಿವಮೊಗ್ಗ ರೈತ ಮಹಾ ಪಂಚಾಯತ್‌ನ ಮುಖಂಡ ಕೆ.ಎಲ್. ಅಶೋಕ್ ತಿಳಿಸಿದರು.

ಶಿವಮೊಗ್ಗದಲ್ಲಿ ನಡೆಯುತ್ತಿರುವ ಈ ಐತಿಹಾಸಿಕ ಚಳವಳಿಯಲ್ಲಿ 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ. ಎಲ್ಲಾ ರೈತ ಸಂಘಟನೆಗಳು, ದಲಿತ ಮತ್ತು ಕಾರ್ಮಿಕ ಸಂಘಟನೆಗಳು ಬೆಂಬಲ ನೀಡಿವೆ. ಹೋಬಳಿ ಮಟ್ಟದಿಂದ ಗ್ರಾಮ ಮಟ್ಟದ ತನಕ ಈ ಸಂಚಲನ ತಲುಪಿದೆ ಎಂದು ಹೇಳಿದರು.

ರಾಜಕೀಯ ಪಕ್ಷಗಳ ಮುಖಂಡರು ಈ ಹೋರಾಟದಲ್ಲಿ ಭಾಗವಹಿಸಿದರೂ ರೈತ ಸಂಘಟನೆಗಳ ವೇದಿಕೆಯಡಿ ಮಹಾ ಪಂಚಾಯತ್ ನಡೆಯಲಿದೆ. ಯಾವುದೇ ಪಕ್ಷದ ಬ್ಯಾನರ್‌ಗಳು ಬಳಕೆಯಾಗುವುದಿಲ್ಲ. ಸಂಪೂರ್ಣ ಹಸಿರುಮಯವಾಗಲಿದೆ ಎಂದು ಅವರು ವಿವರಿಸಿದರು.

ಶಿವಮೊಗ್ಗ ಮಾತ್ರವಲ್ಲ; ರಾಜ್ಯದ ಹಲವು ಜಿಲ್ಲೆಗಳಿಂದ ರೈತರು ಹೊಸ ಉತ್ಸಾಹದಿಂದ ಹೊರಟಿದ್ದಾರೆ. ಮರುದಿನ ಮಾ.21ರಂದು ಹಾವೇರಿಯಲ್ಲೂ ಇದೇ ರೀತಿಯ ಸಮಾವೇಶ ಆಯೋಜನೆಗೊಂಡಿದೆ ಎಂದು ಹೇಳಿದರು.

ಮಾ.22ರಂದು ಬೆಂಗಳೂರಿನಲ್ಲಿ ವಿಧಾನಸೌಧ ಮುತ್ತಿಗೆ ಹಾಕುವ ಹೋರಾಟ ಹಮ್ಮಿಕೊಳ್ಳಲಾಗಿದೆ. ಅಲ್ಲಿಗೂ ರಾಜ್ಯದೆಲ್ಲಡೆಯಿಂದ ರೈತರು ಬರಲಿದ್ದಾರೆ ಎಂದರು.

ಭೂಸುಧಾರಣೆ ತಿದ್ದುಪಡಿ ಕಾಯ್ದೆ, ವಿದ್ಯುತ್ ಖಾಸಗೀಕರಣ ನೀತಿಗಳು ರೈತರಿಗೆ ಅತ್ಯಂತ ಮಾರಕವಾಗಿವೆ. ಕೇಂದ್ರದ ರೈತ ವಿರೋಧಿ ಕಾಯ್ದೆಗಳನ್ನು ಅಮಾನತಿನಲ್ಲಿ ಇಡುವುದಾಗಿ ಪ್ರಧಾನಿ ಹೇಳಿದ್ದಾರೆ. ಆದರೆ, ರಾಜ್ಯದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಭೂಸುಧಾರಣೆ ತಿದ್ದುಪಡಿ ಕಾಯ್ದೆ ಬಗ್ಗೆ ಏನನ್ನೂ ಹೇಳದೆ ಮೌನವಾಗಿದ್ದಾರೆ. ಹೀಗಾಗಿ, ವಿಧಾನಸೌಧ ಮುತ್ತಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅವರು ವಿವರಿಸಿದರು.

ಮೈಮುಲ್ ಚುನಾವಣೆ: ಎಚ್‌ಡಿಕೆ–ಸಾ.ರಾಗೆ ಹಿನ್ನಡೆ

ಜಿ.ಟಿ. ದೇವೇಗೌಡ ಬಣದ ಪಾರಮ್ಯ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ ಮೈಸೂರಿಗೆ ಬಂದು ಪ್ರಚಾರ ನಡೆಸಿದ್ದು ಬೇಸರ ತಂದಿದೆ. ಅವರು ನನ್ನನ್ನು ಮುಗಿಸಲು ಪ್ರಯತ್ನಿಸಿದರೂ ನಾನು ಬೆಳೆಸಿದ ಹುಡುಗರನ್ನು ಮುಟ್ಟಲಾಗದು

ಜಿ.ಟಿ.ದೇವೇಗೌಡ, ಜೆಡಿಎಸ್ ಶಾಸಕ

ಮೈಸೂರು: ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದ್ದ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟದ (ಮೈಮುಲ್) ಚುನಾವಣೆಯಲ್ಲಿ, ಶಾಸಕ ಜಿ.ಟಿ.ದೇವೇಗೌಡ ಬಣ ಭರ್ಜರಿ ಜಯಭೇರಿ ಮೊಳಗಿಸಿದೆ.

ಮೈಮುಲ್ ಆಡಳಿತ ಮಂಡಳಿಯ 15 ನಿರ್ದೇಶಕ ಸ್ಥಾನಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ, 12 ಸ್ಥಾನಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹಾಗೂ ಶಾಸಕ ಸಾ.ರಾ.ಮಹೇಶ್ ಬಣಕ್ಕೆ ಕೇವಲ ಮೂರು ಸ್ಥಾನ ಲಭಿಸಿದ್ದು, ಭಾರಿ ಮುಖಭಂಗ ಅನುಭವಿಸಿದೆ.

ಇದರೊಂದಿಗೆ ಜಿ.ಡಿ.ದೇವೇಗೌಡರ ಬಣ ಮತ್ತೆ ಐದು ವರ್ಷಗಳ ಅವಧಿಗೆ ಮೈಮುಲ್ ಅಧಿಕಾರದ ಚುಕ್ಕಾಣಿ ಹಿಡಿಯುವುದು ನಿಚ್ಚಳವಾಗಿದೆ.

ಸಹಕಾರ ಕ್ಷೇತ್ರದಲ್ಲಿ ಮೈಸೂರು ಜಿಲ್ಲೆಯಲ್ಲಿ ಜಿ.ಟಿ.ದೇವೇಗೌಡರು ಹೊಂದಿರುವ ಪ್ರಾಬಲ್ಯವನ್ನು ಅಂತ್ಯಗೊಳಿಸಲು, ಕುಮಾರಸ್ವಾಮಿ ಅವರೇ ತಾಲ್ಲೂಕು ಕೇಂದ್ರಗಳಿಗೆ ತೆರಳಿ ಪ್ರಚಾರದಲ್ಲಿ ತೊಡಗಿದ್ದರು.

ಆದರೆ, ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನ ಸ್ಥಳೀಯ ಮುಖಂಡರ ಜೊತೆ ಹೊಂದಾಣಿಕೆ ಮಾಡಿಕೊಂಡ ಜಿ.ಟಿ.ದೇವೇಗೌಡ ಹಾಗೂ ಅವರ ಪುತ್ರ, ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ. ಹರೀಶ್‌ಗೌಡ ಪ್ರತಿದಾಳ ಉರುಳಿಸಿದರು.

ಸಹಕಾರ ಕ್ಷೇತ್ರದ ಈ ಚುನಾವಣೆಯು ಯಾವುದೇ ಪಕ್ಷದ ಚಿಹ್ನೆಯ ಮೇಲೆ ನಡೆಯುವುದಿಲ್ಲ. ಆದರೆ, ಪಿರಿಯಾಪಟ್ಟಣದಲ್ಲಿ ಜೆಡಿಎಸ್ ಶಾಸಕ ಕೆ.ಮಹದೇವ್, ಹುಣಸೂರಿನಲ್ಲಿ ಕಾಂಗ್ರೆಸ್ ಶಾಸಕ ಎಚ್‌.ಪಿ.ಮಂಜುನಾಥ್, ಎಚ್‌.ಡಿ.ಕೋಟೆಯಲ್ಲಿ ಕಾಂಗ್ರೆಸ್ ಶಾಸಕ ಅನಿಲ್ ಕುಮಾರ್ ಸಹಕಾರದೊಂದಿಗೆ ತಮ್ಮ ಬೆಂಬಲಿತ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರು. ಸಿದ್ದರಾಮಯ್ಯ ಅವರ ಪರೋಕ್ಷ ಬೆಂಬಲವೂ ಇತ್ತು. ಜೊತೆಗೆ ಕೆ.ಆರ್.ನಗರದಲ್ಲಿ ಸಾ.ರಾ.ಮಹೇಶ್ ಬೆಂಬಲಿಗ ಎ.ಟಿ.ಸೋಮಶೇಖರ್ ಅವರನ್ನೇ ಸೆಳೆದು ಕಣಕ್ಕಿಳಿಸಿದ್ದರು.

ಆಘಾತ: ಹಿಂದಿನ ಅಧ್ಯಕ್ಷ ಸಿದ್ದೇಗೌಡ ಹಾಗೂ ಮಾಜಿ ಶಾಸಕಿ, ಬಿಜೆಪಿಯ ಸುನೀತಾ ವೀರಪ್ಪಗೌಡ ಸೋಲು ಕಂಡಿದ್ದು, ದೇವೇಗೌಡರ ಬಣಕ್ಕೆ ಉಂಟಾದ ಏಕೈಕ ಹಿನ್ನಡೆಯಾಗಿದೆ. ಶಾಸಕ ಕೆ.ಮಹದೇವ್ ಪುತ್ರ ಪಿ.ಎಂ.ಪ್ರಸನ್ನ ಗೆದ್ದಿದ್ದಾರೆ. ಕುಮಾರಸ್ವಾಮಿ ಬಣದೊಂದಿಗೆ ಗುರುತಿಸಿಕೊಂಡಿದ್ದ, ಎಚ್‌.ಡಿ.ರೇವಣ್ಣ ಅವರ ಬಾವ ಎಸ್‌.ಕೆ.ಮಧುಚಂದ್ರ ಸೋಲು ಕಂಡಿದ್ದು, ಭಾವುಕರಾಗಿ ಮತ ಎಣಿಕೆ ಕೇಂದ್ರದಿಂದ ಹೊರನಡೆದರು.

ವಿಧಾನಮಂಡಲ ಕಲಾಪ ಮೊಟಕು ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಉಪಚುನಾವಣೆ ಘೋಷಣೆಯಾದ ಕಾರಣ ವಿಧಾನಮಂಡಲದ ಬಜೆಟ್ ಅಧಿವೇಶನ ಮೊಟಕುಗೊಳಿಸುವ ಸಾಧ್ಯತೆ ಇದೆ.

ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದೇ ಶುಕ್ರವಾರ ಉತ್ತರ ನೀಡಲಿದ್ದು, ಆ ಬಳಿಕ ಅನಿರ್ದಿಷ್ಟ ಅವಧಿಗೆ ಕಲಾಪ ಮುಂದೂಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಮೂರು ಪಕ್ಷಗಳ ನಾಯಕರು ಚುನಾವಣಾ ಪ್ರಚಾರಕ್ಕೆ ಇಳಿಯುವುದರಿಂದ, ಕಲಾಪ ಮುಂದೂಡಲು ಒಪ್ಪಿಕೊಳ್ಳಲಿದ್ದಾರೆ. ಈ ಹಿಂದಿನ ನಿರ್ಧಾರದ ಪ್ರಕಾರ ಇದೇ 26 ರವರೆಗೆ ಕಲಾಪ ನಡೆಬೇಕಿತ್ತು.

ದೇಶದ್ರೋಹ: 2014–19ರ ಅವಧಿಯಲ್ಲಿ ಪ್ರಕರಣಗಳ ಸಂಖ್ಯೆ ದ್ವಿಗುಣ: ಕೇಂದ್ರಕ್ಕೆ ತರಾಟೆ

ಲೋಕಸಭೆ: ಕಾಂಗ್ರೆಸ್–ಸರ್ಕಾರ ವಾಕ್ಸಮರ

ನವದೆಹಲಿ (ಪಿಟಿಐ): ದೇಶದ್ರೋಹ ಪ್ರಕರಣ ದಾಖಲಿಸುವ ವಿಷಯ ಮಂಗಳವಾರ ಲೋಕಸಭೆಯಲ್ಲಿ ಕಾಂಗ್ರೆಸ್ ಮತ್ತು ಸರ್ಕಾರದ ನಡುವೆ ವಾಕ್ಸಮರಕ್ಕೆ ಕಾರಣವಾಯಿತು. ಕಾಯ್ದೆ ದುರ್ಬಳಕೆ ಆಗುತ್ತಿದೆ ಎಂದು ಕಾಂಗ್ರೆಸ್ ಟೀಕಿಸಿದರೆ, 'ಪ್ರಜಾಪ್ರಭುತ್ವದ ಪಾಠ ಮಾಡುವುದು ಬೇಡ' ಎಂದು ಸಚಿವ ಜಿ.ಕಿಶನ್‌ರೆಡ್ಡಿ ಪ್ರತ್ಯುತ್ತರ ನೀಡಿದರು.

ತೆಲಂಗಾಣದ ಕಾಂಗ್ರೆಸ್ ಸದಸ್ಯ ಅನುಮುಲ ರೇವಂತ ರೆಡ್ಡಿ ಅವರು ಪ್ರಶ್ನೋತ್ತರ ವೇಳೆಯಲ್ಲಿ, ದೇಶದಲ್ಲಿ ಕಳೆದ 10 ವರ್ಷಗಳಲ್ಲಿ ದೇಶದ್ರೋಹದ ಎಷ್ಟು ಪ್ರಕರಣಗಳು ದಾಖಲಾಗಿವೆ. ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ, ವಿಚಾರಣೆ ಚುರುಕುಗೊಳಿಸಲು ಸರ್ಕಾರ ಏನು ಕ್ರಮವಹಿಸಿದೆ ಎಂದು ಪ್ರಶ್ನಿಸಿದರು.

ಮುಖ್ಯಾಂಶಗಳು
- ದೇಶದ್ರೋಹ ಪ್ರಕರಣಗಳ ಸಂಖ್ಯೆ ಕಡಿಮೆ- ಕಿಶನ್ ರೆಡ್ಡಿ
- ದೇಶದ್ರೋಹ ಸಂಬಂಧಿಸಿದ ಸೆಕ್ಷನ್ ದುರ್ಬಳಕೆ – ಮನೀಶ್ ತಿವಾರಿ

ಪರಿಸರ ಕಾರ್ಯಕರ್ತೆ ದಿಶಾರವಿ ವಿರುದ್ಧದ ಪ್ರಕರಣ ಮತ್ತು ಕಳೆದ ಜನವರಿ 26ರಂದು ರಾಜಧಾನಿಯಲ್ಲಿ ನಡೆದಿದ್ದ ಹಿಂಸಾಚಾರ ಪ್ರಕರಣವನ್ನು ಕೇಂದ್ರೀಕರಿಸಿ ಅವರು ಪ್ರಶ್ನಿಸಿದ್ದರು. ಗೃಹಖಾತೆ ರಾಜ್ಯ ಸಚಿವರೂ ಆದ ಕಿಶನ್ ರೆಡ್ಡಿ, ಇದಕ್ಕೆ ಲಿಖಿತ ಉತ್ತರ ಮಂಡಿಸಿದ್ದರು.



ಲೋಕಸಭೆಯಲ್ಲಿ ಸಚಿವ ಜಿ.ಕಿಶನ್‌ರೆಡ್ಡಿ ಮಂಗಳವಾರ ದೇಶದ್ರೋಹ ಪ್ರಕರಣ ದಾಖಲಾದ ಬಗ್ಗೆ ಮಾತನಾಡಿದರು

ಸಚಿವರು ತಮ್ಮ ಉತ್ತರದಲ್ಲಿ, 2014ರಲ್ಲಿ 47 ಪ್ರಕರಣ ದಾಖಲಾಗಿದೆ. 2015ರಲ್ಲಿ 30, 2016ರಲ್ಲಿ 35, 2017ರಲ್ಲಿ 51 ಮತ್ತು 2018ರಲ್ಲಿ 70 ಹಾಗೂ 2019ರಲ್ಲಿ 93 ಪ್ರಕರಣ ದಾಖಲಾಗಿದೆ. ಇದರಲ್ಲಿ ಕೇಂದ್ರದ ನೇರ ಪಾತ್ರ ಇಲ್ಲ ಎಂದು ತಿಳಿಸಿದ್ದರು.

ಉತ್ತರದಿಂದ ತೃಪ್ತರಾಗದ ರೆಡ್ಡಿ, ನಾನು 10 ವರ್ಷದ ಮಾಹಿತಿ ಕೇಳಿದ್ದೆ. ಒಂಬತ್ತು ವರ್ಷದ ವಿವರ ನೀಡಲಾಗಿದೆ. ಭಾಗಶಃ ಮಾಹಿತಿ ನೀಡಿ ಸದನವನ್ನು ತಪ್ಪುದಾರಿಗೆ ಎಳೆಯಲಾಗುತ್ತಿದೆ. ದೇಶದಲ್ಲಿ 2014ರ ನಂತರ ಸರ್ಕಾರದ ನೀತಿ ಖಂಡಿಸುವ ಎಲ್ಲರ ಮೇಲೂ ದೇಶದ್ರೋಹ ಪ್ರಕರಣ ದಾಖಲಿಸಲಾಗುತ್ತಿದೆ ಎಂದರು.

ಸಾಮಾಜಿಕ ಜಾಲತಾಣಗಳ ಜನಪ್ರಿಯತೆ, ಮಾಧ್ಯಮ ಜಾಗೃತಿಯ ನಂತರ ಕಾಂಗ್ರೆಸ್ ಈಗ ಪ್ರಜಾಪ್ರಭುತ್ವ ಕುರಿತು ದೊಡ್ಡ ಭಾಷಣ ನೀಡುತ್ತಿದೆ. ಆದರೂ, ದೇಶದ್ರೋಹ ಪ್ರಕರಣಗಳ ಸಂಖ್ಯೆ ಕಡಿಮೆಯೇ ಆಗಿದೆ ಎಂದು ಸಚಿವರು ತಿಳಿಸಿದರು.

ಕಾಂಗ್ರೆಸ್ ಸದಸ್ಯ ಮನೀಶ್ ತಿವಾರಿ, ದೇಶದ್ರೋಹಕ್ಕೆ ಸಂಬಂಧಿಸಿದ ಸೆಕ್ಷನ್ ದುರ್ಬಳಕೆ ಆಗುತ್ತಿದೆ ಎಂದು ಟೀಕಿಸಿದರು. ಸಚಿವರು ಇದಕ್ಕೆ, 'ಕಾಂಗ್ರೆಸ್ ಈಗ ಪ್ರಜಾಪ್ರಭುತ್ವದ ಭಾಷಣ ಮಾಡುತ್ತಿದೆ. ಅದು, ಜಯಪ್ರಕಾಶ್ ನಾರಾಯಣ ಮತ್ತು ಎ.ಬಿ.ವಾಜಪೇಯಿ ವಿರುದ್ಧವೇ ಆಂತರಿಕ ಭದ್ರತಾ ಕಾಯ್ದೆ ನಿರ್ವಹಣೆ ಅನ್ವಯ ಮೊಕದ್ದಮೆ ದಾಖಲಿಸಿತ್ತು' ಎಂದು ಉಲ್ಲೇಖಿಸಿದರು.

ದೇಶದ್ರೋಹ ಆರೋಪದ ವ್ಯಾಖ್ಯಾನ ನಿಗದಿಪಡಿಸಲು ಸರ್ಕಾರ ಚಿಂತನೆ ನಡೆಸಿದೆಯೇ ಎಂಬ ಪ್ರಶ್ನೆಗೆ ಸಚಿವರು, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ನೇತೃತ್ವದಲ್ಲಿ ಫೆಬ್ರುವರಿ 2020ರಲ್ಲಿ ಅಪರಾಧ ಕಾಯ್ದೆ ಸುಧಾರಣಾ ಸಮಿತಿ ರಚಿಸಲಾಗಿದೆ ಎಂದರು.

ಅಲ್ಲದೆ, ಗೃಹ ಸಚಿವ ಅಮಿತ್ ಶಾ ಅವರು ಉದ್ದೇಶಿತ ತಿದ್ದುಪಡಿ ಕುರಿತು ಅಗತ್ಯ ಸಲಹೆಯನ್ನು ನೀಡುವಂತೆ ರಾಜ್ಯ ಸರ್ಕಾರಗಳು, ವಿಶ್ವವಿದ್ಯಾಲಯಗಳು, ನ್ಯಾಯಾಂಗ ಸಂಸ್ಥೆಗಳಿಗೆ ಪತ್ರವನ್ನು ಬರೆದಿದ್ದಾರೆ. ಸಮಿತಿಯ ವರದಿ ಬಂದ ಬಳಿಕ ಸಂಸತ್ತಿನಲ್ಲಿಯೂ ಈ ಕುರಿತು ಚರ್ಚೆ ನಡೆಯಲಿದೆ ಎಂದು ವಿವರಿಸಿದರು.

ಕುರಾನ್ ವಿರುದ್ಧ 'ಸುಪ್ರೀಂ'ಗೆ ಪಿಐಎಲ್ ಸಲ್ಲಿಸಿರುವ ರಿಝ್ವಿ ಮೇಲೆ ಎಫ್‌ಐಆರ್

ಬರೇಲಿ, ಉತ್ತರಪ್ರದೇಶ (ಪಿಟಿಐ): ಇಸ್ಲಾಂನ ಪವಿತ್ರ ಗ್ರಂಥ ಕುರಾನ್ ಭಯೋತ್ಪಾದನೆ ಉತ್ತೇಜಿಸುತ್ತದೆ ಎಂದು ವಾದಿಸಿ, ಕುರಾನಿನ ಕೆಲವು ಆಯತ್‌ಗಳನ್ನು ತೆಗೆದುಹಾಕುವಂತೆ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವ ಉತ್ತರಪ್ರದೇಶದ ಶಿಯಾ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ವಾಸೀಂ ರಿಝ್ವಿ ವಿರುದ್ಧ ಮುಸ್ಲಿಮರ ಧಾರ್ಮಿಕ ಭಾವನೆಗಳಿಗೆ ಘಾಸಿಗೊಳಿಸಿದ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

ಅಂಜುಮನ್ ಖುದ್ದಮ್ ಎ ರಸೂಲ್ ಕಾರ್ಯದರ್ಶಿ ಶಾನ್ ಅಹ್ಮದ್ ಮತ್ತು ಇತ್ತೇಹಾದ್ ಎ ಮಿಲ್ಲತ್ ಕೌನ್ಸಿಲ್ ಎಂಬ ಸಂಘಟನೆ ನೀಡಿರುವ ದೂರುಗಳನ್ನು ಆಧರಿಸಿ ಸೋಮವಾರ ಸಂಜೆ ಕೊಟ್ವಾಲಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐಪಿಸಿಯ ಸೆಕ್ಷನ್ 295 ಎ (ಯಾವುದೇ ವರ್ಗದ, ಧರ್ಮ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವ ಮೂಲಕ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಉದ್ದೇಶದಿಂದ ಉದ್ದೇಶಪೂರ್ವಕ ಮತ್ತು ದುರುದ್ದೇಶಪೂರಿತ ಕೃತ್ಯಗಳು) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಬರೇಲಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರೋಹಿತ್ ಸಿಂಗ್ ಸಜ್ವಾನ್ ಹೇಳಿದ್ದಾರೆ.

ರಾಜಾ ಕ್ರಿಯಾ ಸಮಿತಿಯ ಅಧ್ಯಕ್ಷ ಮೌಲಾನಾ ಅಫ್ರೋಜ್ ರಾಜಾ ಖಾದ್ರಿ, ರಿಜ್ವಿಯ ಹಿಂದೆ ಪಂಥೀಯ ಶಕ್ತಿಗಳು ಕೆಲಸ ಮಾಡುತ್ತಿವೆ ಮತ್ತು ಅವುಗಳ ಮುಖವನ್ನು ತೆರೆದಿಡುವ ಸಮಯ ಬಂದಿದೆ ಎಂದು ಹೇಳಿದ್ದಾರೆ.

ಮುಸ್ಲಿಂ ಸಮುದಾಯದ ಹಲವು ಮುಖಂಡರು ರಿಝ್ವಿ ವಿರುದ್ಧ ಭಾನುವಾರ ಲಕ್ನೋದಲ್ಲಿ ಪ್ರತಿಭಟನೆ ಕೂಡ ನಡೆಸಿದ್ದಾರೆ.

ರೈಲ್ವೆ ಖಾಸಗೀಕರಣ ಇಲ್ಲ: ಗೋಯಲ್

ನವದೆಹಲಿ (ಪಿಟಿಐ): ಯಾವುದೇ ಕಾರಣಕ್ಕೂ ಭಾರತೀಯ ರೈಲ್ವೆಯನ್ನು ಖಾಸಗೀಕರಣಗೊಳಿಸುವುದಿಲ್ಲ ಎಂದು ರೈಲ್ವೆ ಸಚಿವ ಪೀಯೂಷ್ ಗೋಯಲ್ ಮಂಗಳವಾರ ಸ್ಪಷ್ಟಪಡಿಸಿದರು.

ರೈಲ್ವೆಯ ಬೇಡಿಕೆಗಳು ಹಾಗೂ ಅನುದಾನ ಕುರಿತಂತೆ ಸಂಸತ್‌ನಲ್ಲಿ ನಡೆದ ಚರ್ಚೆ ವೇಳೆ ಈ ಮಾಹಿತಿ ನೀಡಿದ ಅವರು, 'ರೈಲ್ವೆಯು ಪ್ರತಿಯೊಬ್ಬ ಭಾರತೀಯನ ಸ್ವತ್ತು. ಅದು ಭಾರತ ಸರ್ಕಾರದ ಒಡೆತನದಲ್ಲಿಯೇ ಇರಲಿದೆ' ಎಂದು ಹೇಳಿದರು.

'2019–20ನೇ ಹಣಕಾಸು ವರ್ಷದಲ್ಲಿ ರೈಲ್ವೆಗೆ ₹ 1.5 ಲಕ್ಷ ಕೋಟಿ ಅನುದಾನ ಒದಗಿಸಲಾಗಿತ್ತು. 2021–22ನೇ ಹಣಕಾಸು ವರ್ಷದಲ್ಲಿ ₹ 2.15 ಲಕ್ಷ ಕೋಟಿ ಅನುದಾನ ತೆಗೆದಿರಿಸಲಾಗಿದೆ' ಎಂದೂ ಹೇಳಿದರು.

'ಭಾರತದಲ್ಲಿ ಸ್ವಾತಂತ್ರ್ಯ ಮೇಲಿನ ನಿರ್ಬಂಧ' ವಿಚಾರ ಚರ್ಚೆ

ಬ್ರಿಟನ್ ಮೇಲ್ಮನೆಯಲ್ಲಿ ಪ್ರತಿಧ್ವನಿ

ಲಂಡನ್(ಪಿಟಿಐ): 'ಭಾರತದಲ್ಲಿರುವ ಸರ್ಕಾರೇತರ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಇತರ ಗುಂಪುಗಳ ಸ್ವಾತಂತ್ರ್ಯ' ವಿಷಯಕ್ಕೆ ಸಂಬಂಧಿಸಿದಂತೆ ಮುಂದಿನ ತಿಂಗಳು ಭಾರತಕ್ಕೆ ಭೇಟಿ ನೀಡಲಿರುವ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನೇರವಾಗಿ ಮಾತುಕತೆ ನಡೆಸಬೇಕೆಂದು ಬ್ರಿಟನ್ ಸಂಸತ್ ಸದಸ್ಯರು ಸಲಹೆ ನೀಡಿದ್ದಾರೆ.

ಬ್ರಿಟನ್ ಸಂಸತ್ತಿನ ಮೇಲ್ಮನೆಯಲ್ಲಿ ಸೋಮವಾರ 'ಭಾರತ: ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳು' ವಿಷಯ ಕುರಿತು ಚರ್ಚೆ ನಡೆಯಿತು.

ಚರ್ಚೆಯಲ್ಲಿ ಎಂಟು ಪಕ್ಷಗಳ ಸದಸ್ಯರು, 'ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾವನ್ನು ಮುಚ್ಚಿರುವುದು ಮತ್ತು ಅದರ ಅಕೌಂಟ್ ಅನ್ನು ಸ್ಥಗಿತಗೊಳಿಸಿರುವುದು, ಕಾಶ್ಮೀರದಲ್ಲಿನ ಪರಿಸ್ಥಿತಿ, ಪತ್ರಕರ್ತರ ಬಂಧನ, ಹಿಂದೂಯೇತರ ಅಲ್ಪಸಂಖ್ಯಾತರು, ದಲಿತ ಕಾರ್ಯಕರ್ತರ ಪರ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಆಂದೋಲನ ನಡೆಸುತ್ತಿರುವವ ಎನ್‌ಜಿಒಗಳಿಗೆ ಕಿರುಕುಳ ನೀಡಲಾಗುತ್ತಿದೆ ಎನ್ನುವ ಕುರಿತು ಪ್ರಧಾನಿ ಬೋರಿಸ್ ಜಾನ್ಸನ್ ಅವರು ಭಾರತದೊಂದಿಗೆ ಚರ್ಚಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಬೋರಿಸ್ ಜಾನ್ಸನ್

'ಪರಸ್ಪರ ವಿಶ್ವಾಸ ಮತ್ತು ನಂಬಿಕೆಯೊಂದಿಗೆ ಭಾರತದೊಂದಿಗೆ ಬಲವಾದ ಸಂಬಂಧ ವೃದ್ಧಿಯಾಗಿದೆ. ಭಾರತದ ಉತ್ತಮ ಸ್ನೇಹಿತನಾಗಿ ಬ್ರಿಟನ್ ಇಂಥ ಕ್ಲಿಷ್ಟಕರ ಸನ್ನಿವೇಶದಲ್ಲಿ ವಿಶ್ವಾಸದಿಂದ ನಡೆದುಕೊಳ್ಳಬೇಕಿದೆ. ಅಂದರೆ, ಪ್ರಜಾಪ್ರಭುತ್ವದಲ್ಲಿ ಮುಕ್ತ ನಾಗರಿಕ ಸಮಾಜದ ಮಹತ್ವವನ್ನು ಒತ್ತಿ ಹೇಳಬೇಕಿದೆ ಎಂದರ್ಥ' ಎಂದು ಪ್ರತಿಪಕ್ಷ ಲೇಬರ್ ಪಕ್ಷದ ಸದಸ್ಯ ರಾಯ್ ಕಾಲಿನ್ಸ್ ಅಭಿಪ್ರಾಯ ವ್ಯಕ್ತಪಡಿಸಿದರು.

ವಿದೇಶಾಂಗ, ಕಾಮನ್‌ವೆಲ್ತ್ ಮತ್ತು ಅಭಿವೃದ್ಧಿ ಕಚೇರಿಯ (ಎಫ್‌ಸಿಡಿಒ) ಸಚಿವ ಗೋಲ್ಡ್ ಸ್ಮಿತ್ ಅವರು, ಬ್ರಿಟನ್ ಮತ್ತು ಭಾರತದ ನಡುವಿನ ನಿಕಟ ಸಂಬಂಧವನ್ನು ಎತ್ತಿಹಿಡಿಯಲು ಸರ್ಕಾರದ ಪರವಾಗಿ ಪ್ರತಿಕ್ರಿಯಿಸಿದರು.

'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದೊಂದಿಗೆ ಬ್ರಿಟನ್ ವ್ಯಾಪಾರ ಮತ್ತು ಹೂಡಿಕೆಯಲ್ಲಿ ಸಹಭಾಗಿತ್ವ ಹೊಂದಿದೆ. ಅಲ್ಲದೇ, ರಕ್ಷಣಾ ಮತ್ತು ಸುರಕ್ಷತೆಯ ವಿಚಾರದಲ್ಲೂ ಉಭಯ ದೇಶಗಳ ನಡುವೆ ಉತ್ತಮ ಬಾಂಧವ್ಯವಿದೆ. ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಬ್ರಿಟನ್ ಪೂರ್ಣಪ್ರಮಾಣದಲ್ಲಿ ಭಾರತದೊಂದಿಗೆ ತೊಡಗಿಸಿಕೊಳ್ಳುವುದನ್ನು ಮುಂದುವರಿಸಲಿದೆ' ಎಂದು ಗೋಲ್ಡ್ ಸ್ಮಿತ್ ವಿವರಿಸಿದರು.

'ಬ್ರಿಟನ್ ಪ್ರಧಾನಿ ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಭಾರತದ ಸರ್ಕಾರದೊಂದಿಗೆ ದ್ವಿಪಕ್ಷೀಯ ಮಾತುಕತೆಯ ಜೊತೆಗೆ ಬಹುಪಕ್ಷೀಯ ಸಮಸ್ಯೆಗಳನ್ನೂ ಚರ್ಚಿಸಲು ಇದೊಂದು ಉತ್ತಮ ಅವಕಾಶ. ಮೇಲ್ಮನೆಯಲ್ಲಿ ಸದಸ್ಯರು ಎತ್ತಿರುವ ನಿರ್ದಿಷ್ಟ ಕಾಳಜಿಯ ವಿಷಯಗಳ ಕುರಿತು ಪ್ರಧಾನಿ ಬೋರಿಸ್ ಜಾನ್ಸನ್ ಅವರು, ಭಾರತದ ಪ್ರಧಾನಿ ಮೋದಿ ಅವರೊಂದಿಗೆ ನೇರವಾಗಿ ಮಾತುಕತೆ ನಡೆಸಲಿದ್ದಾರೆ' ಎಂದರು.

ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಭಾರತದಲ್ಲಿ ನಡೆಯುತ್ತಿರುವ ರೈತರ ಪ್ರತಿಭಟನೆಯ ಕುರಿತು ಹೌಸ್ ಆಫ್ ಕಾಮನ್ಸ್ ಸಮಿತಿಯು ವಾರದ ಹಿಂದೆಯಷ್ಟೇ ಚರ್ಚೆ ನಡೆಸಿತ್ತು.

ಸೌದಿಯಲ್ಲಿ ಮೃತ ಪತಿಯ ಅಸ್ಥಿ ಭಾರತಕ್ಕೆ ತರಲು ಕ್ರಮ: ದೆಹಲಿ ಹೈಕೋರ್ಟ್‌ಗೆ ಅರ್ಜಿ

ನವದೆಹಲಿ (ಪಿಟಿಐ): 'ಪತಿ ಸೌದಿ ಅರೇಬಿಯಾದಲ್ಲಿ ಮೃತಪಟ್ಟಿದ್ದಾರೆ. ಪತಿ ಹಿಂದೂ ಆಗಿದ್ದರೂ ಮೃತದೇಹದ ಅಂತ್ಯಸಂಸ್ಕಾರವನ್ನು ಮುಸ್ಲಿಂ ಸಂಪ್ರದಾಯದಂತೆ ಮಾಡಲಾಗಿದೆ. ಪತಿಯ ಅಸ್ಥಿಗಳನ್ನು ಹೊರತೆಗೆದು ತನಗೆ ಒಪ್ಪಿಸಲು ಕ್ರಮ ಕೈಗೊಳ್ಳುವಂತೆ ವಿದೇಶಾಂಗ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿ ಮಹಿಳೆಯೊಬ್ಬರು ದೆಹಲಿ ಹೈಕೋರ್ಟ್‌ನಲ್ಲಿ ಮಂಗಳವಾರ ಅರ್ಜಿ ಸಲ್ಲಿಸಿದ್ದಾರೆ.

ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡುವಂತೆ ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್ ಅವರು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದರು.

'ಮಹಿಳೆ ತನ್ನ ಬೇಡಿಕೆ ಈಡೇರಿಕೆಗಾಗಿ ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದಾರೆ. ಅಂತ್ಯಸಂಸ್ಕಾರಕ್ಕಾಗಿ ಪತಿಯ ಮೃತದೇಹವನ್ನು ಭಾರತಕ್ಕೆ ತರುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಈ ಮೊದಲೇ ಕೈಗೊಳ್ಳಬೇಕಿತ್ತು' ಎಂದೂ ನ್ಯಾಯಮೂರ್ತಿ ಸಿಂಗ್ ಅಭಿಪ್ರಾಯಪಟ್ಟರು. ನಂತರ, ಅರ್ಜಿ ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಿದರು.

ಸಂಜೀವ್‌ಕುಮಾರ್ ಎಂಬುವವರು ಜನವರಿ 24ರಂದು ಹೃದಯಾಘಾತದಿಂದ ಸೌದಿ ಅರೇಬಿಯಾದಲ್ಲಿ ಮೃತಪಟ್ಟರು.

ಈ ಸುದ್ದಿ ತಿಳಿದ ಸಂಜೀವ್‌ಕುಮಾರ್ ಪತ್ನಿ ಅಂಜು ಶರ್ಮಾ ಅವರು, ಪತಿಯ ಮೃತದೇಹವನ್ನು ಭಾರತಕ್ಕೆ ಕಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರು.

'ಪತಿಯ ಮೃತದೇಹವನ್ನು ಸೌದಿ-ಅರೇಬಿಯಾದಲ್ಲಿ ಹೂಳಲಾಗಿದೆ ಎಂಬ ಮಾಹಿತಿ ಫೆಬ್ರುವರಿ 18ರಂದು ತಲುಪಿದಾಗ ನನಗೆ ಆಘಾತವಾಯಿತು. ಜೆಡ್ಡಾದಲ್ಲಿರುವ ಭಾರತದ ಕಾನ್ಸುಲೇಟ್‌ನ ಅಧಿಕಾರಿಗಳು ಮರಣ ಪ್ರಮಾಣ ಪತ್ರದಲ್ಲಿ ಪತಿ ಧರ್ಮವನ್ನು ಮುಸ್ಲಿಂ ಎಂದು ತಪ್ಪಾಗಿ ನಮೂದಿಸಿದ್ದರು. ಅಂತ್ಯಕ್ರಿಯೆಯನ್ನು ಮುಸ್ಲಿಂ ಸಂಪ್ರದಾಯದಂತೆ ನೆರವೇರಿಸಲು ಅಧಿಕಾರಿಗಳು ಮಾಡಿರುವ ಈ ಪ್ರಮಾದವೇ ಕಾರಣ' ಎಂದು ಅಂಜು ಶರ್ಮಾ ಅರ್ಜಿಯಲ್ಲಿ ತಿಳಿಸಿದ್ದಾರೆ.

ಮೋದಿ ನಿರ್ದೋಷಿ ತೀರ್ಪಿನ ವಿರುದ್ಧದ ಅರ್ಜಿ ಎ.13ಕ್ಕೆ ವಿಚಾರಣೆ

ನವದೆಹಲಿ: 2002ರಲ್ಲಿ ನಡೆದ ಗುಜರಾತ್ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರನ್ನು ವಿಶೇಷ ತನಿಖಾ ತಂಡವು (ಎಸ್‌ಐಟಿ) ದೋಷ ಮುಕ್ತಗೊಳಿಸಿರುವುದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ಏಪ್ರಿಲ್ 13ರಂದು ನಡೆಯಲಿದೆ.

'ಈ ಅರ್ಜಿ ವಿಚಾರಣೆಯ ದಿನಾಂಕವನ್ನು ಮುಂದೂಡುವ ಕುರಿತ ಯಾವುದೇ ಮನವಿಯನ್ನು ಪರಿಗಣಿಸಲಾಗುವುದಿಲ್ಲ' ಎಂದು ಸುಪ್ರೀಂಕೋರ್ಟ್ ಹೇಳಿದೆ. ಹಿಂಸಾಚಾರದಲ್ಲಿ ಹತ್ಯೆಗೀಡಾದ ಮಾಜಿ ಸಂಸದ ಎಹ್ಸಾನ್ ಜಾಫ್ರಿ ಅವರ ಪತ್ನಿ ಝಾಕಿಯಾ ಜಾಫ್ರಿ ಅವರು ಈ ಅರ್ಜಿ ಸಲ್ಲಿಸಿದ್ದಾರೆ.

'ಹಲವು ವಕೀಲರು ಈಗ ಮರಾಠ ಮೀಸಲಾತಿ ಪ್ರಕರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಈ ಅರ್ಜಿ ವಿಚಾರಣೆಯನ್ನು ಏಪ್ರಿಲ್‌ನಲ್ಲಿ ನಡೆಸಬೇಕು' ಎಂದು ಜಾಫ್ರಿ ಪರ ವಕೀಲರಾದ ಕಪಿಲ್ ಸಿಬಲ್ ಅವರು ನ್ಯಾಯಮೂರ್ತಿ ಎ.ಎಂ ಖಾನ್‌ವಿಲ್ಕರ್ ಅವರಿಗೆ ಮನವಿ ಮಾಡಿದ್ದರು.

ಆದರೆ ಗುಜರಾತ್ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಈ ಅರ್ಜಿ ವಿಚಾರಣೆಯನ್ನು ಮುಂದಿನ ವಾರವೇ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

ತಿರುಪತಿ ಉಪ ಚುನಾವಣೆ: ರತ್ನಪ್ರಭಾ ಬಿಜೆಪಿ ಅಭ್ಯರ್ಥಿ?

ತಿರುಪತಿ: ಆಂಧ್ರಪ್ರದೇಶದ ತಿರುಪತಿ ಲೋಕಸಭಾ ಕ್ಷೇತ್ರಕ್ಕೆ ಏ.17ರಂದು ನಡೆಯುವ ಉಪ ಚುನಾವಣೆಯಲ್ಲಿ ಕರ್ನಾಟಕದ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ. ರತ್ನಪ್ರಭಾ ಅವರು ಬಿಜೆಪಿಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ಲೋಕಸಭಾ ಕ್ಷೇತ್ರದ (ಎಸ್.ಸಿ) ಪ್ರತಿನಿಧಿಯಾಗಿದ್ದ ಬಲ್ಲಿ ದುರ್ಗಾ ಪ್ರಸಾದ್ ರಾವ್ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ನಿಧನರಾಗಿದ್ದರು. ಆಂಧ್ರಪ್ರದೇಶದ ಮಾಜಿ ಐಎಎಸ್ ಅಧಿಕಾರಿ ದಾಸರಿ ಶ್ರೀನಿವಾಸುಲು, ತೆಲಂಗಾಣ ಕೇಡರ್‌ನ ನಿವೃತ್ತ ಮಾಜಿ ಐಪಿಎಸ್ ಅಧಿಕಾರಿ ಮುನಿ ಸುಬ್ರಹ್ಮಣ್ಯಂ ಅವರು ಸಹ ಬಿಜೆಪಿಯ ಟಿಕೆಟ್ ಆಕಾಂಕ್ಷಿಗಳು. ಪಕ್ಷವು ಒಂದೆರಡು ದಿನಗಳಲ್ಲಿ ಅಭ್ಯರ್ಥಿ ಆಯ್ಕೆಯನ್ನು ಪ್ರಕಟಿಸುವ ನಿರೀಕ್ಷೆ ಇದೆ.

ತಿರುಪತಿಯಲ್ಲಿ ರಾಜ್ಯದ ಅತಿಥಿ ಗೃಹ ಪಾರದರ್ಶಕತೆಗೆ ಕ್ರಮ

ಹೈದರಾಬಾದ್: ಕರ್ನಾಟಕ ಸರ್ಕಾರವು ತಿರುಪತಿಯಲ್ಲಿ ₹ 200 ಕೋಟಿ ವೆಚ್ಚದಲ್ಲಿ ನಿರ್ಮಿಸಲಿರುವ ಅತಿಥಿ ಗೃಹಗಳ ಯೋಜನೆಯ ಗುತ್ತಿಗೆ ಪತ್ರಗಳನ್ನು ನ್ಯಾಯಾಂಗ ಪೂರ್ವ ವೀಕ್ಷಣಾ ಆಯೋಗದ ಅನುಮತಿಗಾಗಿ ಸಲ್ಲಿಸಲಾಗಿದೆ ಎಂದು ತಿರುಮಲ ತಿರುಪತಿ ದೇವಸ್ಥಾನಂನ (ಟಿಟಿಡಿ) ಅಧಿಕಾರಿಗಳು ತಿಳಿಸಿದ್ದಾರೆ.

ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಟಿಟಿಡಿ ವೆಬ್‌ಸೈಟ್ ಮೂಲಕ ಸಾರ್ವಜನಿಕರಿಂದ ಬರುವ ಸಲಹೆಗಳು, ಆಕ್ಷೇಪಣೆಗಳನ್ನು ಅನುಮತಿ ನೀಡುವ ಮೊದಲು ಪರಿಶೀಲಿಸಲಾಗುತ್ತದೆ ಎಂದಿದ್ದಾರೆ. ಕರ್ನಾಟಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಗುದ್ದಲಿಪೂಜೆ ನೆರವೇರಿಸಿದ್ದರು. ರಾಜ್ಯ ಸರ್ಕಾರ ಈಗಾಗಲೇ ₹100 ಕೋಟಿ ವರ್ಗಾಯಿಸಿದೆ. https://judcialpreview.ap.gov.in ಮತ್ತು www.tirumala.org. ಇಲ್ಲಿ ಯೋಜನೆಯ ದಾಖಲೆಗಳು ಲಭ್ಯ ಇವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೋವಿಡ್: ಗಂಭೀರ ಸ್ಥಿತಿ ಎದುರಿಸಲು ಸಜ್ಜಾಗಿ

ನವದೆಹಲಿ: ಮಹಾರಾಷ್ಟ್ರದಲ್ಲಿ ಕೋವಿಡ್–19 ಪರಿಸ್ಥಿತಿ ನಿರ್ವಹಣೆಯ ನ್ಯೂನತೆಗಳನ್ನು ಪಟ್ಟಿ ಮಾಡಿರುವ ಕೇಂದ್ರ ಆರೋಗ್ಯ ಸಚಿವಾಲಯ, ಗಂಭೀರ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿರಬೇಕು ಹಾಗೂ ಹೆಚ್ಚು ಬಾಧಿತವಾಗಿರುವ ಜಿಲ್ಲೆಗಳಲ್ಲಿ ಲಸಿಕೆ ಅಭಿಯಾನವನ್ನು ತ್ವರಿತಗೊಳಿಸಬೇಕು ಎಂದು ಸಲಹೆ ಮಾಡಿದೆ.

ರಾಜ್ಯದಲ್ಲಿ ಸೋಂಕು ಪ್ರಕರಣಗಳು ಕಳೆದ ತಿಂಗಳು ಶೇ 171ರಷ್ಟು ವೃದ್ಧಿಯಾಗಿದೆ. ಲಸಿಕೆ ನೀಡುವುದುನ್ನು ಚುರುಕುಗೊಳಿಸುವ ಜೊತೆಗೆ ಎಂಟು ಜಿಲ್ಲೆಗಳತ್ತ ಹೆಚ್ಚಿನ ಗಮನ ಕೇಂದ್ರೀಕರಿಸಿ ಸೋಂಕು ಹರಡುವಿಕೆ ತಡೆಯಲು ಆದ್ಯತೆ ನೀಡಬೇಕು ಎಂದು ಹೇಳಿದೆ.

ಕೋವಿಡ್ ಎರಡನೇ ಅಲೆ ಆರಂಭವಾಗಬಹುದು ಎಂಬ ಆತಂಕವು ದಟ್ಟವಾಗುತ್ತಿರುವ ಹಿಂದೆಯೇ ಕೇಂದ್ರ ಆರೋಗ್ಯ ಸಚಿವಾಲಯ, ಕಟ್ಟುನಿಟ್ಟಿನ ಕ್ರಮಕ್ಕೆ ಸಲಹೆ ಮಾಡಿದೆ. ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಲಾಕ್‌ಡೌನ್ ಪರಿಣಾಮಗಳು ಸೀಮಿತವಾಗಿದೆ ಎಂದಿದೆ. ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿ ಸೀತಾರಾಂ ಕುಂಟೆ ಅವರಿಗೆ ಮೂರು ದಿನಗಳಲ್ಲಿ ಎರಡು ಪತ್ರ ಬರೆದಿರುವ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ಮಹಾರಾಷ್ಟ್ರಕ್ಕೆ ಮಾರ್ಚ್ 7–14ರ ಅವಧಿಯಲ್ಲಿ ಭೇಟಿ ನೀಡಿದ್ದ ಕೇಂದ್ರ ತಂಡದ ವರದಿಯನ್ನು ಉಲ್ಲೇಖಿಸಿದ್ದಾರೆ.



ಚಂದ್ರಬಾಬು ನಾಯ್ಡುಗೆ ನೋಟಿಸ್

ಅಮರಾವತಿ: 'ಅಮರಾವತಿ ಭೂಹಗರಣ'ಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶ ಮಾಜಿ ಮುಖ್ಯಮಂತ್ರಿ ಹಾಗೂ ಟಿಡಿಪಿ ಮುಖಂಡ ಚಂದ್ರಬಾಬು ನಾಯ್ಡು ಅವರಿಗೆ ಸಿಐಡಿ ಪೊಲೀಸರು ಮಂಗಳವಾರ ನೋಟಿಸ್ ಜಾರಿ ಮಾಡಿದ್ದಾರೆ.



'ಹಗರಣಕ್ಕೆ ಸಂಬಂಧಿಸಿದಂತೆ ತಮ್ಮನ್ನು ವಿಚಾರಣೆಗೆ ಒಳಪಡಿಸಬೇಕಾಗಿದೆ. ವಿಜಯವಾಡದಲ್ಲಿರುವ ಸಿಐಡಿ ಪ್ರಾದೇಶಿಕ ಕಚೇರಿಯಲ್ಲಿ ಮಾರ್ಚ್ 23ರಂದು ಖುದ್ದಾಗಿ ವಿಚಾರಣೆಗೆ ಹಾಜರಾಗಬೇಕು' ಎಂದು ತನಿಖಾಧಿಕಾರಿ ಲಕ್ಷ್ಮೀನಾರಾಯಣರಾವ್ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ಕರ್ನಾಟಕ ಸರ್ಕಾರ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560012.
ದೂರವಾಣಿ ಸಂಖ್ಯೆಗಳು: 080–23083858, 23083866, 23562033
ಇ–ಮೇಲ್ : commissioner.pue@gmail.com

ಎರಡನೇ ಪಿಯುಸಿ ವಾರ್ಷಿಕ ಹಾಗೂ ಪೂರಕ ಪರೀಕ್ಷೆ 2021ಕ್ಕಾಗಿ ಗೆರೆಗಳಿರುವ 40 ಪುಟಗಳ ಮತ್ತು 32 ಪುಟಗಳ ಉತ್ತರ ಪುಸ್ತಕಗಳ ಸರಬರಾಜುಗಾಗಿ ಇ–ಟೆಂಡರ್ ಪ್ರಕಟಣೆ

1) ಟೆಂಡರ್ ಉಲ್ಲೇಖ ಸಂಖ್ಯೆ ಹಾಗೂ ದಿನಾಂಕ: ಸಂಖ್ಯೆ: ಡಿಪಿಯುಇ/ಸರಬರಾಜು/ಎ.ಪಿ.ಟಿ/2020–21, ದಿನಾಂಕ: 10.03.2021. 2) ಟೆಂಡರಿನ ಅಂದಾಜು ಮೌಲ್ಯ: ರೂ.5,90,00,000/–. 3) ಇಎಂಡಿ ಹಣ: 9,00,000/–. 4) ಟೆಂಡರ್ ಪ್ರಾರಂಭದ ದಿನಾಂಕ: 16.03.2021. 5) ಬಿಡ್ ಪೂರ್ವ ಸಭೆ: 23.03.2021, ಬೆಳಿಗ್ಗೆ 11.30 ಗಂಟೆಗೆ. 6) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: 01.04.2021, ಸಂಜೆ 5.00 ಗಂಟೆಯವರೆಗೆ. 7) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 05.04.2021, ಬೆಳಿಗ್ಗೆ 11.30 ಗಂಟೆಗೆ. 8) ವಾಣಿಜ್ಯ ಬಿಡ್‌ಗಳನ್ನು ತೆರೆಯುವ ತಾತ್ಕಾಲಿಕ ದಿನಾಂಕ ಹಾಗೂ ಸಮಯ: 07.04.2021, ಬೆಳಿಗ್ಗೆ 11.30 ಗಂಟೆಗೆ. 9) ಟೆಂಡರ್‌ಗಳನ್ನು ತೆರೆಯುವ ಸ್ಥಳ: ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು– 560012.
ಸಹಿ/– ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ವಾ.ಸಾ.ಸಂ.ಇ/ಬೆಂ.ನಗರ/3123/ಆಕಾರ್/2020–21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಧಾರವಾಡ)
ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ ಧಾರವಾಡ
ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2020–21/1936 ದಿನಾಂಕ : 15.03.2021
ಅಲ್ಪಾವಧಿ ಟೆಂಡರ ಪ್ರಕಟಣೆ –55/2020–21 (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ ಇವರಿಂದ 2020–21 ನೇ ಸಾಲಿನ ಜೆ.ಜೆ.ಎಮ್. ಯೋಜನೆಯಡಿಯಲ್ಲಿ ಅಹ್ವಾನಿಸಲಾದ ಐಟಂವಾರು ಟೆಂಡರನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಹಾಗೂ Standard Document ನಂತೆ KW- 1 & KW-2, KW-3, KW-4 ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.
ವಿಷಯ : ಅಲ್ಪಾವಧಿ ಟೆಂಡರನ ಪ್ರಕಟಣೆ ಕುರಿತು.
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿಯ ಹುಬ್ಬಳ್ಳಿ ತಾಲೂಕಿನ ಈ ಕೆಳಗಾಣಿಸಿದ ಕಾಮಗಾರಿಗಳನ್ನು ಟೆಂಡರ್ ಕರೆಯಲಾಗಿದೆ ವಿವರ ಈ ಕೆಳಗಿನಂತಿದೆ.
ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events) (1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : 24.03.2021 ಸಾಯಂಕಾಲ 4.00 ಘಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25.03.2021 ಸಾಯಂಕಾಲ 4.30 ಘಂಟೆಗೆ
ಗುತ್ತಿಗೆದಾರರ ಅರ್ಹತೆ: ಇ–ಪೋರ್ಟಲ್‌ನಲ್ಲಿ ಇದ್ದಂತೆ
ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಕ್ರಸಂ.	ಕಾಮಗಾರಿ ವಿವರ	ಅಂದಾಜು ಮೊತ (ರೂ. ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ	ವರ್ಗ
1	Providing FHTC's to 460 Households in CHABBI habitation of CHABBI village, Hubballi taluk Dharwad district by Augmentation of SVS CHABBI villages in Dharwad district (44.43 LPCD)	249.00	120 ದಿನಗಳು	ಸಾಮಾನ್ಯ
2	Providing FHTC's to 518 Households in B.ARALIKATTI habitation of B.ARALIKATTI village, Hubballi taluk Dharwad district by Augmentation of SVS B.ARALIKATTI villages in Dharwad district (48.99 LPCD)	185.00	120 ದಿನಗಳು	ಸಾಮಾನ್ಯ
3	Providing FHTC's to 748 Households in KOLIWAD habitation of KOLIWAD village, Hubballi taluk Dharwad district by MVS to KOLIWAD and other 2 villages (MALLIGAWAD, UMACHAGI) in Dharwad district (44.45 LPCD)	168.00	120 ದಿನಗಳು	ಸಾಮಾನ್ಯ

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತೀಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು. ಟೆಂಡರ ಫಾರ್ಮುಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ–ಪ್ರೋಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ.
ನಂ.ವಾಸಾಸಂಇ/ಧಾ/ಎಂಸಿಎ/866/2020–21

ಸಂಕ್ಷಿಪ್ತ ಸುದ್ದಿ

ಗುಪ್ತದಳ ಕಚೇರಿಯಲ್ಲಿ ಎನ್‌ಐಎ ಶೋಧ, ದಾಖಲೆ ವಶ

ಮುಂಬೈ: ಸ್ಫೋಟಕಗಳಿದ್ದ ವಾಹನವು ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಬಳಿ ಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಅಧಿಕಾರಿಗಳು ಮಂಗಳವಾರ ಅಪರಾಧ ಗುಪ್ತದಳ ವಿಭಾಗದ (ಸಿಐಯು) ಕಚೇರಿಯಲ್ಲಿ ತಪಾಸಣೆ ನಡೆಸಿದರು. ವಿಭಾಗದ ಅಧಿಕಾರಿಯೊಬ್ಬರನ್ನು ವಿಚಾರಣೆಗೆ ಒಳಪಡಿಸಿದರು.

ಪ್ರಕರಣದ ಸಂಬಂಧ ಮಾರ್ಚ್ 13ರಂದು ಬಂಧಿಸಲಾಗಿದ್ದ ಸಚಿನ್ ವಾಜೆ ಅವರು, ದಕ್ಷಿಣ ಮುಂಬೈನಲ್ಲಿ ಪೊಲೀಸ್ ಕಮಿಷನರ್ ಅವರ ಕಚೇರಿ ಆವರಣದಲ್ಲಿಯೇ ಇರುವ ಈ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಎನ್‌ಐಎ ಅಧಿಕಾರಿಗಳು ವಾಜೆ ಅವರ ಕಚೇರಿಯಿಂದ ಕೆಲ ದಾಖಲೆಗಳು, ಲ್ಯಾಪ್‌ಟಾಪ್, ಐ–ಪಾಡ್, ಮೊಬೈಲ್ ಫೋನ್ ಅನ್ನು ವಶಕ್ಕೆ ಪಡೆದಿದ್ದಾರೆ. ಬೆಳಿಗ್ಗೆ 8ಕ್ಕೆ ಆರಂಭವಾದ ತಪಾಸಣೆ ಸಂಜೆ 4ರವರೆಗೂ ಮುಂದುವರಿಯಿತು. ಘಟನೆಗೆ ಸಂಬಂಧಿಸಿ ಎನ್‌ಐಎ ಇದುವರೆಗೂ ಏಳು ಅಧಿಕಾರಿಗಳ ಹೇಳಿಕೆಯನ್ನು ದಾಖಲಿಸಿದೆ ಎಂದು ಮೂಲಗಳು ತಿಳಿಸಿವೆ.

ಸಿನ್ಹಾ ರಾಜೀನಾಮೆ

ನವದೆಹಲಿ: 'ಪ್ರಧಾನಿ ನರೇಂದ್ರ ಮೋದಿ ಅವರ ಪ್ರಧಾನ ಸಲಹೆಗಾರ ಪ್ರದೀಪ್ ಕುಮಾರ್ ಸಿನ್ಹಾ (ಪಿ.ಕೆ. ಸಿನ್ಹಾ) ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ. 1977ನೇ ಬ್ಯಾಚಿನ ನಿವೃತ್ತ ಐಎಎಸ್ ಅಧಿಕಾರಿಯಾಗಿರುವ ಸಿನ್ಹಾ ಅವರು ಮೋದಿ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿ ಕೆಲ ಕಾಲ ಕೆಲಸ ನಿರ್ವಹಿಸಿದ್ದರು.

ಕಣ್ಗಾವಲು ಹಡಗು ಶೀಘ್ರ ಸೇವೆಗೆ

ನವದೆಹಲಿ: ಕ್ಷಿಪಣಿ ಉಡಾವಣೆ, ಜಲಾಂತರ್ಗಾಮಿ ಚಲನವಲನಗಳು ಸೇರಿದಂತೆ ಪ್ರತಿಕೂಲ ಬೆಳವಣಿಗೆಗಳ ಮೇಲೆ ಕಣ್ಗಾವಲು ಇಡುವ ಸಾಮರ್ಥ್ಯವುಳ್ಳ ಹಡಗು ಶೀಘ್ರದಲ್ಲಿಯೇ ಸೇವೆಗೆ ಲಭ್ಯವಾಗಲಿದ್ದು, ಈ ಮೂಲಕ ಭಾರತದ ಕಣ್ಗಾವಲು ವ್ಯವಸ್ಥೆಯ ಶಕ್ತಿ ವೃದ್ಧಿಸಲಿದೆ.

ಹಡಗು ನಿರ್ಮಾಣ ಚಟುವಟಿಕೆಗೆ ಹತ್ತಿರವಾಗಿರುವ ಮೂಲಗಳ ಪ್ರಕಾರ, ಕಣ್ಗಾವಲು ಸಾಮರ್ಥ್ಯದ ಹಡಗು ನಿರ್ಮಾಣ ಯೋಜನೆಯು ಬಹುತೇಕ ಮುಗಿದಿದೆ. ಒಮ್ಮೆ ಸೇವೆಗೆ ಲಭ್ಯವಾದರೆ, ಕ್ಷಿಪಣಿ ಉಡಾವಣೆ ಮೇಲೂ ಕಣ್ಗಾವಲು ಇಡಬಹುದಾದ ಸೌಲಭ್ಯವುಳ್ಳ ರಾಷ್ಟ್ರಗಳ ಪಟ್ಟಿಗೆ ಭಾರತವೂ ಸೇರಲಿದೆ ಎಂದು ತಿಳಿಸಿವೆ. ಪ್ರಸ್ತುತ ಅಮೆರಿಕ, ಬ್ರಿಟನ್, ರಷ್ಯಾ, ಚೀನಾ ಮತ್ತು ಫ್ರಾನ್ಸ್ ಮಾತ್ರ ಇಂಥ ಅತ್ಯಾಧುನಿಕ ಸೌಲಭ್ಯದ ಹಡಗು ಹೊಂದಿವೆ. ಕೆಲವೇ ತಿಂಗಳಲ್ಲಿ ಈ ಹಡಗನ್ನು ಸೇವೆಗೆ ಸಮರ್ಪಿಸಬಹುದು. ಕಾರ್ಯನಿರ್ವಹಣೆಗೆ ಪೂರ್ವಭಾವಿಯಾಗಿ ಬಹುತೇಕ ಎಲ್ಲ ಪರೀಕ್ಷೆಗಳು ಪೂರ್ಣಗೊಂಡಿವೆ ಎಂದು ಮೂಲಗಳು ವಿವರಿಸಿವೆ.

ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಚೌಗಾವ್ ಗ್ರಾಮದ ಸಮೀಪ ಘಟನೆ

2 ಸಾವಿರ ವರ್ಷಗಳ ಪುರಾತನ ರಹಸ್ಯ ಗುಹೆ ಪತ್ತೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಛೋಪ್ಡಾ ತೆಹಸಿಲ್ ಪ್ರದೇಶದ ಚೌಗಾವ್ ಗ್ರಾಮದ ಸಮೀಪ ಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ರಹಸ್ಯ ಗುಹೆಗಳನ್ನು ಪತ್ತೆ ಹಚ್ಚಲಾಗಿದೆ.

'ದಕ್ಷಿಣ ಭಾರತವನ್ನು ಬಹುಕಾಲ ಆಳಿದ ಶಾತವಾಹನ ರಾಜವಂಶಸ್ಥರ ಕಾಲದಲ್ಲಿ ಈ ರಹಸ್ಯ ಗುಹೆಗಳು ನಿರ್ಮಾಣವಾಗಿದ್ದಿರಬಹುದು' ಎಂದು ಜಲಗಾಂವ್‌ನ ಪುರಾತತ್ತ್ವ ಶಾಸ್ತ್ರಜ್ಞ ಹಾಗೂ ಇತಿಹಾಸ ತಜ್ಞ ಭುಜಂಗ್ ರಾಮ್‌ರಾವ್ ಬೊಬಡೆ ಅವರು ಅಭಿಪ್ರಾಯಪಟ್ಟಿದ್ದಾರೆ. ಬೊಬಡೆ ಅವರ ನೇತೃತ್ವದಲ್ಲಿ ಅಶೋಕ್ ಪಾಟೀಲ್, ಅಥರ್ವ ಬೊಬಡೆ, ವಿಶ್ರಾಮ್ ಟೆಲಿ ಹಾಗೂ ಡಾ.ಗೋಪಾಲ್ ಪಾಟೀಲ್ ಅವರನ್ನೊಳಗೊಂಡ ತಂಡವು ಈ ಗುಹೆಗಳನ್ನು ಪತ್ತೆ ಹಚ್ಚಿದೆ.

'ಹೊರಗಿನಿಂದ ನೋಡಿದರೆ ಇಲ್ಲಿ ಗುಹೆಗಳು ಇವೆ ಎಂಬುದನ್ನು ಪತ್ತೆ ಹಚ್ಚಲು ಸಾಧ್ಯವಿಲ್ಲ. ಈ ಗುಹೆಗಳ ಬಗ್ಗೆ ಚೌಗಾವ್ ಗ್ರಾಮಸ್ಥರಿಗೆ ಕೇಳಿದಾಗ ಈ ಗುಹೆಗಳನ್ನು ನೋಡಿಲ್ಲ ಎಂಬುದಾಗಿ ಅವರೂ ತಿಳಿಸಿದ್ದಾರೆ' ಎಂದು ಹೈದರಾಬಾದ್ ಮೂಲದ ಡೆಕ್ಕನ್ ಪುರಾತತ್ತ್ವ ಮತ್ತು ಸಾಂಸ್ಕೃತಿಕ ಸಂಶೋಧನಾ ಸಂಸ್ಥೆಯ ಆರ್ಕೈವ್ಸ್ ಮತ್ತು ಮ್ಯೂಸಿಯಂ ವಿಭಾಗದ (ಡಿಎಸಿಆರ್‌ಐ) ನಿರ್ದೇಶಕರೂ ಆಗಿರುವ ಭುಜಂಗ್ ರಾಮ್‌ರಾವ್ ಬೊಬಡೆ ಮಾಹಿತಿ ನೀಡಿದ್ದಾರೆ.

'ಭಿರಮ್ ಘಾಟ್ ರಸ್ತೆಯ ಪ್ರಾಚೀನ ಮಾರ್ಗದಲ್ಲಿ ಈ ಗುಹೆಗಳನ್ನು ಪತ್ತೆ ಹಚ್ಚಲಾಗಿದೆ. ಗುಹೆಗೆ ತಲುಪುವ ಮಾರ್ಗವು ಸರಿಯಾಗಿಲ್ಲ. ಚೌಗಾವ್‌ನಿಂದ 3 ಕಿ.ಮೀ. ದೂರದವರೆಗಿರುವ ಹಳೆಯ ಶಿವ ದೇವಾಲಯದ ತನಕ ವಾಹನದಲ್ಲಿ ತೆರಳಬಹುದು. ಅಲ್ಲಿಂದ ಗುಹೆ ಇರುವ ಬೆಟ್ಟಕ್ಕೆ ಸುಮಾರು 2 ಕಿ.ಮೀ. ನಡಿಗೆಯಲ್ಲಿ ಸಾಗಬೇಕು. ನಂತರ ಬೆಟ್ಟದ ಮೇಲೆ 3 ಕಿ.ಮೀ. ಏರುಹಾದಿಯಲ್ಲಿ ಸಾಗಿದಾಗ ಶಾತವಾಹನ ರಾಜರು ನಿರ್ಮಿಸಿರುವ ಕೋಟೆಯ ಬಾಗಿಲು ತಲುಪಬಹುದು. ಅಲ್ಲಿಯೇ ಈ ಗುಹೆಗಳನ್ನು ಪತ್ತೆ ಹಚ್ಚಲಾಗಿದೆ. ಈ ಗುಹೆಗಳಿಗೆ ಪ್ರವೇಶ ಮತ್ತು ನಿರ್ಗಮನ ಎರಡೂ ದ್ವಾರಗಳಿವೆ' ಎಂದು ಬೊಬಡೆ 'ಪ್ರಜಾವಾಣಿ'ಗೆ ತಿಳಿಸಿದರು.

ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಛೋಪ್ಡಾ ತೆಹಸಿಲ್ ಪ್ರದೇಶದ ಚೌಗಾವ್ ಗ್ರಾಮದ ಸಮೀಪ ಪತ್ತೆ ಹಚ್ಚಲಾದ ಸುಮಾರು 2 ಸಾವಿರ ವರ್ಷಗಳಷ್ಟು ಪುರಾತನವಾದ ರಹಸ್ಯ ಗುಹೆಗಳು

'ಇದುವರೆಗೆ ಎಲ್ಲೂ ಈ ಗುಹೆಗಳು ಇರುವ ಬಗ್ಗೆ ದಾಖಲೆಗಳು ದೊರೆತಿಲ್ಲ. ಗುಹೆಗಳ ಒಳಗೆ ಪ್ರವೇಶ ಮಾರ್ಗದಲ್ಲಿಯೇ ನೀರಿನ ಟ್ಯಾಂಕುಗಳು, ಕಲ್ಲಿನ ಕಂಬಗಳು ಗೋಚರಿಸುತ್ತವೆ. ಹೊರಗಿನ ಜಗತ್ತಿಗೆ ಗೋಚರಿಸದ ಈ ಗುಹೆಗಳು ಹಲವು ರಹಸ್ಯ ಮಾಹಿತಿಯ ಆಗರವಾಗಿರಬಹುದು. ವಿಶೇಷವೆಂದರೆ ಈ ಗುಹೆಗಳಲ್ಲಿ ಯಾವ ದೇವರ ಅಥವಾ ದೇವತೆಯ ಚಿತ್ರಗಳಿಲ್ಲ, ಕೆತ್ತನೆಯ ಚಿನ್ಹೆಗಳೂ ಇಲ್ಲ. ವಿಗ್ರಹಗಳೂ ಇಲ್ಲದಿರುವುದು ಆಶ್ಚರ್ಯಕರ. ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವ ಅಗತ್ಯವಿದೆ. ಈ ಕುರಿತು ಈಗಾಗಲೇ ಮಹಾರಾಷ್ಟ್ರ ಸರ್ಕಾರದ ಪುರಾತತ್ವ ವಿಭಾಗ ಮತ್ತು ವಸ್ತು ಸಂಗ್ರಹಾಲಯದ ನಿರ್ದೇಶಕ ಡಾ. ತೇಜಸ್ ಗರ್ಗ್ ಅವರೊಂದಿಗೆ ಮಾಹಿತಿ ಹಂಚಿಕೊಂಡಿರುವೆ' ಎಂದೂ ಬೊಬಡೆ ತಿಳಿಸಿದ್ದಾರೆ.

'ಜಲ್‌ಗಾಂವ್ ವ್ಯಾಪಾರ ಮಾರ್ಗದಲ್ಲಿರುವುದರಿಂದ ಬಹುಶಃ ವ್ಯಾಪಾರಿಗಳು ತಮ್ಮ ಸಾಮಗ್ರಿಗಳೊಂದಿಗೆ ಈ ಗುಹೆಗಳಲ್ಲಿಯೇ ತಂಗುತ್ತಿದ್ದಿರಬಹುದು. ಗುಹೆಯ ಪ್ರವೇಶದ್ವಾರವು ನೀರಿನಿಂದ ತುಂಬಿದ್ದು, ಈ ಮಾರ್ಗದಲ್ಲಿ ನಡೆಯುವುದು ಕಷ್ಟಕರವಾಗಿದೆ. ಹಾಗಾಗಿ, ಈ ರಹಸ್ಯ ಗುಹೆಗಳು ರಾಜರು, ಸೇನಾಪತಿಗಳು ಅಡಗಿಕೊಳ್ಳುತ್ತಿದ್ದ ಸ್ಥಳವೂ ಆಗಿದ್ದಿರಬಹುದು' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ

ಪಶ್ಚಿಮ ಬಂಗಾಳ: ಬಿಜೆಪಿ ಪ್ರಚಾರ ಸಭೆಯಲ್ಲಿ ಯೋಗಿ ಆದಿತ್ಯನಾಥ ಲೇವಡಿ

ಬಿಜೆಪಿಯಿಂದಾಗಿ ದೀದಿ ದೇಗುಲಕ್ಕೆ

ದಾಸಪುರ/ಬಿಸನ್‌ಪುರ/ಬಲರಾಂಪುರ (ಪಶ್ಚಿಮ ಬಂಗಾಳ) (ಪಿಟಿಐ): ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಜನರ ಮನಸ್ಥಿತಿ ಬದಲಾಗಿದೆ. ಹೀಗಾಗಿಯೇ ಮಮತಾ ಬ್ಯಾನರ್ಜಿ ಅವರು ಹಿಂದೂಗಳ ಓಲೈಕೆಗೆ ಮುಂದಾಗಿದ್ದಾರೆ ಎಂದು ಬಿಜೆಪಿ ನಾಯಕರು ಲೇವಡಿ ಮಾಡಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸುತ್ತಿರುವ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಮತಾ ವಿರುದ್ಧ ಮಂಗಳವಾರವೂ ವಾಗ್ದಾಳಿ ಮುಂದುವರಿಸಿದ್ದಾರೆ.

ಪುರೂಲಿಯಾ ಜಿಲ್ಲೆಯ ಬಲರಾಂಪುರದಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಯೋಗಿ ಆದಿತ್ಯನಾಥ ಅವರು ಪ್ರಚಾರ ನಡೆಸಿದರು.

'2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಕೆಲವು ನಾಯಕರು ದೇವಸ್ಥಾನಗಳಿಗೆ ಭೇಟಿ ನೀಡುವುದರಿಂದ ತಮ್ಮ ಜಾತ್ಯತೀತ ನಿಲುವಿಗೆ ಧಕ್ಕೆಯಾಗುತ್ತದೆ ಎಂದು ಭಾವಿಸುತ್ತಿದ್ದರು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಜನರ ಮನಸ್ಥಿತಿ ಬದಲಾಗಿದೆ. ಈಗ ಬದಲಾವಣೆಯಾಗಿದೆ. ಮಮತಾ ದೀದಿ ಅವರು ಈಗ ದೇವಸ್ಥಾನಗಳಿಗೆ ಹೋಗಲು ಆರಂಭಿಸಿದ್ದಾರೆ. ಚಂಡಿ ಪಾಠ್ ಪಠಣ ಮಾಡುತ್ತಿದ್ದಾರೆ. ಚುನಾವಣೆ ಬಂದಾಗ ರಾಹುಲ್ ಗಾಂಧಿ ಅವರೂ ದೇವಸ್ಥಾನಗಳಿಗೆ ಹೋಗುತ್ತಾರೆ, ಸರಿಯಾಗಿ ಕೂರಿ ಎಂದು ಅರ್ಚಕರಿಂದ ಹೇಳಿಸಿಕೊಳ್ಳುತ್ತಾರೆ' ಎಂದು ಯೋಗಿ ಆದಿತ್ಯನಾಥ ಅವರು ಲೇವಡಿ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಶ್ಚಿಮ ಬಂಗಾಳದ ವಿಷ್ಣುಪುರದಲ್ಲಿ ಮಂಗಳವಾರ ರೋಡ್ ಶೋ ನಡೆಸಿದರು ಪಿಟಿಐ ಚಿತ್ರ

'ಮಮತಾ ಬ್ಯಾನರ್ಜಿ ಅವರು ತಮ್ಮ ಸರ್ಕಾರದ ಕೊನೆಯ ದಿನಗಳನ್ನು ಎಣಿಸುವ ಸಮಯ ಬಂದಿದೆ. ಅವರನ್ನು ಅಧಿಕಾರದಿಂದ ಕಿತ್ತೊಗೆಯಲು ಜನರು ತೀರ್ಮಾನಿಸಿದ್ದಾರೆ. ದೀದಿ ಅವರಿಗೆ 45 ದಿನಗಳು ಮಾತ್ರ ಉಳಿದಿವೆ' ಎಂದು ಯೋಗಿ ಹೇಳಿದ್ದಾರೆ.

ರಾಜನಾಥ್ ವಾಗ್ದಾಳಿ: 'ಮಮತಾ ಬ್ಯಾನರ್ಜಿ ಅವರ ಆಳ್ವಿಕೆಯಲ್ಲಿ ಪಶ್ಚಿಮ ಬಂಗಾಳದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಮೇ 2ರ ನಂತರ ಬಿಜೆಪಿ ಅಧಿಕಾರಕ್ಕೆ ಬರಲಿ, ನಾವು ಅಭಿವೃದ್ಧಿ ಮತ್ತು ಶಾಂತಿಯ ಆಟ ಆಡುತ್ತೇವೆ' ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ.

'ಸರ್ಕಾರದ ಒಂದು ರೂಪಾಯಿಯಲ್ಲಿ ಜನರಿಗೆ ತಲುಪುವುದು 16 ಪೈಸೆಯಷ್ಟೇ ಎಂದು ರಾಜೀವ್ ಗಾಂಧಿ ಹೇಳುತ್ತಿದ್ದರು. ಆದರೆ ಮೋದಿ ಸರ್ಕಾರವು ಜನರಿಗಾಗಿ ಬಿಡುಗಡೆಯಾದ ಪ್ರತಿ ಪೈಸೆಯೂ ಜನರಿಗೇ ತಲುಪುವಂತೆ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ಹೆದ್ದಾರಿ ಮತ್ತು ರಸ್ತೆ ಅಭಿವೃದ್ಧಿಗೆ ₹25,000 ಕೋಟಿ ನೀಡಿದ್ದೇವೆ. ಮಮತಾ ಬ್ಯಾನರ್ಜಿ ಅವರು ತಮ್ಮ ಸರ್ಕಾರದ ಹಣದಿಂದ ರಸ್ತೆ ನಿರ್ಮಿಸಿಲ್ಲ' ಎಂದು ಅವರು ಹೇಳಿದ್ದಾರೆ.

'ಓಲೈಕೆ ರಾಜಕಾರಣ'

'ಮಮತಾ ಬ್ಯಾನರ್ಜಿ ಅವರು 10 ವರ್ಷದಲ್ಲಿ ಓಲೈಕೆ ರಾಜಕಾರಣ ಬಿಟ್ಟು ಬೇರೇನೂ ಮಾಡಿಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ ಅವರು ಸರಸ್ವತಿ ಪೂಜೆಯನ್ನು ನಿಲ್ಲಿಸಿದ್ದರು. ದುರ್ಗಾ ಪೂಜೆಯನ್ನು ನಿಲ್ಲಿಸಿದ್ದರು. ಈಗ ಚುನಾವಣೆ ಬಂದಿರುವ ಕಾರಣ, ಅವರಿಗೆ ತಮ್ಮ ಹಿಂದೂ ಅಸ್ಮಿತೆ ನೆನಪಾಗಿದೆ. ಹೀಗಾಗಿ ದೇವಾಲಯಗಳಿಗೆ ಹೋಗುತ್ತಿದ್ದಾರೆ. ಸಂಸ್ಕೃತ ಶ್ಲೋಕಗಳನ್ನು ಪಠಿಸುತ್ತಿದ್ದಾರೆ' ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಟೀಕಿಸಿದ್ದಾರೆ.

ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಯಲ್ಲಿ ಮಂಗಳವಾರ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದ್ದಾರೆ. 'ಮಮತಾ ಅವರು ತಾಯಿ, ಭೂಮಿ ಮತ್ತು ಜನರ ಹೆಸರಿನಲ್ಲಿ ಚುನಾವಣೆಯನ್ನು ಗೆದ್ದಿದ್ದರು. ಆದರೆ, ಈಗ ಮಹಿಳೆಯರಿಗೆ ಕಿರುಕುಳ, ಬಿಜೆಪಿ ಕಾರ್ಯಕರ್ತರ ಹತ್ಯೆ ಮತ್ತು ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

ಕಿರುಕುಳಕ್ಕೆ ಶಾ ಸಂಚು

ಕೇಂದ್ರ ಗೃಹ ಸಚಿವರ ವಿರುದ್ಧ ಮಮತಾ ಆಕ್ರೋಶ

ರಾಯಪುರ/ಛತ್ನಾ (ಪಶ್ಚಿಮ ಬಂಗಾಳ) (ಪಿಟಿಐ): 'ಟಿಎಂಸಿ ಮುಖಂಡರಿಗೆ ಕಿರುಕುಳ ನೀಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಚು ರೂಪಿಸುತ್ತಿದ್ದಾರೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು, ಅಮಿತ್ ಶಾ ವಿರುದ್ಧ ಹರಿಹಾಯ್ದಿದ್ದಾರೆ. 'ರಾಜ್ಯದಲ್ಲಿ ಅಮಿತ್ ಶಾ ಅವರ ಪ್ರಚಾರ ಸಭೆಗಳಿಗೆ ಜನರು ಬರುತ್ತಿಲ್ಲ. ಇದರಿಂದ ಅಮಿತ್ ಶಾ ಹತಾಶೆಗೊಂಡಿದ್ದಾರೆ. ಕೋಲ್ಕತ್ತದಲ್ಲಿ ಕೂತು, ಟಿಎಂಸಿ ನಾಯಕರಿಗೆ ಕಿರುಕುಳ ನೀಡುವುದಕ್ಕೆ ಸಂಚು ರೂಪಿಸುತ್ತಿದ್ದಾರೆ' ಎಂದು ಮಮತಾ ಆರೋಪಿಸಿದ್ದಾರೆ.

'ದೇಶವನ್ನು ಮುನ್ನಡೆಸುವುದು ಬಿಟ್ಟು, ಕೇಂದ್ರ ಸಚಿವರಿಗೆ ಇಲ್ಲೇನು ಕೆಲಸ? ಅವರಿಗೆ ಏನು ಬೇಕು? ನನ್ನನ್ನು ಕೊಲ್ಲಬೇಕಿದೆಯೇ? ನನ್ನನ್ನು ಕೊಲ್ಲುವ ಮೂಲಕ ಚುನಾವಣೆ ಗೆಲ್ಲಬಹುದು ಎಂದು ಅವರು ಅಂದುಕೊಂಡಿದ್ದರೆ, ಅದು ಸುಳ್ಳು. ನನ್ನ ಮೇಲೆ ಅವರು ಎಷ್ಟೇ ದಾಳಿ ನಡೆಸಿದರೂ, ಟಿಎಂಸಿಯನ್ನು ಗೆಲ್ಲಿಸುವ ಪ್ರಯತ್ನವನ್ನು ನಾನು ಬಿಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಬಹುಶಃ ಅಮಿತ್ ಶಾ ಅವರು ಚುನಾವಣಾ ಆಯೋಗವನ್ನು ಮುನ್ನಡೆಸುತ್ತಿದ್ದಾರೆ. ಆಯೋಗಕ್ಕೆ ಶಾ ಅವರೇ ನಿರ್ದೇಶನ ನೀಡುತ್ತಿದ್ದಾರೆಯೇ? ಆಯೋಗದ ಸ್ವಾತಂತ್ರ್ಯಕ್ಕೆ ಏನಾಯಿತು? ನನ್ನ ಭದ್ರತಾ ನಿರ್ದೇಶಕರನ್ನು ಶಾ ಅವರ ಆಣತಿಯ ಮೇರೆಗೇ ಆಯೋಗ ತೆರವು ಮಾಡಿದೆ' ಎಂದು ಅವರು ಆರೋಪಿಸಿದ್ದಾರೆ.

ಬಂಕುರಾದಲ್ಲಿ ಮಂಗಳವಾರ ನಡೆದ ಟಿಎಂಸಿ ಪ್ರಚಾರ ಸಭೆಯಲ್ಲಿ ಜನರನ್ನು ಉದ್ದೇಶಿಸಿ ಮಮತಾ ಬ್ಯಾನರ್ಜಿ ಅವರು ಮಾತನಾಡಿದರು ಪಿಟಿಐ ಚಿತ್ರ

'ಶಾ ಅವರಿಗೆ ಕೇಂದ್ರದಲ್ಲಿ ಮಾಡಲು ಕೆಲಸವಿಲ್ಲವೇ? ಶಾ ಅವರು ಇಲ್ಲಿ ಅಧಿಕಾರಿಗಳಿಗೆ ಕಿರುಕುಳ ನೀಡುವ ಕೆಲಸ ಮಾಡುತ್ತಿದ್ದಾರೆ. ಕೇಂದ್ರದ ನಾಯಕರು ಇಲ್ಲೆಲ್ಲಾ ಕೊಠಡಿಗಳನ್ನು ಕಾಯ್ದಿರಿಸಿದ್ದಾರೆ. ಅಧಿಕಾರಿಗಳಿಗೆ, ಟಿಎಂಸಿ ಅಭ್ಯರ್ಥಿಗಳಿಗೆ ಮತ್ತು ನಾಯಕರಿಗೆ ಸಿಬಿಐ, ಜಾರಿ ನಿರ್ದೇಶನಾಲಯದಿಂದ ನೋಟಿಸ್ ಕೊಡಿಸುತ್ತಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

'ಅಮಿತ್ ಶಾ ಅವರ ತಂತ್ರಗಳು ಚುನಾವಣಾ ಆಯೋಗಕ್ಕೆ ಗೊತ್ತಾಗುತ್ತಿಲ್ಲವೇ? ಅಥವಾ ಆಯೋಗವು ಬಿಜೆಪಿಯ ಒಂದು ಉಪಕರಣವಾಗಿ ಬದಲಾಗಿದೆಯೇ' ಎಂದು ಮಮತಾ ಪ್ರಶ್ನಿಸಿದ್ದಾರೆ.

'ಪ್ರಚಾರ ಸಭೆಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಭಾಗವಹಿಸಲು ಚುನಾವಣಾ ಅಧಿಕಾರಿಗಳು ಬಿಡುತ್ತಿಲ್ಲ. ಚುನಾವಣಾ ಆಯೋಗದ ದೈನಂದಿನ ಕೆಲಸದಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ, ಆಯೋಗದ ಕಚೇರಿ ಎದುರು ಮುರಿದ ಕಾಲಿನಲ್ಲೇ ಧರಣಿ ಕೂರುತ್ತೇನೆ' ಎಂದು ಮಮತಾ ಎಚ್ಚರಿಕೆ ನೀಡಿದ್ದಾರೆ.

ಕೇರಳ: ಎಡ–ಬಲ ಜಗ್ಗಾಟ
ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/2OBozGV

ನುಡಿ–ಕಿಡಿ


ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರ ಹತ್ಯೆ ನಡೆಯುತ್ತಿದೆ, ಕಾನೂನು ಸುವ್ಯವಸ್ಥೆಯೇ ಇಲ್ಲ. ಬಿಜೆಪಿ ಆಳ್ವಿಕೆ ನಡೆಸುತ್ತಿರುವ ಉತ್ತರ ಪ್ರದೇಶಕ್ಕೆ ಹೋಗಿ, ಅಲ್ಲಿ ಶಾಂತಿ ನೆಲೆಸಿದೆ
ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ

ಬಾಟ್ಲಾ ಹೌಸ್ ಎನ್‌ಕೌಂಟರ್ ಅನ್ನು ನಕಲಿ ಎಂದು ಮಮತಾ ಬ್ಯಾನರ್ಜಿ ಟೀಕಿಸಿದ್ದರು. ಈಗ ಆ ಪ್ರಕರಣದಲ್ಲಿ ತಪ್ಪಿತಸ್ಥನಿಗೆ ಮರಣದಂಡನೆ ಘೋಷಣೆಯಾಗಿದೆ. ತಮ್ಮ ಹೇಳಿಕೆ ಸುಳ್ಳಾಗಿದ್ದಕ್ಕೆ ಮಮತಾ ರಾಜಕೀಯ ತ್ಯಜಿಸುತ್ತಾರೆಯೇ?
ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಇದು ದೇಶಕ್ಕೇ ಸ್ಫೂರ್ತಿ ನೀಡಿದ್ದ, ವಿವೇಕಾನಂದ, ರವೀಂದ್ರನಾಥ ಟ್ಯಾಗೋರ್, ಶ್ಯಾಂ ಪ್ರಸಾದ್ ಮುಖರ್ಜಿ ಅವರ ನೆಲವಾಗಿತ್ತು. ಈಗ ಟಿಎಂಸಿ ಗೂಂಡಾಗಳು ಮತ್ತು ಅಕ್ರಮ ವಲಸಿಗರ ನೆಲವಾಗಿದೆ
ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ನೀವು ನನ್ನನ್ನು ಬಗ್ಗಿಸಬಹುದು. ನನ್ನ ಕಾಲು ಮುರಿದು, ಮನೆಯಲ್ಲೇ ಕೂರುವಂತೆ ಮಾಡಬಹುದು. ನಿಮ್ಮ ದ್ವೇಷ ರಾಜಕಾರಣದ ವಿರುದ್ಧ ಹೋರಾಡುವುದನ್ನು ನಾನು ನಿಲ್ಲಿಸುವುದಿಲ್ಲ. ಬಂಗಾಳದ ಜನ ನನ್ನ ಜತೆ ಇದ್ದಾರೆ.
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ನಾಮಪತ್ರ: ಕೊನೆ ದಿನಾಂಕ ಮುಂದೂಡಲು ಮನವಿ

ಚೆನ್ನೈ: ಆಲ್ ಇಂಡಿಯಾ ಸಮತ್ವ ಮಕ್ಕಳ್ ಕಚ್ಚಿ (ಎಐಎಸ್‌ಎಂಕೆ) ಮುಖ್ಯಸ್ಥ, ನಟ ಶರತ್‌ಕುಮಾರ್ ಅವರು ಚುನಾವಣಾ ಆಯೋಗದ ಮುಂದೆ ವಿಚಿತ್ರವಾದ ಬೇಡಿಕೆಯೊಂದನ್ನು ಇರಿಸಿದ್ದಾರೆ. ಬ್ಯಾಂಕ್ ನೌಕರರು ಮುಷ್ಕರ ನಡೆಸುತ್ತಿರುವುದರಿಂದ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕವನ್ನು ಮುಂದೂಡಬೇಕು ಎಂದು ಅವರು ಕೋರಿದ್ದಾರೆ.

ಕಮಲಹಾಸನ್ ಅವರ ಎಂಎನ್‌ಎಂ ನೇತೃತ್ವದ ಮೈತ್ರಿಕೂಟದ ಭಾಗವಾಗಿರುವ ಎಐಎಸ್‌ಎಂಕೆ 37 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ.

ಮುಷ್ಕರದಿಂದಾಗಿ ಅಭ್ಯರ್ಥಿಗಳು ಹೊಸ ಬ್ಯಾಂಕ್ ಖಾತೆ ತೆರೆಯಲು ಸಾಧ್ಯವಾಗುತ್ತಿಲ್ಲ. ನಾಮಪತ್ರ ಸಲ್ಲಿಕೆಗೆ ಆಯೋಗವು ಆರು ದಿನ ನೀಡಿದೆ. ಪ್ರಕ್ರಿಯೆ ಪೂರ್ಣಗೊಳಿಸಲು ನಾಲ್ಕು ದಿನ ಮಾತ್ರ ಬಾಕಿ ಇವೆ. ಬ್ಯಾಂಕ್ ನೌಕರರ ಬೇಡಿಕೆ ನ್ಯಾಯಯುತವಾದುದು ಎಂದು ಶರತ್‌ಕುಮಾರ್ ಹೇಳಿದ್ದಾರೆ.

2016ರ ಚುನಾವಣೆಯಲ್ಲಿ ಎಐಎಡಿಎಂಕೆ ಜತೆಗಿದ್ದ ಶರತ್‌ಕುಮಾರ್ ಅವರ ಪಕ್ಷವು ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿತ್ತು. ಈ ಬಾರಿ, ಈ ಪಕ್ಷಕ್ಕೆ 40 ಕ್ಷೇತ್ರಗಳನ್ನು ಕಮಲಹಾಸನ್ ನೀಡಿದ್ದರು. ಅದರಲ್ಲಿ ಮೂರು ಕ್ಷೇತ್ರಗಳನ್ನು ಶರತ್‌ಕುಮಾರ್ ಹಿಂದಿರುಗಿಸಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ಲೇವಡಿಗೆ ಕಾರಣವಾಗಿತ್ತು.

ಚಾಂಡಿ, ಚೆನ್ನಿತ್ತಲ ನಾಮಪತ್ರ

ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರು ಕೋಟಯಂ ಜಿಲ್ಲೆಯ ಪುದುಪಳ್ಳಿಯಿಂದ ಮತ್ತು ವಿರೋಧ ಪಕ್ಷದ ನಾಯಕ ರಮೇಶ್ ಚೆನ್ನಿತ್ತಲ ಅವರು ಹರಿಪಾಡ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಮಂಗಳವಾರ ನಾಮಪತ್ರ ಸಲ್ಲಿಸಿದ್ದಾರೆ. 77 ವರ್ಷದ ಚಾಂಡಿ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ವಿಧಾನಸಭಾ ಸದಸ್ಯರಾಗಿ 50 ವರ್ಷ ಪೂರೈಸಿದ್ದರು. ಒಂದು ಕಾಲದಲ್ಲಿ ಎಡರಂಗದ ಕೋಟೆಯಾಗಿದ್ದ ಪುದುಪಳ್ಳಿಯಿಂದ ಸತತ 11 ಬಾರಿ ಅವರು ಗೆದ್ದಿದ್ದಾರೆ.

ಅವರನ್ನು ತಿರುವನಂತಪುರದ ನೇಮಮ್ ಕ್ಷೇತ್ರದಿಂದ ಕಣಕ್ಕೆ ಇಳಿಸಲಾಗುವುದು ಎಂದು ಸುದ್ದಿ ಹರಡಿದ ಕಾರಣಕ್ಕೆ ಪುದುಪಳ್ಳಿಯಲ್ಲಿ ಕಳೆದ ವಾರ ಪ್ರತಿಭಟನೆ ಕೂಡ ನಡೆದಿತ್ತು.

ಉಮ್ಮನ್ ಚಾಂಡಿ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದರು

ತ್ರಿಪುರಾ ಮುಖ್ಯಮಂತ್ರಿ ವಿಪ್ಲವ್ ಕುಮಾರ್ ದೇವ್ ಅವರು ತಿರುವನಂತಪುರದಲ್ಲಿ ಬಿಜೆಪಿ ಪರವಾಗಿ ಮತ ಯಾಚಿಸಿದರು ಪಿಟಿಐ ಚಿತ್ರ

ವಿಜಯನ್ ವಿರುದ್ಧ ಸಂತ್ರಸ್ತ ಮಹಿಳೆ ಕಣಕ್ಕೆ

ತ್ರಿಶ್ಶೂರು (ಪಿಟಿಐ): 2017ರಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾಗಿ ತಮ್ಮ ಮನೆಯಲ್ಲಿಯೇ ಶವವಾಗಿ ಪತ್ತೆಯಾಗಿದ್ದ ಇಬ್ಬರು ಬಾಲಕಿಯರ ತಾಯಿಯು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಪ್ರಕರಣದ ತನಿಖೆ ನಡೆಸಿದ ಅಧಿಕಾರಿಗಳಿಗೆ ಸಂಬಂಧಿಸಿ ಸರ್ಕಾರವು ನಿಷ್ಕ್ರಿಯವಾಗಿದೆ ಎಂದು ಅರೋಪಿಸಿರುವ ಮಹಿಳೆಯು, ಪ್ರತಿರೋಧದ ಭಾಗವಾಗಿ ವಿಜಯನ್ ವಿರುದ್ಧ ಸ್ಪರ್ಧಿಸುವುದಾಗಿ ಹೇಳಿದ್ದಾರೆ.

'ನಾನು ತಿರುವನಂತಪುರದಲ್ಲಿ ಮುಖ್ಯಮಂತ್ರಿಯನ್ನು ಭೇಟಿಯಾಗಿದ್ದೆ. ನನ್ನ ಮಕ್ಕಳ ಸಾವಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಗೋಗರೆದಿದ್ದೆ. ಈಗ ವಿಜಯನ್ ವಿರುದ್ಧ ಸ್ಪರ್ಧಿಸುತ್ತೇನೆ. ಸಂಘಪರಿವಾರದವನ್ನು ಬಿಟ್ಟು ಬೇರೆಲ್ಲರ ಬೆಂಬಲ ಕೋರುತ್ತೇನೆ' ಎಂದು ಮಹಿಳೆ ಹೇಳಿದ್ದಾರೆ. ವಿಜಯನ್ ಅವರು ಕಣ್ಣೂರಿನ ಧರ್ಮಡಂ ಕ್ಷೇತ್ರದಿಂದ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಪ್ರಕರಣದ ತನಿಖೆ ನಡೆಸಿದ ಇಬ್ಬರು ಪೊಲೀಸ್ ಅಧಿಕಾರಿಗಳ ವಿರುದ್ಧ ಸರ್ಕಾರವು ನಿಷ್ಕ್ರಿಯವಾಗಿರುವುದನ್ನು ಖಂಡಿಸಿ ಮಹಿಳೆಯು ತಲೆ ಬೋಳಿಸಿ, ಕಾಸರಗೋಡಿನಿಂದ ತಿರುವನಂತಪುರದವರೆಗೆ 'ನ್ಯಾಯಯಾತ್ರೆ'ಯನ್ನು ನಡೆಸುತ್ತಿದ್ದಾರೆ. ಏಪ್ರಿಲ್ 4ರಂದು ಯಾತ್ರೆ ಕೊನೆಗೊಳ್ಳಲಿದೆ.

ಸಾಕ್ಷ್ಯಗಳ ಕೊರತೆಯಿದೆ ಎಂದು ಹೇಳಿದ್ದ ಪೋಕ್ಸೊ ನ್ಯಾಯಾಲಯವು ಐವರು ಆರೋಪಿಗಳನ್ನು 2019ರಲ್ಲಿ ಖುಲಾಸೆಗೊಳಿಸಿತ್ತು. ಪ್ರಕರಣದ ಮರುತನಿಖೆಗೆ ಕೇರಳ ಹೈಕೋರ್ಟ್ ಜನವರಿಯಲ್ಲಿ ಸೂಚಿಸಿತ್ತು. ತನಿಖೆಯಲ್ಲಿ ಗಂಭೀರ ಲೋಪಗಳಾಗಿವೆ ಎಂದು ಹೇಳಿತ್ತು. ಬಳಿಕ, ತನಿಖೆಯನ್ನು ಸಿಬಿಐಗೆ ಒಪ್ಪಿಸಲು ಸರ್ಕಾರವು ನಿರ್ಧರಿಸಿತ್ತು.

ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ
ಚಿತ್ರಬಂಧ
ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಬಂಪರ್ ಬಹುಮಾನ*
ONE PLUS 7 PRO ಮೊಬೈಲ್

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8 ರೊಳಗೆ 9246020020 ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ನಿನ್ನೆಯ ಉತ್ತರ: A724 B961 C385

ಎನ್‌ಸಿಪಿ ಸೇರಿದ ಪಿ.ಸಿ. ಚಾಕೊ

ನವದೆಹಲಿ: ಕಳೆದ ವಾರ ಕಾಂಗ್ರೆಸ್ ತೊರೆದಿದ್ದ ಹಿರಿಯ ಮುಖಂಡ ಪಿ.ಸಿ. ಚಾಕೊ ಅವರು ಶರದ್ ಪವಾರ್ ಸಮ್ಮುಖದಲ್ಲಿ ಮಂಗಳವಾರ ಎನ್‌ಸಿಪಿ ಸೇರಿದರು. ಎನ್‌ಸಿಪಿ ಸೇರ್ಪಡೆಯಿಂದ ತಮ್ಮ ಮನೆಗೆ ಮರಳಿದಂತಾಗಿದೆ ಎಂದು ಚಾಕೊ ಹೇಳಿದ್ದಾರೆ.

ಪಿ.ಸಿ. ಚಾಕೊ

ದೇಶಕ್ಕೆ ಪ್ರಬಲವಾದ ಪ್ರತಿಪಕ್ಷದ ಅಗತ್ಯವಿದ್ದು, ಕಾಂಗ್ರೆಸ್ ಆ ದಿಸೆಯಲ್ಲಿ ಪ್ರಯತ್ನಿಸುವ ಲಕ್ಷಣಗಳು ತಮಗೆ ಕಂಡುಬರಲಿಲ್ಲ ಎಂದು ಚಾಕೊ ಹೇಳಿದ್ದಾರೆ.

ಎನ್‌ಸಿಪಿ ಸೇರ್ಪಡೆಗೂ ಮುನ್ನ ಸಿಪಿಎಂ ಮುಖಂಡ ಸೀತಾರಾಂ ಯೆಚೂರಿ ಅವರನ್ನು ಭೇಟಿ ಮಾಡಿದ ಚಾಕೊ, ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಲ್‌ಡಿಎಫ್ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸುವ ಭರವಸೆ ನೀಡಿದರು.

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ, ಲಾಠಿ ಪ್ರಹಾರ

ಕೋಲ್ಕತ್ತ (ಪಿಟಿಐ): ಟಿಎಂಸಿಯಿಂದ ವಲಸೆ ಬಂದವರಿಗೇ ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿರುವುದನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷದ ಕಚೇರಿ ಎದುರಿ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಹಿಂಸಾಚಾರ ನಡೆದಿದ್ದು, ಅದನ್ನು ನಿಯಂತ್ರಿಸಲು ಪೊಲೀಸರು ಲಾಠಿಪ್ರಹಾರ ನಡೆಸಿದ್ದಾರೆ.

'ರಾಜ್ಯದಲ್ಲಿ ಪಕ್ಷಕ್ಕಾಗಿ ದುಡಿದವರನ್ನು ಕಡೆಗಣಿಸಿ, ವಲಸಿಗರಿಗೆ ಮಣೆ ಹಾಕಲಾಗಿದೆ. ಇದರಿಂದ ಪಕ್ಷಕ್ಕೆ ಹಿನ್ನಡೆಯಾಗುತ್ತದೆ. ಮೂಲ ಬಿಜೆಪಿಗರಿಗೇ ಟಿಕೆಟ್ ನೀಡಬೇಕು' ಎಂದು ಆಗ್ರಹಿಸಿ, ಪಕ್ಷದ ನೂರಾರು ಕಾರ್ಯಕರ್ತರು ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಆಗ ಪಕ್ಷದ ಕಾರ್ಯಕರ್ತರ ಮಧ್ಯೆಯೇ ಮಾರಾಮಾರಿ ನಡೆದಿದೆ. ಕಲ್ಲುತೂರಾಟವೂ ನಡೆದಿದೆ. ಇದನ್ನು ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಗಾಯಾಳುಗಳ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

'ಇದು ನಮ್ಮ ಪಕ್ಷದ ಕಾರ್ಯಕರ್ತರು ನಡೆಸಿದ ಪ್ರತಿಭಟನೆ ಮತ್ತು ಹಿಂಸಾಚಾರವಲ್ಲ. ಇದರ ಹಿಂದೆ ಯಾವುದೋ ಸಂಚು ಇದೆ' ಎಂದು ಪಶ್ಚಿಮ ಬಂಗಾಳ ಬಿಜೆಪಿ ಘಟಕ ಹೇಳಿದೆ.

ಬಿಜೆಪಿ ಬೆಂಬಲಿಗರಿಂದ ದಾಳಿ

ಕೋಲ್ಕತ್ತದ ಕಾಲೇಜ್ ಸ್ಟ್ರೀಟ್‌ನಲ್ಲಿ ಬಿಜೆಪಿಗೆ ಮತ ನೀಡಬೇಡಿ ಎಂದು ಮೆರವಣಿಗೆ ನಡೆಸುತ್ತಿದ್ದ ಸಾಮಾಜಿಕ ಕಾರ್ಯಕರ್ತರು ಮತ್ತು ವಿವಿಧ ಸಂಘಟನೆಗಳ ಸದಸ್ಯರ ಮೇಲೆ ಬಿಜೆಪಿ ಬೆಂಬಲಿಗರು ದಾಳಿ ನಡೆಸಿದ್ದಾರೆ.

ಸಾಮಾಜಿಕ ಕಾರ್ಯಕರ್ತರು ಇಲ್ಲಿನ ಕಾಲೇಜ್ ಸ್ಟ್ರೀಟ್‌ನಲ್ಲಿರುವ ಐತಿಹಾಸಿಕ ಕಾಫಿ ಹೌಸ್‌ನಲ್ಲಿ, 'ನೋ ವೋಟ್ ಫಾರ್ ಬಿಜೆಪಿ' ಎಂಬ ಬರಹ ಇರುವ ಪೋಸ್ಟರ್ ಅಂಟಿಸಿದ್ದರು. ಅವರೆಲ್ಲಾ ಅಲ್ಲೇ ಇರುವಾಗಲೇ ಬಿಜೆಪಿಯ ಹಲವು ಬೆಂಬಲಿಗರು ಕಾಫಿ ಹೌಸ್‌ಗೆ ನುಗ್ಗಿದರು. ಪೋಸ್ಟರ್ ಹರಿದುಹಾಕಿದರು. ಇದನ್ನು ತಡೆಯಲು ಬಂದವರ ಮೇಲೆ ಹಲ್ಲೆ ನಡೆಸಿದರು ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

ಬಿಜೆಪಿ ವಕ್ತಾರ ತೇಜಿಂದರ್ ಸಿಂಗ್ ಬಗ್ಗಾ ಅವರ ನೇತೃತ್ವದಲ್ಲಿ ಈ ದಾಳಿ ನಡೆದಿದೆ ಎಂದು ಮೂಲಗಳು ಹೇಳಿವೆ. ದಾಳಿಯ ವಿಡಿಯೊಗಳನ್ನು ಬಗ್ಗಾ ಅವರು ಟ್ವೀಟ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಡಿಎಂಕೆ ಪ್ರಣಾಳಿಕೆಗೆ ಪಳನಿಸ್ವಾಮಿ ಟೀಕೆ

ಕನ್ಯಾಕುಮಾರಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪೊನ್ ರಾಧಾಕೃಷ್ಣನ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದರು

ಪುದುಕೋಟ್ಟೈ (ತಮಿಳುನಾಡು) (ಪಿಟಿಐ): 'ಈಡೇರಿಸಬಹುದಾದ ಭರವಸೆಗಳನ್ನು ಮಾತ್ರ ರಾಜಕೀಯ ಪಕ್ಷಗಳು ಜನರಿಗೆ ನೀಡಬೇಕು. ಜಾರಿಮಾಡಲಾಗದಂಥ ಭರವಸೆಗಳನ್ನು ಕೊಟ್ಟರೆ ಯಾವತ್ತೂ ಉದ್ದೇಶ ಈಡೇರುವುದಿಲ್ಲ' ಎಂದು ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಹೇಳಿದ್ದಾರೆ.

ಆ ಮೂಲಕ ಅವರು ಪ್ರತಿಪಕ್ಷ 'ಡಿಎಂಕೆಯ ಚುನಾವಣಾ ಪ್ರಣಾಳಿಕೆಯಲ್ಲಿ ಉಲ್ಲೇಖಿಸಲಾಗಿರುವ ಭರವಸೆಗಳನ್ನು ಈಡೇರಿಸಲು ಸಾಧ್ಯವಿಲ್ಲ' ಎಂದು ಟೀಕಿಸಿದ್ದಾರೆ. ಡಿಎಂಕೆಯು ಇತ್ತೀಚೆಗೆ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಮತದಾರರಿಗೆ 500ಕ್ಕೂ ಹೆಚ್ಚು ಭರವಸೆಗಳನ್ನು ನೀಡಿದೆ.

'2006ರಲ್ಲಿ ಡಿಎಂಕೆ ಮುಖ್ಯಸ್ಥ ಕರುಣಾನಿಧಿ ಭೂರಹಿತ ರೈತರಿಗೆ ಉಚಿತವಾಗಿ ತಲಾ ಎರಡು ಎಕರೆ ಭೂಮಿ ನೀಡುವ ಭರವಸೆ ನೀಡಿದ್ದರು. ಆ ಭರವಸೆ ಈಡೇರಿದೆಯೇ? ಪುನಃ ಜನರನ್ನು ಮರುಳುಗೊಳಿಸಿ ಅಧಿಕಾರ ಹಿಡಿಯಲು ಸ್ಟಾಲಿನ್ ಪ್ರಯತ್ನಿಸುತ್ತಿದ್ದಾರೆ ಎಂದರು.

'ಡಿಎಂಕೆಯ ಪ್ರಣಾಳಿಕೆ ಹಾದಿತಪ್ಪಿಸುವಂಥದ್ದು. ರೈತರ ಸಾಲ ಮನ್ನಾ ಮಾಡುವುದಾಗಿ ಅವರು ಭರವಸೆ ನೀಡಿದ್ದಾರೆ. ಆದರೆ ರೈತರು ಸಹಕಾರ ಬ್ಯಾಂಕ್‌ಗಳಿಂದ ಪಡೆದಿದ್ದ ಒಟ್ಟಾರೆ ₹12,110 ಕೋಟಿ ಸಾಲವನ್ನು ನಮ್ಮ ಸರ್ಕಾರವು ಈಗಾಗಲೇ ಮನ್ನಾ ಮಾಡಿ, ಪ್ರಮಾಣಪತ್ರಗಳನ್ನೂ ನೀಡಿದೆ' ಎಂದರು.

ತಮ್ಮ ಪಕ್ಷ (ಎಐಎಡಿಎಂಕೆ) ಹಿಂದೆ ನೀಡಿದ್ದ ಭರವಸೆಗಳ ಬಗ್ಗೆ ಮಾತನಾಡುತ್ತಾ, 'ಜಯಲಲಿತಾ ಅವರು 2011ರಲ್ಲಿ ಮತದಾರರಿಗೆ ಉಚಿತ ಟೇಬಲ್ ಫ್ಯಾನ್ ಹಾಗೂ ಮಿಕ್ಸರ್ ಗ್ರೈಂಡರ್ ಕೊಡುವುದಾಗಿ ಹೇಳಿದ್ದರು. ಅದರಂತೆ ಸರ್ಕಾರ ರಚನೆಯಾದ ನಂತರ ಅದನ್ನು ಜಾರಿ ಮಾಡಿದ್ದರು' ಎಂದರು.

'ನಮ್ಮ ಪಕ್ಷ ಈ ಬಾರಿ, ಜನರಿಗೆ ಉಚಿತವಾಗಿ ವಾಷಿಂಗ್ ಮಷೀನ್ ಹಾಗೂ ಸೋಲಾರ್ ಒಲೆಗಳನ್ನು ನೀಡುವ ಭರವಸೆ ನೀಡಿದೆ. ಎಲ್ಲರಿಗೂ ಲಾಭವಾಗಬೇಕು ಎಂಬುದು ಈ ಭರವಸೆಯ ಹಿಂದಿನ ಉದ್ದೇಶ' ಎಂದರು.

'ಅಧಿಕಾರಕ್ಕೆ ಬಂದ ನೂರು ದಿನದೊಳಗೆ ಜನರ ಸಮಸ್ಯೆಗಳನ್ನು ಪರಿಹರಿಸುತ್ತೇನೆ ಎಂದು ಸ್ಟಾಲಿನ್ ಹೇಳುತ್ತಾರೆ. ಹಾಗಿದ್ದರೆ ಅವರು ಹಿಂದೆ ಡಿಸಿಎಂ ಹಾಗೂ ಸಚಿವರಾಗಿದ್ದಾಗ ಮಾಡಿದ್ದೇನು ಎಂದು ಪಳನಿಸ್ವಾಮಿ ಪ್ರಶ್ನಿಸಿದರು. ಕಾಂಗ್ರೆಸ್‌ನ ಸ್ಥಿತಿಯ ಬಗ್ಗೆ ಲೇವಡಿ ಮಾಡುತ್ತಾ, '2011ರಲ್ಲಿ 63 ಹಾಗೂ 2016ರಲ್ಲಿ 41 ಸ್ಥಾನಗಳನ್ನು ಗೆದ್ದಿದ್ದ, ಶತಮಾನಕ್ಕೂ ಹಳೆಯದಾದ ಪಕ್ಷವು ಈ ಬಾರಿ 25 ಕ್ಷೇತ್ರಗಳಿಗಾಗಿ ಮಿತ್ರಪಕ್ಷದ ಮುಂದೆ ಕೈಯೊಡ್ಡಿದೆ' ಎಂದರು.



ಎಚ್‌ಪಿ ಸ್ಮಾರ್ಟ್ ಟ್ಯಾಂಕ್ 530

ಸ್ವಚ್ಛಗಾಳಿಗೆ ಏರ್ ಪ್ಯೂರಿಫಯರ್

ಶಾರ್ಪ್ ಕಂಪನಿಯ ಕ್ಯೂನೆಟ್- ಝೆನ್‌ಸೇಶನಲ್ ಏರ್ ಪ್ಯೂರಿಫಯರ್, 2.5 ಮೈಕ್ರಾನ್‌ಗಿಂತಲೂ ಚಿಕ್ಕದಾದ ದೂಳಿನ ಕಣಗಳನ್ನು ಗುರುತಿಸುವ ಸೆನ್ಸರ್ ಹಾಗೂ ಹೊಗೆ, ಕೀಟಗಳ ತ್ಯಾಜ್ಯಗಳು, ದೂಳು ಮುಂತಾದ ಮನೆಯೊಳಗಿನ ಕಲ್ಮಶಗಳನ್ನು ಪತ್ತೆ ಮಾಡುವ ಸೆನ್ಸರ್ ಇದೆ. ಅದೇ ರೀತಿ, ತಂಬಾಕು, ಕಾಸ್ಮೆಟಿಕ್, ಆಲ್ಕೋಹಾಲ್, ಸ್ಪ್ರೇ ಮತ್ತಿತರ ವಾಸನೆಗಳನ್ನು ಪತ್ತೆ ಮಾಡುವ ಸೆನ್ಸರ್, ತಾಪಮಾನದ ಸೆನ್ಸರ್, ತೇವಾಂಶದ ಸೆನ್ಸರ್, ಬೆಳಕಿನ ಸೆನ್ಸರ್ ಮತ್ತು ಚಲನೆಯನ್ನು ಪತ್ತೆ ಮಾಡುವ ಸೆನ್ಸರ್ ಕೂಡ ಇರುವುದು ವಿಶೇಷ. ಇವುಗಳನ್ನು ಸೂಚಿಸಲು ಎಲ್‌ಇಡಿ ದೀಪಗಳೂ ಇವೆ.

ಸ್ವಚ್ಛಗಾಳಿ, ತೇವಾಂಶ, ತಾಪಮಾನ ನಿಯಂತ್ರಣಕ್ಕೆ ನೆರವಾಗುವ ಶಾರ್ಪ್ ಏರ್ ಪ್ಯೂರಿಫಯರ್

ಅವಿನಾಶ್ ಬಿ.

ಆಸ್ತಮಾ, ಅಲರ್ಜಿ ಮುಂತಾದವುಗಳಿಗೆ ಕಾರಣವಾಗುವ ಹೊರಾಂಗಣದ ಗಾಳಿಯ ಶುದ್ಧತೆ ನಮ್ಮ ಕೈಯಲ್ಲಿರುವುದಿಲ್ಲ. ಆದರೆ ಮನೆಯೊಳಗಿನ ಗಾಳಿಯನ್ನು ಶುದ್ಧೀಕರಿಸಲು ಸಾಕಷ್ಟು ಯಂತ್ರಗಳು ಮಾರುಕಟ್ಟೆಗೆ ಬಂದಿವೆ. ಅವುಗಳಲ್ಲೊಂದು ಶಾರ್ಪ್ ಕಂಪನಿಯ ಕ್ಯೂನೆಟ್-ಝೆನ್‌ಸೇಶನಲ್ (Sharp QNET Zensational Air Purifier).

ಮನೆಯೊಳಗೆ ದೂಳು, ರಾಸಾಯನಿಕಗಳು, ಹೊಗೆ, ವೈರಸ್, ಕಾರ್ಪೆಟ್ ದೂಳು, ಸಾಕುಪ್ರಾಣಿಗಳ ರೋಮ, ತಿಗಣೆ ಮಾತ್ರವಲ್ಲದೆ ಪೀಠೋಪಕರಣಗಳ ಪೈಂಟ್ ವಾಸನೆ, ಗೋಡೆಯ ಬಣ್ಣದ ವಾಸನೆ - ಇವು ಕೂಡ ಶುದ್ಧ ಗಾಳಿಗೆ ತಡೆಯಾಗಬಹುದು. ಈ ನಿಟ್ಟಿನಲ್ಲಿ ಮನೆಯೊಳಗೆ ಏರ್ ಪ್ಯೂರಿಫಯರ್‌ಗಳು ಉಪಯುಕ್ತವಾಗುತ್ತವೆ.

ವಿನ್ಯಾಸ

ರಿವ್ಯೂಗೆ ಬಂದಿರುವ KC-G60M-W ಮಾದರಿಯ ಇತರ ಪ್ಯೂರಿಫಯರ್‌ಗಳಂತೆ ತೀರಾ ಚಿಕ್ಕದಾಗಿಲ್ಲ. ಗಾತ್ರದಿಂದಾಗಿ ಗಾಳಿಯನ್ನು ಶುದ್ಧೀಕರಿಸುವ ಸಾಮರ್ಥ್ಯವೂ ಹೆಚ್ಚಿದೆ. ಇದರಲ್ಲಿರುವ ಎಲ್‌ಇಡಿ ಇಂಡಿಕೇಟರ್‌ಗಳು ಸುಂದರವಾಗಿದ್ದು, ಎರಡು ಹ್ಯಾಂಡಲ್‌ಗಳ ಮೂಲಕ ಬೇಕಾದಲ್ಲಿಗೆ ಒಯ್ಯಬಹುದು. ಮನೆಯೊಳಗೆ ಅತ್ತಿತ್ತ ಸರಿಸುವಂತೆ ಅನುಕೂಲವಾಗಲು ಕಾಸ್ಟರ್‌ಗಳೆಂಬ ನಾಲ್ಕು ಪುಟ್ಟ ಗಾಲಿಗಳಿವೆ. ಅಶುದ್ಧ ಗಾಳಿಯನ್ನು ತೆಗೆದುಕೊಂಡು ಮುಂಭಾಗ ಮತ್ತು ಮೇಲ್ಭಾಗದಿಂದ ಶುದ್ಧ ಗಾಳಿಯನ್ನು ವಾತಾವರಣಕ್ಕೆ ಬಿಡುವ ಕೆಲಸ ಈ ಪ್ಯೂರಿಫಯರ್‌ನದ್ದು. ಸುಮಾರು 10.5 ಕಿಲೋ ತೂಕವಿದ್ದು, 370 x 660 x 293 ಮಿಮೀ ಸುತ್ತಳತೆ ಹೊಂದಿದೆ.

ಸೆನ್ಸರ್‌ಗಳು

ಇದರಲ್ಲಿ 2.5 ಮೈಕ್ರಾನ್‌ಗಿಂತಲೂ ಚಿಕ್ಕದಾದ ದೂಳಿನ ಕಣಗಳನ್ನು ಗುರುತಿಸುವ ಸೆನ್ಸರ್ ಹಾಗೂ ಹೊಗೆ, ಕೀಟಗಳ ತ್ಯಾಜ್ಯಗಳು, ದೂಳು ಮುಂತಾದ ಮನೆಯೊಳಗಿನ ಕಲ್ಮಶಗಳನ್ನು ಪತ್ತೆ ಮಾಡುವ ಸೆನ್ಸರ್ ಇದೆ. ವಿವಿಧ ವಾಸನೆಗಳನ್ನು ಪತ್ತೆ ಮಾಡಲು, ತಾಪಮಾನ, ತೇವಾಂಶ, ಬೆಳಕು ಸೆನ್ಸರ್ ಮತ್ತು ಚಲನೆಯನ್ನು ಪತ್ತೆ ಮಾಡುವ ಸೆನ್ಸರ್‌ಗಳಿವೆ. ಇಂಟಲಿಜೆಂಟ್ ಮೋಡ್ ಮೂಲಕ ಈ ಎಲ್ಲ ಸೆನ್ಸರ್‌ಗಳು ನಿಖರವಾಗಿ ಕೆಲಸ ಮಾಡುತ್ತಾ, ಮನೆಯ ವಾತಾವರಣವನ್ನು ಸ್ವಯಂಚಾಲಿತವಾಗಿ ಶುದ್ಧವಾಗಿರಿಸುವಂತೆ ಮಾಡಬಹುದು. ಇದರ ಕಾರ್ಯನಿರ್ವಹಣಾ ವ್ಯಾಪ್ತಿಯು ಸುಮಾರು 530 ಚದರಡಿ. ಗಾಳಿಯನ್ನು ಸೋಸಲು ಇದರಲ್ಲಿ ಮೂರು ಫಿಲ್ಟರ್‌ಗಳಿವೆ.

ವಿಮರ್ಶೆ

ಪ್ಲಾಸ್ಮಾಕ್ಲಸ್ಟರ್ ಅಯಾನ್ ತಂತ್ರಜ್ಞಾನ

ಶಾರ್ಪ್ ಕ್ಯೂನೆಟ್‌ನ ವಿಶೇಷತೆಯೆಂದರೆ, ಹೊರಗಿನ ವಾತಾವರಣದಲ್ಲಿರುವ ಅಯಾನ್‌ಗಳಂತೆಯೇ ಒಳಗೂ ಶುದ್ಧಗೊಳಿಸಬಲ್ಲ 'ಪ್ಲಾಸ್ಮಾಕ್ಲಸ್ಟರ್' ಎಂಬ ಜಪಾನೀ ತಂತ್ರಜ್ಞಾನದ ಬಳಕೆ. ಕಂಪನಿ ಹೇಳಿಕೊಳ್ಳುವಂತೆ ಈ ಪ್ಲಾಸ್ಮಾಕ್ಲಸ್ಟರ್ ಅಯಾನುಗಳು ಗಾಳಿಯಲ್ಲಿ ಮತ್ತು ಮೇಲ್ಮೈಗಳಲ್ಲಿರಬಹುದಾದ 29 ರೀತಿಯ ಕೀಟಾಣುಗಳನ್ನು ನಾಶಪಡಿಸಬಲ್ಲುದು.

ಉಡುಪು, ಸೋಫಾ ಮತ್ತು ಕರ್ಟನ್‌ಗಳನ್ನು ಶುದ್ಧಗೊಳಿಸುವುದಕ್ಕೂ ಈ ಪ್ಲಾಸ್ಮಾ ಕ್ಲಸ್ಟರ್ ಅಯಾನ್‌ಗಳನ್ನು ಬಳಸಬಹುದು.

ಇದು ಶಬ್ದರಹಿತ ಸಾಧನವೆನ್ನಬಹುದು. ಕೆಲವೊಮ್ಮೆ ಇದು ಚಾಲನೆಯಲ್ಲಿರುವುದೂ ತಿಳಿಯದಷ್ಟು ನಿಶ್ಶಬ್ದ. ಆದರೆ, ಬಾಗಿಲು ತೆಗೆದಾಗ ಅಥವಾ ಹೆಚ್ಚು ಮಾಲಿನ್ಯಕಾರಕ ವಸ್ತುಗಳು ಬಂದಾಗ, ಗಾಳಿಯ ವೇಗ ಜೋರಾಗುವ ಮೂಲಕ ಶಬ್ದವೂ ಹೆಚ್ಚಾಗುತ್ತದೆ.

ಮುಚ್ಚಿದ ಬಾಗಿಲುಗಳಿರುವ ನಗರ ಪ್ರದೇಶಗಳಲ್ಲಿ ಶುದ್ಧ ಗಾಳಿಯಾಡುವುದಕ್ಕೆ ಅನುಕೂಲ ಮಾಡಿಕೊಡುವ ಮತ್ತು ಆರೋಗ್ಯ ರಕ್ಷಣೆಗೆ ಪೂರಕವಾಗಿರುವ ಈ ಶಾರ್ಪ್ ಕ್ಯೂನೆಟ್ ಝೆನ್‌ಸೇಶನಲ್ ಏರ್ ಪ್ಯೂರಿಫಯರ್ ಬೆಲೆ ₹ 97,200.

ವೈಯಕ್ತಿಕ ಬಳಕೆಗೆ 'ಎಚ್‌ಪಿ ಸ್ಮಾರ್ಟ್ ಟ್ಯಾಂಕ್ 530'

ಸ್ಮಾರ್ಟ್‌ಫೋನ್ ಮೂಲಕವೇ ವೈಫೈ ಸಂಪರ್ಕದೊಂದಿಗೆ ಸುಲಭವಾಗಿ ಡಾಕ್ಯುಮೆಂಟ್, ಫೋಟೊ ಪ್ರಿಂಟ್ ತೆಗೆಯಲು ಎಚ್‌ಪಿ ಸ್ಮಾರ್ಟ್ ಟ್ಯಾಂಕ್ 530 ಹೆಚ್ಚು ಉಪಯುಕ್ತವಾಗಿದೆ.

ವಿಶ್ವನಾಥ ಎಸ್.

ಎಚ್‌ಪಿ ಕಂಪನಿಯು ವೈಯಕ್ತಿಕ ಮತ್ತು ಉದ್ಯಮ ಬಳಕೆಗೆ ಅಗತ್ಯವಾದ ಹಲವು ಬಗೆಯ ಪ್ರಿಂಟರ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ. ಕೈಗೆಟಕುವ ಬೆಲೆಗೆ ಗುಣಮಟ್ಟದ ಪ್ರಿಂಟರ್ ನೀಡುವಲ್ಲಿ ಕಂಪನಿ ಹೆಚ್ಚು ಗಮನ ಹರಿಸುತ್ತಿದೆ. ಎಚ್‌ಪಿ ಸ್ಮಾರ್ಟ್ ಟ್ಯಾಂಕ್ 530 ವಯರ್‌ಲೆಸ್ ಆಲ್-ಇನ್-ಒನ್ ಪ್ರಿಂಟರ್ ಈ ಸಾಲಿಗೆ ಸೇರಿದೆ. ಇದರ ಬೆಲೆ ₹ 16,949.

ಮನೆಯಿಂದ ಕೆಲಸ ಮತ್ತು ಕಚೇರಿ ಕೆಲಸಗಳಿಗೆ ಉಪಯೋಗ ಆಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ. ವೈಯರ್‌ಲೆಸ್ ಪ್ರಿಂಟ್, ಕಾಪಿ, ಸ್ಕ್ಯಾನ್ ಮತ್ತು ಎಡಿಎಫ್ ಆಯ್ಕೆಗಳು ಇದರಲ್ಲಿವೆ. ಸೆನ್ಸರ್ ಆಧಾರದ ಮೇಲೆ ಇಂಕ್ ಟ್ಯಾಂಕ್ ಕಾರ್ಯನಿರ್ವಹಿಸುತ್ತದೆ. ಇಂಕ್ ಮುಗಿಯುವ ಮುನ್ನ ಬಳಕೆದಾರರನ್ನು ಎಚ್ಚರಿಸುತ್ತದೆ. ಅಲ್ಲದೆ, ಇಂಕ್ ಎಷ್ಟು ಪ್ರಮಾಣದಲ್ಲಿದೆ ಎನ್ನುವುದು ಹೊರಭಾಗಕ್ಕೆ ಕಾಣುವ ವ್ಯವಸ್ಥೆ ಇದರಲ್ಲಿದೆ. ರೀಫಿಲ್ ಸಹ ಸುಲಭ.

ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್ ಜತೆ ಯುಎಸ್‌ಬಿ ಕೇಬಲ್ ಮೂಲಕ ಸಂಪರ್ಕಿಸುವ ಆಯ್ಕೆ ಇದೆಯಾದರೂ, ವೈಫೈ ಆಯ್ಕೆಹೆಚ್ಚು ಸುಲಭವಾಗಿದೆ. ಎಚ್‌ಪಿ ಸ್ಮಾರ್ಟ್ ಆ್ಯಪ್ ಮೂಲಕ ಪ್ರಿಂಟರ್‌ನೊಂದಿಗೆ ಸಂಪರ್ಕ ಸಾಧಿಸಲು ತುಸು ಕಷ್ಟಪಡಬೇಕಾಗುತ್ತದೆ. ಬ್ಲೂಟೂತ್ ಎಲ್‌ಇ, ಡ್ಯುಯಲ್ ವೈಫೈಗೂ ಬೆಂಬಲಿಸುತ್ತದೆ.

5.59 ಸಿಎಂ ಮೊನೊ ಟಚ್ ಸ್ಕ್ರೀನ್ ಇದ್ದು, ಇದರ ಸಂವೇದನೆ ತುಸು ನಿಧಾನವಾಗಿದೆ. ಪ್ರಿಂಟಿಂಗ್ ರೆಸಲ್ಯೂಷನ್ ಬ್ಲಾಕ್ ಆ್ಯಂಡ್ ವೈಟ್‌ಗೆ 1200 x 1200ಡಿಪಿಐ ಹಾಗೂ ಕಲರ್‌ಗೆ 4800 x 1200ಡಿಪಿಐ ಇದೆ. ಸ್ಕ್ಯಾನ್ ರೆಸಲ್ಯೂಷನ್ 1200 x 1200 ಡಿಪಿಐ ಇದೆ. 6 ಸಾವಿರ ಪೇಜ್‌ವರೆಗೆ ಬ್ಲಾಕ್ ಮತ್ತು 8 ಸಾವಿರ ಪೇಜ್‌ವರೆಗೆ ಕಲರ್ ಪ್ರಿಂಟ್ ತೆಗೆಯಬಹುದು. ಪ್ರತಿ ಪೇಜ್ ಪ್ರಿಂಟ್ ಮಾಡಲು ಬ್ಲಾಕ್ ಪ್ರಿಂಟೌಟ್‌ಗೆ 10 ಪೈಸೆ ಮತ್ತು ಕಲರ್ ಪ್ರಿಂಟೌಟ್‌ಗೆ 21 ಪೈಸೆ ತಗಲುತ್ತದೆ ಎಂದು ಕಂಪನಿ ಹೇಳಿಕೊಂಡಿದೆ. ಇಂಟರ್‌ನೆಟ್ ನೆಟ್‌ವರ್ಕ್ ಇಲ್ಲದೆಯೇ ವೈಫೈ ಡೈರೆಕ್ಟ್ ಮೂಲಕ ಸ್ಮಾರ್ಟ್‌ಫೋನ್‌ನೊಂದಿಗೆ ಸಂಪರ್ಕಿಸಬಹುದಾಗಿದೆ.

ಒಟ್ಟಿನಲ್ಲಿ ಕಡಿಮೆ ಸ್ಥಳಾವಕಾಶ ಬೇಡುವ, ಮೊಬೈಲ್ ಮೂಲಕವೇ ತಕ್ಷಣಕ್ಕೆ ಪ್ರಿಂಟ್ ತೆಗೆಯುವ ಹಾಗೂ ಇಂಕ್ ರಿ-ಫಿಲ್ಲಿಂಗ್ ನಿರ್ವಹಣೆಯ ದೃಷ್ಟಿಯಿಂದ ವೈಯಕ್ತಿಕ ಬಳಕೆಗೆ ಇದು ಹೆಚ್ಚು ಉಪಯುಕ್ತವಾದ ಪ್ರಿಂಟರ್ ಎನ್ನಬಹುದು.

ಗುರುತಿಸಬಹುದಾದ ಅಂಶಗಳು

- ಮೊಬೈಲ್, ಟ್ಯಾಬ್ಲೆಟ್ ಮತ್ತು ಲ್ಯಾಪ್‌ಟಾಪ್ ಮೂಲಕ ಪ್ರಿಂಟ್, ಕಾಪಿ ಮತ್ತು ಸ್ಕ್ಯಾನ್ ಸುಲಭ
- ಮನೆಯಲ್ಲಿ ಇಡಲು ಕಡಿಮೆ ಜಾಗ ಸಾಕು
- ಎಚ್‌ಪಿ ಸ್ಮಾರ್ಟ್ ಆ್ಯಪ್ ಅಥವಾ ಇ-ಮೇಲ್ ಮೂಲಕ ಎಲ್ಲೇ ಇದ್ದರೂ ಪ್ರಿಂಟ್ ಮಾಡಬಹುದು
- ಆಟೊಮೆಟಿಕ್ ಡ್ಯುಪ್ಲೆಕ್ಸ್ ಪ್ರಿಂಟಿಂಗ್ ಸೌಲಭ್ಯ ಇಲ್ಲ
- ಪ್ರಿಂಟರ್ ಆನ್/ಆಫ್ ಆಗುವಾಗ ಹೆಚ್ಚಿನ ಸಮಯ ತೆಗೆದುಕೊಳ್ಳುವುದಲ್ಲದೇ ಶಬ್ದವೂ ಆಗುತ್ತದೆ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ

ಎಸ್ಸೆಸ್ಸೆಲ್ಸಿ

ಭೌತಶಾಸ್ತ್ರ

ಬೇರೆ ಬೇರೆ ದೂರದ ವಸ್ತುಗಳಿಂದ ಬಂದ ಬೆಳಕನ್ನು ಕೇಂದ್ರೀಕರಿಸಲು ಸಂಗಮ ದೂರ ಬದಲಾವಣೆ ಅವಶ್ಯವಾಗಿದ್ದು, ಅದನ್ನು ಮಾರ್ಪಡಿಸಲು ವಸ್ತುಗಳ ದೂರಕ್ಕನುಗುಣವಾಗಿ ವಕ್ರತೆಯನ್ನು ಬದಲಾಯಿಸಬೇಕಾಗುತ್ತದೆ. ದೂರದ ವಸ್ತುಗಳನ್ನು ನೋಡುವಾಗ ಸ್ನಾಯುಗಳು ವಿಶಾಲಗೊಂಡು ಮಸೂರವು ತೆಳ್ಳಗಾಗುತ್ತದೆ ಮತ್ತು ಸಂಗಮ ದೂರ ಹೆಚ್ಚಾಗುತ್ತದೆ. ಇದರಿಂದ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಹುದು.

ಹತ್ತಿರದ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗಿ ಮಸೂರದ ವಕ್ರತೆಯನ್ನು ಹೆಚ್ಚು ಮಾಡುತ್ತವೆ. ಇದರಿಂದ ಸಂಗಮ ದೂರವು ಕಡಿಮೆಯಾಗಿ ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕಣ್ಣಿಗೆ ವಸ್ತುವು ಸ್ಪಷ್ಟವಾಗಿ ಹಾಗೂ ಒತ್ತಡ ರಹಿತವಾಗಿ ಕಾಣುವ ಕನಿಷ್ಠ ದೂರವನ್ನು ಸ್ಪಷ್ಟ ದೃಷ್ಟಿಯ ಕನಿಷ್ಠ ದೂರ ಎನ್ನುವರು. ಇದು ಸಾಮಾನ್ಯ ದೃಷ್ಟಿ ಹೊಂದಿರುವ ಪ್ರೌಢ ವಯಸ್ಕರಿಗೆ 25 ಸೆಂ.ಮೀ ಆಗಿದೆ.

ದೃಷ್ಟಿದೋಷ ಮತ್ತು ಪರಿಹಾರ

1) ವಯಸ್ಸಾದವರಿಗೆ ಕಣ್ಣಿನ ಸ್ಫಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡ ಕವಿದಂತೆ ಆಗುತ್ತದೆ. ಇದನ್ನು ಕಣ್ಣಿನ ಪೊರೆ ಎನ್ನುವರು. ಇದು ಭಾಗಶಃ ಅಥವಾ ಪೂರ್ಣ ದೃಷ್ಟಿ ನಷ್ಟ ಉಂಟುಮಾಡಬಹುದಾಗಿದ್ದು, ಇದನ್ನು ಶಸ್ತ್ರಚಿಕಿತ್ಸೆಯ ಮೂಲಕ ಸರಿ ಹೋಗಿಸಬಹುದು.

ವಕ್ರೀಭವನದ ದೋಷಗಳು

1) ಮಯೋಪಿಯ ಅಥವಾ ಸಮೀಪ ದೃಷ್ಟಿ :

ಸಮೀಪ ದೃಷ್ಟಿ ದೋಷವುಳ್ಳ ವ್ಯಕ್ತಿಯು ಕೇವಲ ಸಮೀಪದ ವಸ್ತುಗಳನ್ನು ಮಾತ್ರ ನೋಡಲು ಶಕ್ತನಾಗಿದ್ದು, ದೂರದ ವಸ್ತುಗಳನ್ನು ನೋಡಲಾರ. ಈ ದೋಷವಿರುವ ವ್ಯಕ್ತಿಗೆ V ವಸ್ತುವಿನ ಪ್ರತಿಬಿಂಬವು ರೆಟಿನಾದ ಮುಂಭಾಗದಲ್ಲಿ ರೂಪುಗೊಳ್ಳುತ್ತದೆ. ಇದಕ್ಕೆ ಕಾರಣಗಳು ಕಣ್ಣಿನ ಮಸೂರದ ವಿಪರೀತ ವಕ್ರತೆ ಅಥವಾ ಕಣ್ಣುಗುಡ್ಡೆಯು ಸಹಜಸ್ಥಿತಿಗಿಂತ ಬದ್ಧವಾಗಿರುವುದಾಗಿರಬಹುದು. ಸೂಕ್ತ ಸಾಮರ್ಥ್ಯವುಳ್ಳ ನಿಮ್ನ ಮಸೂರದಿಂದ ಪ್ರತಿಬಿಂಬವನ್ನು ರೆಟಿನಾದ ಮೇಲೆ ಉಂಟು ಮಾಡಿದ ದೃಷ್ಟಿದೋಷವನ್ನು ಸರಿಪಡಿಸಬಹುದು.



(a) ಸಮೀಪ ದೃಷ್ಟಿ ಕಣ್ಣಿನ ದೂರ ಬಿಂದು

(b) ಸಮೀಪ ದೃಷ್ಟಿ ಕಣ್ಣು

(c) ಸಮೀಪ ದೃಷ್ಟಿಗೆ ಪರಿಹಾರ

2) ದೂರದೃಷ್ಟಿ ಅಥವಾ ಹೈಪರ್ ಮೆಟ್ರೋಪಿಯ

ದೂರದೃಷ್ಟಿಯುಳ್ಳ ವ್ಯಕ್ತಿಯು ಕೇವಲ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಶಕ್ತನಾಗಿದ್ದು, ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರ. ಈ ದೋಷವಿರುವ ವ್ಯಕ್ತಿ ಕಣ್ಣಿನಲ್ಲಿ ಪ್ರತಿಬಿಂಬವು ರೆಟಿನಾದ ಹಿಂಭಾಗದಲ್ಲಿ ಕೇಂದ್ರೀಕೃತಗೊಳ್ಳುತ್ತದೆ. ಈ ದೋಷವುಂಟಾಗಲು ಕಣ್ಣಿನ ಮಸೂರದ ಸಂಗಮ ದೂರವು ಉದ್ದವಾಗಿರುವುದು ಅಥವಾ ಕಣ್ಣುಗುಡ್ಡೆ ಚಿಕ್ಕದಾಗಿರುವುದು ಕಾರಣವಾಗಿರಬಹುದು. ಈ ದೋಷವನ್ನು ಸೂಕ್ತ ಸಾಮರ್ಥ್ಯವುಳ್ಳ ಪೀನ ಮಸೂರದ ಸಹಾಯದಿಂದ ಪ್ರತಿಬಿಂಬವನ್ನು ರೆಟಿನಾದ ಮೇಲೆ ಉಂಟು ಮಾಡಿ ಸರಿಪಡಿಸಬಹುದು.



(a) ದೂರ ದೃಷ್ಟಿ ಕಣ್ಣಿನ ಹತ್ತಿರದ ಬಿಂದು

(b) ದೂರ ದೃಷ್ಟಿ ಕಣ್ಣು

(c) ದೂರ ದೃಷ್ಟಿಗೆ ಪರಿಹಾರ

3) ಪ್ರಿಸ್ ಬಯೋಪಿಯ

ವಯಸ್ಸಾದಂತೆ ಕಣ್ಣಿನ ಸಿಲಿಯರಿ ಸ್ನಾಯುಗಳು ದುರ್ಬಲಗೊಂಡು ಕಣ್ಣಿನ ಮಸೂರವು ತನ್ನ ಸ್ಥಿತಿಸ್ಥಾಪಕತ್ವ ಗುಣವನ್ನು ಕಳೆದುಕೊಳ್ಳುತ್ತದೆ. ಇದರಿಂದ ವ್ಯಕ್ತಿಯು ಹತ್ತಿರದ ಅಥವಾ ದೂರದ ಅಥವಾ ಎರಡೂ ಬಗೆಯ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರ. ಇದನ್ನು ಪ್ರಿಸ್ ಬಯೋಪಿಯ ಎನ್ನುವರು. ಇದನ್ನು ದ್ವಿಸಂಗಮ ಮಸೂರಗಳ ಸಹಾಯದಿಂದ ಸರಿಪಡಿಸಬಹುದು.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಜೀವಶಾಸ್ತ್ರ ವಿಭಾಗದ 'ಮ್ಯಾನೇಜ್‌ಮೆಂಟ್ ಆಫ್ ನ್ಯಾಚುರಲ್ ರಿಸೋರ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/2Q5AP2J

ಬೆಳಕು ವಿಸರ್ಜಿಸುವ ಡಯೋಡ್ (LED)

ದ್ವಿತೀಯ ಪಿಯುಸಿ

ಭೌತಶಾಸ್ತ್ರ

ಇದು ಒಂದು ಅಧಿಕವಾಗಿ ಡೋಪು ಮಾಡಿದ p-n ಸಂಧಿಯಾಗಿದ್ದು, ನೇರಪಕ್ಷಪಾತದಲ್ಲಿ ಸ್ವಯಂಪ್ರೇರಿತ ವಿಕಿರಣಗಳನ್ನು ಹೊರಸೂಸುತ್ತದೆ. ಇದನ್ನು ಪಾರದರ್ಶಕ ಹೊದಿಕೆಯಿಂದ ಸುತ್ತಿರುತ್ತಾರೆ.

ಡಯೋಡ್ ಅನ್ನು ನೇರಪಕ್ಷಪಾತದಲ್ಲಿರಿಸಿದಾಗ ಎಲೆಕ್ಟ್ರಾನ್‌ಗಳು n ನಿಂದ p ಗೆ ಮತ್ತು ರಂಧ್ರಗಳು p ನಿಂದ n ಗೆ ಚಲಿಸುತ್ತವೆ. ಈ ಸಂದರ್ಭದಲ್ಲಿ ಸಂಧಿಯ ಎಲ್ಲೆಯಲ್ಲಿ ಅಲ್ಪಸಂಖ್ಯಾ ವಾಹಕತೆಗಳ ಸಾರತೆಯು ಹೆಚ್ಚಾಗಿದ್ದು ಸಂಧಿಯ ಎಲ್ಲೆಯ ಎರಡು ಬದಿಗಳಲ್ಲಿ ಹೆಚ್ಚುವರಿ ಅಲ್ಪ ಸಂಖ್ಯಾವಾಹಕತೆಗಳು ಬಹುಸಂಖ್ಯಾ ವಾಹಕತೆಗಳೊಂದಿಗೆ ಮರು ಸೇರ್ಪಡೆ ನಡೆಯುತ್ತದೆ ಮತ್ತು ಮರು ಸೇರ್ಪಡೆಯಾಗುವ ಸಮಯದಲ್ಲಿ ಬಿಡುಗಡೆಯಾಗುವ ಶಕ್ತಿಯು ಫೋಟಾನ್ ರೂಪದಲ್ಲಿರುತ್ತದೆ. ನೇರ ಪ್ರವಾಹವನ್ನು ಹೆಚ್ಚಿಸುವುದರೊಂದಿಗೆ ಬೆಳಕಿನ ತೀವ್ರತೆಯನ್ನು ಹೆಚ್ಚಿಸಬಹುದು.

LED ಯ I-V ಲಕ್ಷಣಗಳು ಡಯೋಡಿನ ಲಾಕ್ಷಣಿಕಗಳಂತೆ ಇದ್ದು, ಹೊಸ್ತಿಲ ವೋಲ್ಟೇಜ್‌ಗಳು ಪ್ರತಿ ಬಣ್ಣಕ್ಕೂ ಭಿನ್ನವಾಗಿರುತ್ತವೆ. LED ಬಣ್ಣಗಳು ಅರೆವಾಹಕದ ಪಟ್ಟಿ ಅಂತರದ ಮೇಲೆ ಅವಲಂಬಿತವಾಗಿದ್ದು ಪಟ್ಟಿ ಅಂತರ ಹೆಚ್ಚಾದಂತೆ ಬೆಳಕಿನ ತರಂಗದೂರ ಕಡಿಮೆಯಾಗುತ್ತಾ ಹೋಗುತ್ತದೆ.

LED ಯ ಪ್ರಯೋಜನಗಳು

- ದೀರ್ಘ ಬಾಳಿಕೆ ಮತ್ತು ದೃಢವಾಗಿವೆ
- ಶೀಘ್ರವಾಗಿ ಆನ್, ಆಫ್ ಆಗುವ ಸಾಮರ್ಥ್ಯ ಹೊಂದಿವೆ
- ಶೀಘ್ರ ಕಾರ್ಯ ಪ್ರವತ್ತಿ
- ಬಿಸಿಯಾಗುವುದಕ್ಕೆ ಕಾಲ ನಿಗದಿಯ ಅವಶ್ಯಕತೆಯಿಲ್ಲ
- ಏಕವರ್ಣೀಯಕ್ಕೆ ಹತ್ತಿರವಾಗಿರುತ್ತದೆ.

ಸೌರಕೋಶ

ಸೌರಕೋಶವು ಮೂಲತಃ ಒಂದು p-n ಸಂಧಿಯಾಗಿದ್ದು, ಸೌರ ವಿಕಿರಣವು p-n ಸಂಧಿಯ ಮೇಲೆ ಬೀಳುವುದರಿಂದ ವಿದ್ಯುತ್‌ಚಾಲಕ ಬಲವನ್ನು ಉತ್ಪತ್ತಿ ಮಾಡುತ್ತದೆ.

300 ರಷ್ಟು ದಪ್ಪವಿರುವ p - si ಬಿಲ್ಲೆಯನ್ನು n-si ನ ಒಂದು ಬದಿಯ ಮೇಲೆ ವಿಸರಣಗೊಳಿಸಿ ಇನ್ನೊಂದು ಬದಿಗೆ ಲೋಹದ ಲೇಪನ ಮಾಡಲಾಗುತ್ತದೆ. n- si ಚದರದ ಮೇಲೆ ಲೋಹದ ಜಾಲಕವನ್ನು ಅಳವಡಿಸಲಾಗುತ್ತದೆ. ಸೂಕ್ತ ಶಕ್ತಿಯಿರುವ ಬೆಳಕು ಸಾರಕೋಶದ ಮೇಲೆ ಬಿದ್ದಾಗ ಅದು ವಿದ್ಯುತ್‌ಚಾಲಕ ಬಲವನ್ನು



(a) (b)

ಉತ್ಪಾದಿಸುವುದರಿಂದ ಇದನ್ನು ದ್ಯುತಿ ವೋಲ್ಟೇಜ್ ಎನ್ನುವರು.

ಸೌರಕೋಶದಲ್ಲಿ 3 ಪ್ರಕ್ರಿಯೆಗಳು

1) ಉತ್ಪತ್ತಿಯಾಗುವಿಕೆ: ಸಂಧಿಯ ಸಮೀಪದಲ್ಲಿ ಬೆಳಕಿನ ಸಹಾಯದಿಂದ ($hv > E_g$) ಎಲೆಕ್ಟ್ರಾನ್-ರಂಧ್ರಗಳು ಉತ್ಪತ್ತಿಯಾಗುತ್ತವೆ.

2) ಬೇರ್ಪಡಿಸುವಿಕೆ: ಬರಿದಾದ ವಲಯದಲ್ಲಿ ವಿದ್ಯುತ್ ಕ್ಷೇತ್ರದ ಸಹಾಯದಿಂದ ಎಲೆಕ್ಟ್ರಾನ್-ರಂಧ್ರಗಳು ಪರಸ್ಪರ ಬೇರ್ಪಡುತ್ತವೆ.

3) ಸಂಗ್ರಹಿಸುವಿಕೆ: ಬೇರ್ಪಟ್ಟು n- ಬದಿಗೆ ಬಂದ ಎಲೆಕ್ಟ್ರಾನ್‌ಗಳನ್ನು ಮುಂಬದಿ ತಳವು ಮತ್ತು p - ಬದಿಗೆ ಬಂದ ರಂಧ್ರಗಳನ್ನು ಹಿಂಬದಿ ತಳವು ಸಂಗ್ರಹಿಸುತ್ತದೆ. ಇದರಿಂದ p ಬದಿಯು ಧನಾವೇಶವನ್ನು n - ಬದಿಯು ಋಣಾವೇಶವನ್ನು ಹೊಂದಿ 'ಫೋಟೊ' ವೋಲ್ಟೇಜ್ ಅನ್ನು ನೀಡುತ್ತವೆ.

ಸೌರಕೋಶದ I-V ಲಕ್ಷಣಗಳು:



ಸೌರಕೋಶದ ಲಕ್ಷಣಗಳನ್ನು ನಾಲ್ಕನೇ ಚತುರ್ಥಕದಲ್ಲಿ ಎಳೆಯಲಾಗಿದೆ. ಇದು ಯಾವುದೇ ಪ್ರವಾಹವನ್ನು ಪಡೆಯದೆ ಅಷ್ಟೇ ಪ್ರಮಾಣದ ಪ್ರವಾಹವನ್ನು ಹೊರ ರೋಧಕ್ಕೆ ಸರಬರಾಜು ಮಾಡುತ್ತದೆ.

ಸೌರಕೋಶಗಳ ತಯಾರಿಕೆಗೆ ಬೇಕಾದ ಪದಾರ್ಥಗಳ ಆಯ್ಕೆಯಲ್ಲಿನ ಅಂಶಗಳು

1) ಪಟ್ಟಿ ಅಂತರ (~ 1.0eV ನಿಂದ 1.8 ev)
2) ಹೆಚ್ಚಿನ ದ್ಯುತಿ ಹೀರಿಕೆ ಗುಣ (~ 10^4 cm^{-1})
3) ವಿದ್ಯುತ್ ವಾಹಕತೆ
4) ಕಚ್ಚಾ ಪದಾರ್ಥಗಳ ದೊರಕುವಿಕೆ

(ಮುಂದುವರೆಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಆಟಂ: ಬೋರ್ಸ್ ಸೆಕೆಂಡ್ ಪೋಶ್ಚುಲೇಟ್ ಆಫ್ ಕ್ವ್ಯಾಂಟಿಸೇಷನ್' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3bOQADA



"ನೀವು ಕಂಪ್ಯೂಟರ್ ರಿಸೆಲ್ಲರ್ ಆಗಿದ್ದಲ್ಲಿ ನಿಮಗೆ ಇಲ್ಲಿ ಒಂದು ಸರಿಯಾದ ಉದ್ಯಮಾವಕಾಶ ಕಾದಿದೆ.

ಭಾರತದ ಮೊದಲ Microsoft Authorised Refurbisher (MAR)ಗಳಲ್ಲಿ ಒಬ್ಬರಾಗಿರುವ **Renew IT** ಮೂಲಕ Third Party Refurbisher (TPR) ಕಾರ್ಯಕ್ರಮವನ್ನು ಸೇರಿಕೊಳ್ಳಿ. ನಿಮ್ಮ ಗ್ರಾಹಕರಿಗೆ ಅಧಿಕೃತವಾದ "Out of-the box" ಅನುಭವವನ್ನು ನೀಡಿ ಮತ್ತು ಮಾಲ್‌ವೇರ್ ತೊಂದರೆ ಅಥವಾ ಬ್ರೇಕ್‌ಡೌನ್‌ಗಳು ಇನ್ನಿಲ್ಲದಂತೆ ಮಾಡಿ.

ನೀವು ಮಾರಾಟ ಮಾಡುವ ಪ್ರತಿ Refurbished Computer ಜೊತೆಗೆ ನೀವು ಅಧಿಕೃತ Windows10 ಅನ್ನು ರಿಯಾಯಿತಿಯ ದರಗಳಲ್ಲಿ ಪೂರೈಸಬಹುದಲ್ಲದೆ, ಇದು ಸಂಪೂರ್ಣ ಕಾರ್ಯಾತ್ಮಕ ಪರಿಹಾರವನ್ನು ನೀಡುತ್ತದೆ.

ನಿಮ್ಮ ಎಲ್ಲಾ ಗ್ರಾಹಕರಿಗೆ Windows 10ರ ಭವಿಷ್ಯದ ಬಿಡುಗಡೆಗಳಿಗೆ ಸಂಪೂರ್ಣ upgrade ಮಾಡಿಕೊಳ್ಳುವ ಅವಕಾಶ ಲಭ್ಯವಿರುತ್ತದೆ.

For more information, please
Call 96111 09383
email to **sales@renewit.in**
or do visit our website
www.renewit.in

Refurbished desktops ಮತ್ತು laptops ಮೇಲೆ ಉತ್ಸಾಹಪೂರ್ಣ ಕೊಡುಗೆಗಳನ್ನು ಪಡೆದುಕೊಳ್ಳಿರಿ.

ReNew Affordable Computers

Microsoft AUTHORIZED Refurbisher

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಭೂತಕಾಲವನ್ನು ಕೃತಜ್ಞತೆಯಿಂದ ನೆನೆಯೋಣ,
ವರ್ತಮಾನದಲ್ಲಿ ಉತ್ಸಾಹದಿಂದ ಬದುಕೋಣ ಮತ್ತು
ಭವಿಷ್ಯವನ್ನು ಆತ್ಮವಿಶ್ವಾಸದಿಂದ ಎದುರುನೋಡೋಣ.
-ಎರಡನೇ ಪೋಪ್ ಜಾನ್ ಪಾಲ್

ಆಹಾರದ ಪೋಲು ತಡೆಯಲು ಎಲ್ಲರೂ ಕೈ ಜೋಡಿಸೋಣ

ಮನುಕುಲವನ್ನು ಒಂದೆಡೆ ಹಸಿವು ಮತ್ತು ಅಪೌಷ್ಟಿಕತೆ ಕಾಡುತ್ತಿದೆ. ಮತ್ತೊಂದೆಡೆ ಆಹಾರದ ಪೋಲು ಎಗ್ಗಿಲ್ಲದೆ ಆಗುತ್ತಿದೆ. ಆಹಾರ ಪೋಲಾಗುವುದನ್ನು ತಪ್ಪಿಸಿ, ಅದನ್ನು ಅಗತ್ಯ ಇರುವವರಿಗೆ ತಲುಪಿಸಿದರೆ ಹಸಿವು ಮತ್ತು ಅಪೌಷ್ಟಿಕತೆಯಂತಹ ಗಂಭೀರ ಸಮಸ್ಯೆಗಳನ್ನು ತಕ್ಕಮಟ್ಟಿಗಾದರೂ ನಿವಾರಿಸಬಹುದು. ಆದರೆ, ಅದು ಸಾಧ್ಯವಾಗುತ್ತಿಲ್ಲ ಎಂಬುದು ಕಳವಳಪಡಬೇಕಾದ ಸಂಗತಿ. ವಿಶ್ವಸಂಸ್ಥೆಯ ಆಹಾರ ಪೋಲು ಸೂಚ್ಯಂಕ-2021ರ ವರದಿ ಕಳೆದ ವಾರ ಬಿಡುಗಡೆಯಾಗಿದೆ. ಈ ವರದಿಯ ಮುಖ್ಯಾಂಶಗಳತ್ತ ಕಣ್ಣಾಡಿಸಿದರೆ ಪೋಲಾಗುತ್ತಿರುವ ಆಹಾರದ ಅಗಾಧತೆ ಮನವರಿಕೆಯಾಗುತ್ತದೆ. ಪೋಲು ಮಾಡುವ ಪ್ರವೃತ್ತಿಗೆ ಗಡಿಗಳ ಹಂಗಿಲ್ಲ. ಪ್ರಮಾಣದಲ್ಲಿ ವ್ಯತ್ಯಾಸವಿದ್ದರೂ ಇದರ ಇರುವಿಕೆಯು ಜಗತ್ತಿನ ಎಲ್ಲೆಡೆ ಕಾಣಸಿಗುತ್ತದೆ. 2019ರಲ್ಲಿ ಜಗತ್ತಿನಾದ್ಯಂತ 93.1 ಕೋಟಿ ಟನ್‌ನಷ್ಟು ಆಹಾರ ಪೋಲಾಗಿದೆ. ಇದರಲ್ಲಿ ಶೇಕಡ 61ರಷ್ಟು ಆಹಾರ ಪೋಲು ಮನೆಗಳಲ್ಲೇ ಆಗಿದೆ. ಆಹಾರ ತಯಾರಿಕಾ ಉದ್ದಿಮೆಗಳಿಂದ ಶೇ 26ರಷ್ಟು ಪೋಲಾಗುತ್ತಿದೆ ಎಂದು ವರದಿ ತಿಳಿಸಿದೆ. ಜಾಗತಿಕವಾಗಿ ಉತ್ಪಾದಿಸಲಾಗುವ ಒಟ್ಟು ಆಹಾರ ಪದಾರ್ಥಗಳಲ್ಲಿ ಶೇ 17ರಷ್ಟು ಪೋಲಾಗುತ್ತಿದೆ. ವಿಪರ್ಯಾಸದ ಸಂಗತಿ ಎಂದರೆ, 2019ರಲ್ಲಿ 69 ಕೋಟಿ ಜನರು ಆಹಾರದ ಕೊರತೆ ಎದುರಿಸಿದ್ದಾರೆ. ಕೋವಿಡ್-19 ಕಾರಣದಿಂದಾಗಿ ಮುಂದಿನ ದಿನಗಳಲ್ಲಿ ಈ ಸಂಖ್ಯೆ ಇನ್ನಷ್ಟು ಏರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಆಹಾರದ ಪೋಲು ವಿಚಾರದಲ್ಲಿ ಭಾರತವನ್ನು ಸಮಗ್ರ ಮಾಹಿತಿ ಲಭ್ಯವಿಲ್ಲದ ದೇಶಗಳ ಸಾಲಿನಲ್ಲಿ ಸೇರಿಸಲಾಗಿದೆ. ಈ ಅಧ್ಯಯನಕ್ಕೆ ನಮ್ಮ ದೇಶದ ಕೆಲವೇ ನಗರಗಳು ಒಳಗೊಂಡಿವೆ. ಭಾರತದಲ್ಲಿ ಮನೆಗಳಲ್ಲಿ ಪೋಲಾಗುವ ಆಹಾರದ ಕುರಿತ ಮಾಹಿತಿ ಮಾತ್ರ ಈ ವರದಿಯಲ್ಲಿ ಅಡಕವಾಗಿದೆ. ನಮ್ಮ ದೇಶದಲ್ಲಿ ವಾರ್ಷಿಕ ತಲಾವಾರು ಆಹಾರ ಪೋಲಿನ ಪ್ರಮಾಣ 50 ಕೆ.ಜಿ.ಯಷ್ಟು ಎಂದು ಅಂದಾಜಿಸಲಾಗಿದೆ. ಈ ಪ್ರಮಾಣವು ಅಮೆರಿಕ ಮತ್ತು ಚೀನಾದಲ್ಲಿ ಆಗುತ್ತಿರುವ ಪೋಲಿನ ಪ್ರಮಾಣಕ್ಕಿಂತ ಕಡಿಮೆ. ಇದನ್ನು ಆಹಾರದ ಸಮರ್ಪಕ ಬಳಕೆಯ ನೆಲೆಯಲ್ಲಿ ನೋಡುವುದಕ್ಕಿಂತ ಆಹಾರದ ಲಭ್ಯತೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ತುಲನಾತ್ಮಕವಾಗಿ ಲಭ್ಯತೆಯ ಪ್ರಮಾಣ ನಮ್ಮಲ್ಲಿ ಕಡಿಮೆ.

ಅಮೂಲ್ಯವಾದ ಆಹಾರವನ್ನು ಯಾವುದೇ ರೀತಿಯಲ್ಲಿ ಪೋಲು ಮಾಡದಂತೆ ಜನರಲ್ಲಿ ತಿಳಿವಳಿಕೆ ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಇದು ಮನೆಯಿಂದಲೇ ಮೊದಲಾಗಬೇಕು

ಅಭಿವೃದ್ಧಿ ಹೊಂದಿದ ದೇಶಗಳಲ್ಲೇ ಆಹಾರ ಪದಾರ್ಥಗಳು ಹೆಚ್ಚಿನ ಪ್ರಮಾಣದಲ್ಲಿ ಪೋಲಾಗುತ್ತವೆ ಎಂಬುದು ಸಾಮಾನ್ಯ ನಂಬಿಕೆ. ಆದರೆ, ಈ ನಂಬಿಕೆಯಲ್ಲಿ ಹುರುಳಿಲ್ಲ ಎಂದು ವರದಿ ತಿಳಿಸಿದೆ. ಹಾಗೆ ನೋಡಿದರೆ, ಈ ಸಮಸ್ಯೆಯ ತೀವ್ರತೆಯು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೇ ಹೆಚ್ಚು ಎಂದು ಕೆಲವು ಅಧ್ಯಯನಗಳು ಸಾರಿವೆ. ಜಗತ್ತು ತನಗೆ ಬೇಕಾದುದಕ್ಕಿಂತ ಎರಡು ಪಟ್ಟು ಹೆಚ್ಚು ಆಹಾರವನ್ನು ಉತ್ಪಾದಿಸುತ್ತಿದೆ. ಆದರೆ, ಪೋಲಾಗುವ ಪ್ರಮಾಣವೂ ಅಧಿಕವಾಗಿರುವುದರಿಂದ ಹಸಿದ ಹೊಟ್ಟೆಗೆ ಆಹಾರ ಸಿಗುತ್ತಿಲ್ಲ ಎಂಬುದು ಅತ್ಯಂತ ವಿಷಾದದ ಸಂಗತಿ. ಹೊಲ, ಕಣಜ, ಮಾರುಕಟ್ಟೆ, ಗೋದಾಮು, ಸಂಸ್ಕರಣಾ ಘಟಕ ಮೊದಲಾದ ಹಂತಗಳನ್ನು ದಾಟಿ ಮಾರಾಟ ಮಳಿಗೆ ತಲುಪುವವರೆಗೂ ಮತ್ತು ಅಲ್ಲಿಂದ ಅಂತಿಮವಾಗಿ ಅಡುಗೆ ಮನೆ ಸೇರುವವರೆಗೂ ಪೋಲು ಒಂದಲ್ಲ ಒಂದು ರೂಪದಲ್ಲಿ ಆಗುತ್ತಲೇ ಇರುತ್ತದೆ. ಕೆಲವು ಹಣ್ಣು-ತರಕಾರಿಗಳು ಬೇಗ ಕೊಳೆತುಹೋಗುತ್ತವೆ. ಸಾಗಣೆ, ದಾಸ್ತಾನಿಗೆ ಬೇಕಾದ ಮೂಲ ಸೌಕರ್ಯ ಹೆಚ್ಚಿಸುವ ಕಡೆ ಸರ್ಕಾರಗಳು ಗಮನ ಹರಿಸಬೇಕು. ಅಗತ್ಯ ಪ್ರಮಾಣದಲ್ಲಿ ಶೀತಲೀಕರಣ ಘಟಕಗಳನ್ನು ಸ್ಥಾಪಿಸಬೇಕು. ಸಂಸ್ಕರಣೆ, ಪ್ಯಾಕೇಜ್‌ಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ನಮ್ಮಲ್ಲಿ ಗೋದಾಮುಗಳು ಮಳೆ ಬಂದಾಗ ಸೋರುತ್ತವೆ. ಆಹಾರಧಾನ್ಯಗಳ ಅಸಮರ್ಪಕ ಸಂಗ್ರಹದ ಜೊತೆಗೆ ವಿತರಣಾ ವ್ಯವಸ್ಥೆಯಲ್ಲಿನ ದೋಷಗಳೂ ಸೇರಿಕೊಂಡು, ಸಾರ್ವಜನಿಕ ಪಡಿತರ ವ್ಯವಸ್ಥೆಯ ಯೋಜನೆಗಳು ಅರ್ಹರನ್ನು ಪರಿಣಾಮಕಾರಿಯಾಗಿ ತಲುಪುವಲ್ಲಿ ವಿಫಲವಾಗಿವೆ. ಈ ನ್ಯೂನತೆಗಳನ್ನು ಸರಿಪಡಿಸಬೇಕು. ಪೋಲು ತಡೆಯುವಲ್ಲಿ ಜನಜಾಗೃತಿಯ ಪಾತ್ರ ದೊಡ್ಡದು. ಆಹಾರ ಅಮೂಲ್ಯ. ಅದನ್ನು ಯಾವುದೇ ರೀತಿಯಲ್ಲಿ ಪೋಲು ಮಾಡಬಾರದು ಎಂದು ಜನರಲ್ಲಿ ತಿಳಿವಳಿಕೆ ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಇದು ಮನೆಯಿಂದಲೇ ಮೊದಲಾಗಬೇಕು. ಅರಿವಿನ ತಳವನ್ನು ಶಾಲಾ ಹಂತದಲ್ಲಿ ಗಟ್ಟಿಗೊಳಿಸಬೇಕು. ಜಾಗತಿಕ ಹಸಿವಿನ ಸೂಚ್ಯಂಕ ಪಟ್ಟಿಯಲ್ಲಿ 107 ದೇಶಗಳ ಪೈಕಿ ಭಾರತ 94ನೇ ಸ್ಥಾನದಲ್ಲಿದೆ. ಶೇ 14ರಷ್ಟು ಭಾರತೀಯರು ಹಸಿವು ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂಬ ವರದಿಗಳಿವೆ. ಈ ಅಂಶಗಳು ನಮ್ಮ ಕಣ್ಣು ತೆರೆಸಬೇಕಿದೆ. ಆಹಾರ ಪೋಲು ತಗ್ಗಿಸುವುದರಿಂದ ಹಸಿರುಮನೆ ಅನಿಲ ಬಿಡುಗಡೆ ಪ್ರಮಾಣ ತಗ್ಗಿಸಬಹುದು. ಪರಿಸರದ ಮೇಲೆ ಬೀಳುವ ಒತ್ತಡ ಕಡಿಮೆ ಮಾಡಬಹುದು. ನೀರು, ಇಂಧನ, ಶ್ರಮ ಉಳಿಸಬಹುದು. ಹೀಗಾಗಿ ಆಹಾರದ ಪೋಲು ತಪ್ಪಿಸುವುದು ಆಂದೋಲನದ ರೂಪ ಪಡೆಯಬೇಕು.

ದಿನದ ಟ್ವೀಟ್

ತಪ್ಪೆಂದು ಸಾಬೀತಾಗಲಿ

ಮುಂಬೈನ ಕೊಳೆಗೇರಿಗಳು ಕೋವಿಡ್‌ನಿಂದ ಮತ್ತೆ ಹೊಡೆತ ತಿನ್ನುತ್ತವೆಯೇ? ನನ್ನ ಒಳಮನಸ್ಸು 'ಹೌದು' ಎಂದು ಹೇಳುತ್ತದೆ. ಸ್ವಂತ ಊರುಗಳಿಗೆ ತೆರಳಿದ್ದ ಧಾರಾವಿ ಕೊಳೆಗೇರಿಯ ಶೇ 60ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ನಿವಾಸಿಗಳು ಈಗ ಮರಳಿದ್ದಾರೆ. ಅವರು ಇನ್ನೂ ಸೋಂಕಿಗೆ ತುತ್ತಾಗುವ ಸ್ಥಿತಿಯಲ್ಲಿಯೇ ಇದ್ದಾರೆ. ನನ್ನ ಭಾವನೆ ತಪ್ಪೆಂದು ಸಾಬೀತಾಗಲಿ ಎಂದು ಪ್ರಾಮಾಣಿಕವಾಗಿ ಅಂದುಕೊಳ್ಳುತ್ತೇನೆ.

ಡಾ. ಅಮಿತ್ ಥಧನಿ, ವೈದ್ಯ

25 ವರ್ಷಗಳ ಹಿಂದೆ

ಭಾನುವಾರ, 17-3-1996

- **ಆಕಸ್ಮಿಕ ಸಾವು- ರೈತರಿಗೆ 25 ಸಾವಿರ ರೂ. ಪರಿಹಾರ**

ಮಂಡ್ಯ, ಮಾರ್ಚ್ 16– ರೈತರು ಆಕಸ್ಮಿಕ ದುರ್ಮರಣಕ್ಕೆ ತುತ್ತಾದರೆ ಅವರ ಕುಟುಂಬಕ್ಕೆ ಇಪ್ಪತ್ತೈದು ಸಾವಿರ ರೂಪಾಯಿ ಪರಿಹಾರ ಕೊಡಲಾಗುವುದು ಎಂದು ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಶನಿವಾರ ಪ್ರಕಟಿಸಿದರು.

- **ಐಆರ್‌ಎಸ್- ಪಿ3 ಉಡಾವಣೆ ಮುಂದಕ್ಕೆ**

ಶ್ರೀಹರಿಕೋಟ, ಮಾರ್ಚ್ 16– ಸೋಮವಾರ ಬೆಳಿಗ್ಗೆ ನಡೆಯಬೇಕಿದ್ದ ಪಿಎಸ್‌ಎಲ್‌ವಿ-ಡಿ3 ಮತ್ತು ಐಆರ್‌ಎಸ್-ಪಿ3ಯ ಉಡಾವಣೆ ಕಾರ್ಯ, ಆಂಧ್ರ ಪ್ರದೇಶದ ಪೂರ್ವ ಕರಾವಳಿಯಲ್ಲಿನ ಪ್ರತಿಕೂಲ ಹವಾಮಾನದಿಂದಾಗಿ ಎರಡು ದಿನ ಮುಂದಕ್ಕೆ ಹೋಗಿದೆ.

- **ಕಾಲೇಜು ಬಂದ್- ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಬೆದರಿಕೆ**

ಬೆಂಗಳೂರು, ಮಾರ್ಚ್ 16– ಅಲ್ಪಸಂಖ್ಯಾತರ ವೃತ್ತಿಶಿಕ್ಷಣ ಸಂಸ್ಥೆಗಳಿಗೆ ನೀಡಿರುವ ಸೌಲಭ್ಯವನ್ನು ಇನ್ನು 15 ದಿನಗಳ ಒಳಗೆ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸದಿದ್ದಲ್ಲಿ, ತಮ್ಮ ಶಿಕ್ಷಣ ಸಂಸ್ಥೆಗಳ ಬಾಗಿಲು ಮುಚ್ಚುವ ತೀವ್ರತರ ಕ್ರಮಕ್ಕೂ ಹಿಂಜರಿಯುವುದಿಲ್ಲ ಎಂದು ಅಖಿಲ ಭಾರತ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸಂಘಟನೆ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಇಂದು ಇಲ್ಲಿ ಇಡೀ ದಿನ ಸಭೆ ಸೇರಿ ಚರ್ಚೆ ನಡೆಸಿದ ಅಖಿಲ ಭಾರತ ವೃತ್ತಿಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಈ ತೀರ್ಮಾನ ಕೈಗೊಂಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 17-3-1971

- **'ಆಡಳಿತ ಕಾಂಗ್ರೆಸ್ ಜತೆ ಗೌರವಯುತ ವಿಲೀನ'**

ಬೆಂಗಳೂರು, ಮಾರ್ಚ್ 16– ಗೌರವಯುತವಾದ ರೀತಿಯಲ್ಲಿ ಆಡಳಿತ ಕಾಂಗ್ರೆಸ್ಸಿನೊಡನೆ ವಿಲೀನಗೊಳ್ಳಬೇಕೆಂಬುದು ರಾಜ್ಯದ ಸಂಸ್ಥಾ ಕಾಂಗ್ರೆಸ್ ಶಾಸಕರ ಬಹುತೇಕ ಅಭಿಪ್ರಾಯವಿದ್ದಂತೆ ಕಾಣುತ್ತದೆ.

ಮಧ್ಯಂತರ ಚುನಾವಣೆಯಲ್ಲಿ ಭಾರಿ ಸೋಲನ್ನು ಅನುಭವಿಸಿದ ಪಕ್ಷದ ಮುಂದಿನ ಮಾರ್ಗವೇನು ಎಂಬುದರ ಕುರಿತು ಇಂದು ಚರ್ಚಿಸಿದ ರಾಜ್ಯ ವಿಧಾನ ಮಂಡಲದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಈ ಅಭಿಪ್ರಾಯ ಹೆಚ್ಚು ಪ್ರಮಾಣದಲ್ಲಿ ವ್ಯಕ್ತವಾಯಿತೆಂದು ತಿಳಿದುಬಂದಿದೆ.

- **ಮಂಚನಬೆಲೆ ಯೋಜನೆ ಕೈಗೊಳ್ಳುವ ಬಗ್ಗೆ ಸರ್ಕಾರದ ಅಂತಿಮ ನಿರ್ಧಾರವಿಲ್ಲ**

ಬೆಂಗಳೂರು, ಮಾರ್ಚ್ 16– ಆರ್ಥಿಕ ದೃಷ್ಟಿಯಿಂದ ಮಂಚನಬೆಲೆ ಯೋಜನೆ ವೆಚ್ಚದ ಯೋಜನೆಯಾಗಿ, ಅದರಿಂದ ಆಗುವ ಉಪಯೋಗ ಕಡಿಮೆ ಇರುವುದರಿಂದ ಆ ಯೋಜನೆಯನ್ನು ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಯೋಚಿಸಬೇಕೆಂದು ಮುಖ್ಯ ಎಂಜಿನಿಯರ್ ಅವರು ಮಾಡಿರುವ ವರದಿಯಲ್ಲಿ ತಿಳಿಸಿದ್ದಾರೆಂದು ದೊಡ್ಡ ನೀರಾವರಿ ಮತ್ತು ವಿದ್ಯುಚ್ಛಕ್ತಿ ಉಪಸಚಿವ ಶ್ರೀ ಡಿ.ಪರಮೇಶ್ವರಪ್ಪ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಹೊಸಿಲಲ್ಲಿರುವ ದೇಶವು ತನ್ನ ಪ್ರಬುದ್ಧತೆಯನ್ನು ಜಗತ್ತಿಗೆ ಬಿಂಬಿಸಲು ಸಕಾಲ

ಸ್ವಾತಂತ್ರ್ಯ ಚಳವಳಿಯ ಅಸಲಿ ಸಂದೇಶ

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಭಾರತ ಸ್ವಾತಂತ್ರ್ಯ ಪಡೆದು ಎಪ್ಪತ್ತೈದು ವರ್ಷ ತಲುಪಲಿರುವ ವರ್ಷಾಚರಣೆಯ ಗಡಿಬಿಡಿ ಶುರುವಾಗ ತೊಡಗಿದೆ. ಸರ್ಕಾರಿ ಆಚರಣೆಗಳು ಆಳುವವರ ಸ್ವಾರ್ಥಕ್ಕೆ ಬಳಕೆ ಆಗುವುದರಿಂದ ಇಂಥ ಆಚರಣೆಗಳ ಬಗ್ಗೆ ಜನ ಸಿನಿಕರಾಗಿದ್ದಾರೆ. ಆದ್ದರಿಂದಲೇ ಸರ್ಕಾರಗಳ ಹೊರಗೆ ಸ್ವತಂತ್ರ ವೇದಿಕೆಗಳು ಸ್ವಾತಂತ್ರ್ಯ ಚಳವಳಿಯ ನಿಜವಾದ ಅರ್ಥವನ್ನು ಜನರಿಗೆ ತಿಳಿಸಿಹೇಳಬೇಕಾಗಿದೆ; ಭಾರತೀಯ ಸ್ವಾತಂತ್ರ್ಯ ಚಳವಳಿಯು ಸಮಾಜ ಸುಧಾರಣಾ ಚಳವಳಿಯಾಗಿ, ಆಧುನಿಕ ಭಾರತದ ನಿರ್ಮಾಣದ ಉತ್ಸಾಹವಾಗಿ ವಿಕಾಸಗೊಂಡ ಬಗೆಯನ್ನು ಒತ್ತಿ ಹೇಳಬೇಕಾಗಿದೆ. ಭಾರತದ ಸ್ವಾತಂತ್ರ್ಯ ಚಳವಳಿಯ ಇಂಥ ಆದರ್ಶಗಳು ಇನ್ನಿತರ ದೇಶಗಳ ಸ್ವಾತಂತ್ರ್ಯ ಚಳವಳಿಗಳಲ್ಲಿರಲಿಲ್ಲ; ಇದು ಭಾರತೀಯ ಸ್ವಾತಂತ್ರ್ಯ ಚಳವಳಿಯ ಹಿರಿಮೆ ಎಂಬುದನ್ನು ಭಾರತೀಯರು ಮೊದಲು ಅರಿಯಬೇಕು.

ಮೊದಮೊದಲು ಖಚಿತ ಕೇಂದ್ರವಿಲ್ಲದೆ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯು ಗಾಂಧೀಜಿ ಬರುವತನಕ ಬಹುತೇಕ ಮನವಿ ಹಾಗೂ ಹಕ್ಕೊತ್ತಾಯಗಳ ಚಳವಳಿಯಾಗಿದ್ದುದನ್ನು ಅಂಬೇಡ್ಕರ್ ಗುರುತಿಸುತ್ತಾರೆ. ಆರಂಭದಲ್ಲಿ ನೀಲಿ ಬೆಳೆಗಾರರ ಹೋರಾಟ, ಅಹಮದಾಬಾದಿನ ಗಿರಣಿ ಕಾರ್ಮಿಕರ ಹೋರಾಟ, ನಂತರ ಖೇಡಾ ರೈತರ ಹೋರಾಟದಲ್ಲಿ ಭಾಗಿಯಾದ ಗಾಂಧೀಜಿ, ಸ್ವಾತಂತ್ರ್ಯ ಚಳವಳಿಯನ್ನು ಸಮಾಜ ಪರಿವರ್ತನೆಯ ಜೊತೆಗೆ ಬೆಸೆದರು; ಗ್ರಾಮಭಾರತವನ್ನು ಕಟ್ಟಲೆತ್ನಿಸಿದರು. ಕಮ್ಯುನಿಸ್ಟರು ಸ್ವಾತಂತ್ರ್ಯ ಚಳವಳಿಗೆ ದುಡಿಯುವ ವರ್ಗದ ಚಳವಳಿಯ ಚಹರೆಯನ್ನು ತರಲೆತ್ನಿಸಿದರು. ದಲಿತರಿಗೆ ನಿಷಿದ್ಧವಾಗಿದ್ದ ಮಹಾಡ್ ಕೆರೆಯ ನೀರನ್ನು ಅಂಬೇಡ್ಕರ್ ಮುಟ್ಟಿ, ಮನುಸ್ಮೃತಿಯನ್ನು ಸುಟ್ಟು, ದಲಿತರ ಸ್ವಾತಂತ್ರ್ಯ ಹೋರಾಟವನ್ನು ಉದ್ಘಾಟಿಸಿದರು. ಆನಂತರ ಗಾಂಧೀಜಿ 'ಹರಿಜನ ಪ್ರವಾಸ'ದ ಮೂಲಕ ಜಾತೀಯ ಮನಸ್ಸನ್ನು ಬದಲಿಸಲೆತ್ನಿಸಿದರು. ಅತ್ತ ನೆಹರೂ ಆಧುನಿಕ- ಜಾತ್ಯತೀತ ಭಾರತವನ್ನು ರೂಪಿಸಲೆತ್ನಿಸುತ್ತಿದ್ದರು; ಸಮಾಜವಾದಿಗಳು ಸರ್ವಸಮಾನತೆಯ ಚಿಂತನೆಗಳನ್ನು, ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಗಳನ್ನು, ರೈತಕೇಂದ್ರಿತ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಮಿಶನರಿಗಳು ಹಾಗೂ ವಸಾಹತು ಸರ್ಕಾರದ ನಿರ್ಧಾರಗಳಿಂದ ಎಲ್ಲ ಜಾತಿಗಳಿಗೂ, ಅದರಲ್ಲೂ ಮುಖ್ಯವಾಗಿ ಸ್ತ್ರೀಯರಿಗೆ ಶಿಕ್ಷಣ ದೊರಕತೊಡಗಿತು. ಜಾತಿ, ಮತಗಳ ಸಂಕುಚಿತತೆಯಿಂದ ಹೊರಬಂದು ಯೋಚಿಸುವ ಸ್ವತಂತ್ರ ಮನಸ್ಸಿನ 'ವ್ಯಕ್ತಿ'ಗಳು ರೂಪುಗೊಳ್ಳತೊಡಗಿದರು. ಇದರ ನಡುವೆಯೂ, ಧರ್ಮದ ಹೆಸರಿನಲ್ಲಿ ದೇಶ ಒಡೆಯುತ್ತಿದ್ದ ಮೂಲಭೂತವಾದಿಗಳು ಇಂಥ ಬೆಳವಣಿಗೆಗಳ ಒಳ್ಳೆಯ ಬೆಳೆಯನ್ನು ನಾಶ ಮಾಡಲೆತ್ನಿಸುತ್ತಾ, ದೇಶವನ್ನು ಹಿಂದುಹಿಂದಕ್ಕೆ ಕೊಂಡೊಯ್ಯಲೆತ್ನಿಸುತ್ತಿದ್ದರು.

ಸ್ವಾತಂತ್ರ್ಯಾನಂತರದ ವಿಚಿತ್ರ ಬೆಳವಣಿಗೆಯೊಂದನ್ನು ಗಮನಿಸಿ: ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ದೇಶ ವಿಭಜನೆಯನ್ನೇ ಗುರಿಯಾಗಿಸಿಕೊಂಡಿದ್ದ ಮನಸ್ಸುಗಳು ವಿಭಜನೆಯನ್ನೇ ಮುಂದುವರಿಸಿದವು. ಆದರೆ ಸ್ವಾತಂತ್ರ್ಯ ಚಳವಳಿಯಲ್ಲಿ ಮುಳುಗೆದ್ದು, ಸ್ವಾತಂತ್ರ್ಯದ ಕಲ್ಪನೆಯನ್ನು ವಿಸ್ತರಿಸುವ ಚಿಂತನೆ-ಚಟುವಟಿಕೆಗಳಲ್ಲಿ ತೊಡಗಿದ್ದ ವೇದಿಕೆಗಳು, ಪಕ್ಷಗಳು ತಾವು ನಡೆದುಬಂದ ಹಾದಿಯ ಸ್ಫೂರ್ತಿಮೂಲವನ್ನೇ ಮರೆತಂತಿವೆ. 136 ವರ್ಷಗಳ ಸುದೀರ್ಘ ಇತಿಹಾಸವುಳ್ಳ ಕಾಂಗ್ರೆಸ್ ಪಕ್ಷದ ಇಂದಿನ ಬಹುತೇಕ ನಾಯಕರಿಗೆ, ಕಾರ್ಯಕರ್ತರಿಗೆ ತಮ್ಮ ಪಕ್ಷ ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿತ್ತೆಂಬ ಹೆಮ್ಮೆಯಾಗಲೀ ಪ್ರಜ್ಞೆಯಾಗಲೀ ಇದ್ದಂತಿಲ್ಲ! ಸ್ವಾತಂತ್ರ್ಯಾನಂತರ ಸತತವಾಗಿ ಅಧಿಕಾರ ಹಿಡಿಯುತ್ತಾ ಬಂದ ಕಾಂಗ್ರೆಸ್ ಪಕ್ಷವು ಗಾಂಧೀಘಟ್ಟದ ಕಾಂಗ್ರೆಸ್ಸಿನಲ್ಲಿ ಸ್ವಾತಂತ್ರ್ಯ ಚಳವಳಿಯೂ, ಸಮಾಜ ಬದಲಾವಣೆಯೂ ಬೆರೆತಿದ್ದನ್ನೇ ಮರೆಯುತ್ತಾ ಜಡವಾಗತೊಡಗಿತು.

ಆದರೂ ಎಪ್ಪತ್ತರ ದಶಕದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯ ಕ್ರಾಂತಿಕಾರಕ ಹಾವನೂರ್ ವರದಿಯನ್ನು ಹಾಗೂ ಭೂಸುಧಾರಣೆಯ ಮಾದರಿಯನ್ನು ಕೊಟ್ಟ ಕರ್ನಾಟಕದ ಕಾಂಗ್ರೆಸ್ ನೇತೃತ್ವದ ಸರ್ಕಾರವು ಸ್ವಾತಂತ್ರ್ಯ ಚಳವಳಿಯ ಅರ್ಥವನ್ನು ವಿಸ್ತರಿಸಿತು. ಅದಕ್ಕೂ ಮೊದಲು ನೆಹರೂ ಯುಗದಲ್ಲೇ ಭೂಮಿಯ ಪ್ರಶ್ನೆಯನ್ನು ಕೈಗೆತ್ತಿಕೊಂಡಿದ್ದ ಗಾಂಧೀ ಶಿಷ್ಯ ವಿನೋಬಾ ಭಾವೆ ಅವರು ಭೂದಾನ ಹಾಗೂ ಸರ್ವೋದಯ ಚಳವಳಿಯನ್ನು ಮುನ್ನಡೆಸಿದ್ದರು. ತಮ್ಮ ತಾರುಣ್ಯದ ಮಾರ್ಕ್ಸಿಸ್ಟ್ ನೋಟ- ಸ್ವಾತಂತ್ರ್ಯ ಚಳವಳಿಯ ಕಾಂಗ್ರೆಸ್ ಸ್ಪಿರಿಟ್- ಸಮಾಜವಾದಿ ಚಿಂತನೆ ಮೂರನ್ನೂ ಬೆರೆಸಿ ನವನಿರ್ಮಾಣ ಕ್ರಾಂತಿಗೆ ಕರೆ ಕೊಟ್ಟ ಜಯಪ್ರಕಾಶ ನಾರಾಯಣ್, ಕಾಂಗ್ರೆಸ್ ನೇತೃತ್ವದ ಸರ್ಕಾರ ಹೇರಿದ್ದ ತುರ್ತುಪರಿಸ್ಥಿತಿಯಲ್ಲಿ ಹರಣಗೊಂಡ ವ್ಯಕ್ತಿಸ್ವಾತಂತ್ರ್ಯವನ್ನು ಮರಳಿ ಗಳಿಸಿಕೊಟ್ಟರು.

ಅಂಬೇಡ್ಕರ್ ಚಿಂತನೆಯ ಬೆಳಕಿನಲ್ಲಿ ದಲಿತ ವಿಮೋಚನೆಗಾಗಿ ಹೋರಾಡುತ್ತಾ ಬಂದಿರುವ ದಲಿತ ಸಂಘಟನೆಗಳು, ಅಸ್ಪೃಶ್ಯತೆ ಹಾಗೂ ಜಾತಿಪದ್ಧತಿಯ ದಮನವನ್ನು ಹಿಮ್ಮೆಟ್ಟಿಸುತ್ತಾ, ಜಾತ್ಯತೀತ ಭಾರತ ನಿರ್ಮಾಣದ ಕನಸನ್ನು ಕಾಯ್ದುಕೊಂಡು ಬಂದಿವೆ. ಇಲ್ಲಿ ಸ್ವಾತಂತ್ರ್ಯ ಚಳವಳಿಯ ಚೈತನ್ಯ ಸುಲಭವಾಗಿ ಅಳಿಯುವುದಿಲ್ಲವೆಂಬುದನ್ನು ಎಲ್ಲ ಕಾಲದ ಜನತಾ ಚಳವಳಿಗಳೂ ತೋರಿಸಿವೆ. ಭಾರತದಲ್ಲಿ ನಾಲ್ಕು ತಿಂಗಳಿಂದ ನಡೆಯುತ್ತಿರುವ ರೈತ ಚಳವಳಿ ಈ ಶತಮಾನದ ಭಾರತೀಯ ಸ್ವಾತಂತ್ರ್ಯ ಚಳವಳಿಯ ಸ್ವರೂಪವನ್ನು ಪಡೆಯುವ ಸಾಧ್ಯತೆಗಳು ನಿಚ್ಚಳವಾಗಿವೆ. ಇದಕ್ಕೆ ಕಾರಣ, ರೈತ ಚಳವಳಿಗೆ ಅಹಿಂಸಾ ಮಾರ್ಗ ಹಾಗೂ ಗುರಿಗಳ ಬಗೆಗೆ ಇರುವ ಸ್ಪಷ್ಟತೆ. ಚಳವಳಿಯೊಳಗೆ ನುಗ್ಗಿ ಗೊಂದಲ ಎಬ್ಬಿಸಿದ ಪ್ರಾಯೋಜಿತ ಶಕ್ತಿಗಳನ್ನು ರೈತರು ಹಿಮ್ಮೆಟ್ಟಿಸಿದ ರೀತಿಯಲ್ಲೂ ಚಳವಳಿಯ ಗಟ್ಟಿತನ ಎದ್ದು ಕಾಣುತ್ತದೆ. ಈ ಹಿಂದೆ ರೈತ ಚಳವಳಿಯನ್ನು ಗಂಭೀರವಾಗಿ ಪರಿಗಣಿಸದಿದ್ದ ಎಡಪಂಥೀಯ ಪಕ್ಷಗಳು ಕೂಡ ದೇಶದ ಜೀವನ್ಮರಣದ ಸಮಸ್ಯೆಗಳನ್ನು ಎತ್ತುತ್ತಿರುವ ರೈತ ಚಳವಳಿಯ ಶಕ್ತಿಯನ್ನು ಅರಿತಂತಿವೆ.

ಸ್ವಾತಂತ್ರ್ಯ ಚಳವಳಿ ಹುಟ್ಟಿಸಿದ್ದ ಸದ್ಭಾವನೆಯ ಸಂದೇಶ, ಸ್ವಾತಂತ್ರ್ಯ ಬಂದ ಮೊದಲ ದಶಕಗಳಲ್ಲಿ ದೇಶ ಭಾಷೆಗಳ ಸಾಹಿತ್ಯ, ರಾಜಕಾರಣ, ರಂಗಭೂಮಿ, ಪತ್ರಿಕೋದ್ಯಮ, ಸಿನಿಮಾಗಳ ಮೂಲಕವೂ ಹಬ್ಬಿ ಸಹನೆ, ಎಲ್ಲ ಧರ್ಮಗಳ ಸಹಬಾಳ್ವೆಗಳ ಅಗತ್ಯ, ಮಹತ್ವ ಜನರಿಗೆ ಅರ್ಥವಾಗತೊಡಗಿತ್ತು. ಕರ್ನಾಟಕದಲ್ಲಿ ಸ್ವಾತಂತ್ರ್ಯದ ಹೊಸ ಅರ್ಥಗಳನ್ನು ಕುವೆಂಪು, ಕಾರಂತ, ಬಸವರಾಜ ಕಟ್ಟೀಮನಿಯವರಂಥವರು ಹಬ್ಬಿಸಿದಂತೆಯೇ ನಂತರದ ಸ್ತ್ರೀವಾದಿ ಲೇಖಕಿಯರೂ ಹಬ್ಬಿಸಿದ್ದಾರೆ; 'ಯಾರಿಗೆ ಬಂತು? ಎಲ್ಲಿಗೆ ಬಂತು? ನಲವತ್ತೇಳರ ಸ್ವಾತಂತ್ರ್ಯ' ಎಂಬ ಪ್ರಶ್ನೆ ಕರ್ನಾಟಕದ ಪ್ರತಿಭಟನಾ ಪ್ರಜ್ಞೆಯ ಭಾಗವಾಗಿಬಿಟ್ಟಿದೆ. ಸ್ವಾತಂತ್ರ್ಯ- ಸಮಾನತೆ- ಸಾಮಾಜಿಕ ನ್ಯಾಯ ಈ ಮೂರನ್ನೂ ಬೆಸೆದ ಚಿಂತನೆ ಈ ಕಾಲದಲ್ಲೂ ಗಟ್ಟಿಯಾಗಿಯೇ ಬೆಳೆಯುತ್ತಿದೆ. ದಲಿತ ಚಿಂತನೆ- ದಲಿತ ಚಳವಳಿ ಹಾಗೂ ಸ್ತ್ರೀವಾದಿ ಚಿಂತನೆಗಳು ಸ್ವಾತಂತ್ರ್ಯಾನಂತರದ ಕೇವಲ ಐವತ್ತು ವರ್ಷಗಳಲ್ಲಿ ಸಾವಿರಾರು ವರ್ಷಗಳ ಸನಾತನ ದಮನವನ್ನು ಹಿಮ್ಮೆಟ್ಟಿಸಲೆತ್ನಿಸಿವೆ.

ಇಷ್ಟೇ ಮುಖ್ಯವಾಗಿ, ಶ್ರಮಜೀವಿ ವರ್ಗಗಳು, ಕಾಳಜಿ, ಬದ್ಧತೆಗಳಿಂದ ಜ್ಞಾನಸೃಷ್ಟಿಯಲ್ಲಿ ತೊಡಗಿರುವ ಕೆಲವಾದರೂ ಅಕಡೆಮಿಕ್ ಹಾಗೂ ವಿಜ್ಞಾನ ವಲಯಗಳು ದೇಶದ ವಿಕಾಸಕ್ಕಾಗಿ ಕೊಡುಗೆ ನೀಡುತ್ತಲೇ ಇವೆ. ಸಿಟ್ಟಿಗೆದ್ದ ಜನ ಕಾಲಕಾಲಕ್ಕೆ ಕೆಟ್ಟ ಸರ್ಕಾರಗಳನ್ನು ಕಿತ್ತೊಗೆದಿದ್ದಾರೆ. ಜೊತೆಗೆ, ಇಂಥ ಆರೋಗ್ಯಕರ ಬೆಳವಣಿಗೆಗಳನ್ನು ಹೊಸಕಿಹಾಕಿ ಜನರ ಸ್ವಾತಂತ್ರ್ಯಹರಣ ಮಾಡುವ ಮಾರ್ಕೆಟ್ ಶಕ್ತಿಗಳು, ಕಂದಾಚಾರಿ ರಾಜಕೀಯ ಪಕ್ಷಗಳು- ಗುಂಪುಗಳ ಸಂಚೂ ಹೆಚ್ಚುತ್ತಿದೆ.

ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಹೊಸಿಲಲ್ಲಿರುವ ದೇಶವೊಂದು ತನ್ನ ಮಾಗುವಿಕೆಯನ್ನು, ಪ್ರಬುದ್ಧತೆಯನ್ನು ಜಗತ್ತಿಗೆ ಬಿಂಬಿಸಲು ಇದು ಸಕಾಲ: ಬುದ್ಧ, ಗಾಂಧೀಜಿಯ ನಾಡು ಹಿಂಸಾಮಯ ಲೋಕಕ್ಕೆ ಅಹಿಂಸೆಯ ಮಹತ್ವವನ್ನು ವಿವರಿಸುತ್ತಾ, ತಾನೂ ಹಾಗೇ ನಡೆದುಕೊಳ್ಳಬೇಕಲ್ಲವೇ? ಸಾವಿರಾರು ವರ್ಷಗಳಿಂದ ಬಗೆಬಗೆಯ ಸಾಮಾಜಿಕ ಭೇದಗಳು ಬೇರೂರಿರುವ ಕಡೆಗಳಲ್ಲೆಲ್ಲ ಅಂಬೇಡ್ಕರ್ ಭಾರತ ಸಾಮಾಜಿಕ ನ್ಯಾಯದ ಹಾದಿ ತೋರಿಸುತ್ತಲೇ ಇರಬೇಕಲ್ಲವೇ? ಬ್ರಿಟಿಷ್ ಸರ್ಕಾರ ಜನತೆಯ ಚಳವಳಿಗಳನ್ನು ಬಗ್ಗುಬಡಿಯಲು ಬಳಸಿದ ಕುತಂತ್ರಗಳನ್ನು ಸ್ವದೇಶಿ ಸರ್ಕಾರಗಳೂ ಬಳಸುತ್ತಿರುವ ಕ್ರೌರ್ಯವನ್ನು ಸ್ವತಂತ್ರ ಭಾರತದ ಪ್ರಜೆಗಳು ನಿತ್ಯ ವಿರೋಧಿಸುತ್ತಲೇ ಇರಬೇಕಲ್ಲವೇ?

ಇವೆಲ್ಲದರ ಹಿನ್ನೆಲೆಯಲ್ಲಿ, 'ಸ್ವಾತಂತ್ರ್ಯ-75'ರ ಆಚರಣೆ ಒಣ ಬಡಿವಾರವಾಗದಿರಲಿ; ಇದು 75 ವರ್ಷಗಳಲ್ಲಿ ಭಾರತ ಸ್ವಾತಂತ್ರ್ಯದ ಅರ್ಥವನ್ನು ವಿಸ್ತರಿಸಿರುವ ರೀತಿಯನ್ನು ಆಳವಾಗಿ ಚರ್ಚಿಸುವ ಸಂದರ್ಭವಾಗಲಿ; ಹಿರಿಯರಿಗೂ, ಕಿರಿಯರಿಗೂ ಸ್ವಾತಂತ್ರ್ಯದ ನಿಜವಾದ ಅರಿವನ್ನು ಹುಟ್ಟಿಸುವ ಅನನ್ಯ ಘಟ್ಟವಾಗಲಿ!

ಚುರುಮುರಿ

ಅಮ್ಮಂದಿರ ಅಡ್ಮಿಷನ್

• ಮಣ್ಣೆರಾಜು

ಕೊರೊನಾ ಕಾಟ ಶುರುವಾದಾಗಿನಿಂದ ಪ್ರೈಮರಿ ಶಾಲೆಯ ಮಕ್ಕಳಿರುವ ಮನೆಗಳಲ್ಲಿ, 'ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು...' ಎನ್ನುವಂತಾಗಿದೆ.

ಕೊರೊನಾ ಕಂಟ್ರೋಲಿಗೆ ಬಂದು ಪ್ರೈಮರಿ ಮಕ್ಕಳನ್ನು ಶಾಲೆಯಲ್ಲಿ ಟೀಚರ್‌ಗಳ ಮಡಿಲಿಗೆ ಹಾಕಿ ಹಾಯಾಗಿರೋಣ ಎಂದುಕೊಂಡ ಅಮ್ಮಂದಿರಿಗೆ ಶಿಕ್ಷಣ ಮಂತ್ರಿಗಳು ಶಾಕ್ ಕೊಟ್ಟಿದ್ದಾರೆ. 1ರಿಂದ 5ನೇ ತರಗತಿವರೆಗೆ ಸ್ಕೂಲ್ ಆರಂಭಿಸಬಾರದು ಎಂದು ಶಾಲೆಗಳಿಗೆ ಕಟ್ಟಪ್ಪಣೆ ಮಾಡಿದ್ದಾರೆ.

'ಹೀಗಾದ್ರೆ ಮಕ್ಕಳ ಶೈಕ್ಷಣಿಕ ಭವಿಷ್ಯ ಬೆಳಗುವುದು ಯಾವಾಗ ಅಂತ ಅಮ್ಮಂದಿರ ದಂಡು ಸ್ಕೂಲಿಗೆ ಹೋಗಿ ಹೆಡ್‌ಮಿಸ್ ಬಳಿ ಸಂಕಟ ತೋಡಿಕೊಂಡಿತು.

'ಸಾರಿ, ಸರ್ಕಾರದ ರೂಲ್ಸ್ ಫಾಲೋ ಮಾಡಲೇಬೇಕು' ಅಂದ್ರು ಹೆಚ್ಚೆಂ.

'ಮಕ್ಕಳ ಭವಿಷ್ಯ ಕತ್ತಲಾಗುತ್ತದೆ ಮೇಡಂ' ಅಮ್ಮಂದಿರು ಆತಂಕಪಟ್ಟರು.

'ನಮ್ಮ ಬದುಕು, ಭವಿಷ್ಯವೂ ಕತ್ತಲಲ್ಲಿದೆ. ನೀವು ಫೀಸ್ ಕಟ್ಟಲ್ಲ, ನಮಗೆ ಸಂಬಳ ಕೊಟ್ಟಿಲ್ಲ...' ಹೆಚ್ಚೆಂ ಕನ್ನಡಕ ತೆಗೆದು ಕಣ್ಣು ಒರೆಸಿಕೊಂಡರು.

'ನಾವು ಸ್ಕೂಲಿಗೆ ಬರ್ತೀವಿ, ಮಕ್ಕಳಿಗೆ ಕಲಿಸುವುದನ್ನು ನಮಗೆ ಕಲಿಸಿ, ನಾವು ಮನೆಯಲ್ಲಿ ಮಕ್ಕಳಿಗೆ ಕಲಿಸ್ತೀವಿ' ಒಬ್ಬರು ಅಮ್ಮ ಐಡಿಯಾ ಹೇಳಿದರು.

'ಇದಕ್ಕೂ ಸರ್ಕಾರ ಅಬ್ಜೆಕ್ಷನ್ ಮಾಡುತ್ತದೇನೋ...' ಹೆಚ್ಚೆಂಗೆ ದಿಗಿಲು.

'ಮಕ್ಕಳನ್ನು ಶಾಲೆಗೆ ಸೇರಿಸಬೇಡಿ ಅಂತ ಸರ್ಕಾರ ಹೇಳಿದೆ ಹೊರತು, ಪೇರೆಂಟ್ಸ್‌ನ ಅಡ್ಮಿಟ್ ಮಾಡಿಕೊಳ್ಳಬಾರದು ಅಂತ ಹೇಳಿಲ್ವಲ್ಲಾ. ನಮ್ಮನ್ನು ಸ್ಕೂಲಿಗೆ ಅಡ್ಮಿಟ್ ಮಾಡಿಕೊಳ್ಳಿ' ಇನ್ನೊಬ್ಬರು ಅಮ್ಮ ಹೇಳಿದರು.

ಹೆಚ್ಚೆಂಗೆ ಖುಷಿಯಾಯಿತು. 'ಓಕೆ, ನೀವು ಫೀಸ್ ಕಟ್ಟಿ ಅಡ್ಮಿಷನ್ ಆಗಬಹುದು. ಆದರೆ, ಹೀಗೆಲ್ಲಾ ನೈಟಿ ಮೇಲೆ ಟವೆಲ್ ಹಾಕಿಕೊಂಡು ಸ್ಕೂಲಿಗೆ ಬರುವಂತಿಲ್ಲ' ಎಂದರು.

'ನಮಗೂ ಯೂನಿಫಾರಂ ಮಾಡ್ತೀರಾ ಮೇಡಂ?'

'ಸ್ಕೂಲ್ ಕಮಿಟಿ ಜೊತೆ ಚರ್ಚೆ ಮಾಡಿ ತೀರ್ಮಾನ ಮಾಡ್ತೀವಿ' ಎಂದರು ಹೆಚ್ಚೆಂ. ಅಮ್ಮಂದಿರಿಗೆ ಆನಂದವಾಯಿತು.

ಸಂಗತ

ಮೀಸಲಾತಿ ಮತ್ತು ಬಡತನ

ಪ್ರಬಲ ಜಾತಿಗಳ ಮುಖಂಡರು ನಿಜವಾಗಿ ಆಗ್ರಹಿಸಬೇಕಿರುವುದು ಮೀಸಲಾತಿಗಾಗಿ ಅಲ್ಲ, ಉದ್ಯೋಗಾವಕಾಶಗಳ ಸೃಷ್ಟಿಗಾಗಿ

• ಎಚ್.ಕೆ.ಶರತ್

ಮೀಸಲಾತಿಗಾಗಿ ಆಗ್ರಹಿಸುವ ಓಟದಲ್ಲಿ ಹಿಂದೆ ಬೀಳಬಾರದೆಂಬ ನಿಲುವಿಗೆ, ಸಾಮಾಜಿಕವಾಗಿ ಮುಂದುವರಿದಿರುವ ಕೆಲವು ಸಮುದಾಯಗಳ ಮುಖಂಡರು ಜೋತುಬಿದ್ದಿದ್ದಾರೆ. ಈ ಮುಖಂಡರು, ಅವರ ಹಿಂಬಾಲಕರು ಹಾಗೂ ಸ್ವಾಮೀಜಿಗಳು, 'ನಮ್ಮ ಜಾತಿಯಲ್ಲೂ ಬಡವರಿದ್ದಾರೆ, ಮೀಸಲಾತಿಯಿಂದ ಅವರಿಗೆ ಅನುಕೂಲವಾಗಲಿದೆ' ಎಂಬ ವಾದವನ್ನು ತೇಲಿ ಬಿಡುತ್ತಿದ್ದಾರೆ.

ಮೀಸಲಾತಿಯ ಅಗತ್ಯವನ್ನು ಪ್ರಾತಿನಿಧ್ಯದ ತಕ್ಕಡಿಯಲ್ಲಿಟ್ಟು ತೂಗಬೇಕೆನ್ನುವ ಸಾಮಾನ್ಯ ಜ್ಞಾನವನ್ನು ಹಿನ್ನೆಲೆಗೆ ಸರಿಸಿ, 'ನಮ್ಮಲ್ಲಿ ಬಡವರಿಲ್ಲವೇ' ಎನ್ನುವ ಪ್ರಶ್ನೆ ಮುಂದಿಟ್ಟು, ಮೀಸಲಾತಿ ಪಡೆಯುವ ಓಟದ ಅಂಗಳಕ್ಕೆ ಇಳಿದಿರುವವರು ಅಸಲಿಗೆ ಆಗ್ರಹಿಸಬೇಕಿರುವುದು ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಜಾರಿಗಲ್ಲವೇ? 'ಮೀಸಲಾತಿಯು ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ. ಅದು ಪ್ರಾತಿನಿಧ್ಯ ವಂಚಿತ ಸಮುದಾಯಗಳಿಗೆ ಸಹಜವಾಗಿ ದಕ್ಕಬೇಕಿರುವ ಪ್ರಾತಿನಿಧ್ಯ ಲಭ್ಯವಾಗುವಂತೆ ನೋಡಿಕೊಳ್ಳುವ ವ್ಯವಸ್ಥೆ' ಎಂಬ ವಾಸ್ತವದತ್ತ ದೃಷ್ಟಿ ಹಾಯಿಸಲು ಇವರೇಕೆ ಹಿಂಜರಿಯುತ್ತಿದ್ದಾರೆ?

ತಾವು ಪ್ರತಿನಿಧಿಸುವ ಜಾತಿಯ ಬಡವರ ಹಿತ ಕಾಯುವ ನಿಜವಾದ ಕಾಳಜಿಯು ಮೀಸಲಾತಿಗಾಗಿ ಆಗ್ರಹಿಸುತ್ತಿರುವ ಪ್ರಬಲ ಜಾತಿಗಳ ಮುಖಂಡರಿಗೆ ಇರುವುದೇ ಆದಲ್ಲಿ, ಅವರು ಆಗ್ರಹಿಸಬೇಕಿರುವುದು ಮೀಸಲಾತಿಗಾಗಿ ಅಲ್ಲ, ಬದಲಿಗೆ ಸಂಪತ್ತಿನ ಹಂಚಿಕೆಗಾಗಿ.

ಸರ್ಕಾರದ ನೀತಿಗಳಲ್ಲಿ ಬಡತನ ನಿರ್ಮೂಲನೆ ಮಾಡುವ ಬದಲಿಗೆ ಬಡವರನ್ನೇ ನಿರ್ಮೂಲನೆ ಮಾಡುವ ಧೋರಣೆ ಕಾಣುತ್ತಿರುವ ಹೊತ್ತಿನಲ್ಲಿ, ಈಗಾಗಲೇ ಚಾಲ್ತಿಯಲ್ಲಿರುವ ಬಡತನ ನಿರ್ಮೂಲನಾ ಕಾರ್ಯಕ್ರಮಗಳಿಗೆ ಸರ್ಕಾರ ಒದಗಿಸುತ್ತಿರುವ ಅನುದಾನದಲ್ಲಿ ಪ್ರತಿವರ್ಷ ಹೆಚ್ಚಳವಾಗುತ್ತಿದೆಯೇ ಅಥವಾ ಕಡಿತವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವ ಕೆಲಸವನ್ನು ಇವರು ಮಾಡಬೇಕಲ್ಲವೇ? ಕಡಿತ ಮಾಡಿದ್ದರೆ ಅದರ ವಿರುದ್ಧ ಧ್ವನಿ ಎತ್ತಬೇಕಲ್ಲವೇ? ಅದರ ಸಾಧಕ-ಬಾಧಕಗಳನ್ನು ಜನರ ಮುಂದಿರಿಸುವ ಕೆಲಸ ಮಾಡಬೇಕಲ್ಲವೇ?

ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸುವ ಪಡಿತರದ ಪ್ರಮಾಣ ಹೆಚ್ಚಳಕ್ಕೆ ಮತ್ತು ಬೆಲೆ ಇಳಿಕೆಗೆ ಆಗ್ರಹಿಸುವುದು, ಉದ್ಯೋಗ ಖಾತರಿಗೆ ಹೆಚ್ಚು ಅನುದಾನ ಮೀಸಲಿರಿಸುವಂತೆ ಕೋರುವುದು, ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ನೀಡುವ ಯೋಜನೆಯು ರಜಾ ದಿನಗಳಲ್ಲೂ ನಿಲ್ಲದಿರುವಂತೆ ನಿಗಾ ವಹಿಸುವುದು ಬಡವರ ಕುರಿತು ಕಾಳಜಿ ಹೊಂದಿರುವವರು ಮಾಡಬೇಕಿದ್ದ ಕೆಲಸಗಳಲ್ಲವೇ?

ಎಲ್ಲವೂ ಖಾಸಗಿ ವಲಯದ ತೆಕ್ಕೆಗೆ ಸರಿಯುತ್ತಿರುವ ಈ ಹೊತ್ತಿನಲ್ಲಿ, ಅಪ್ರಸ್ತುತವೇ ಆಗುತ್ತಿರುವ ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಮುಗಿಬೀಳುವ ಬದಲಿಗೆ, ಖಾಸಗಿ ವಲಯಕ್ಕೂ ಮೀಸಲಾತಿ ವಿಸ್ತರಿಸುವ ಅಗತ್ಯವನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಬಹುದಿತ್ತಲ್ಲವೇ? ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲೂ ಸರ್ಕಾರದ ಹೂಡಿಕೆ ಇಳಿಮುಖವಾಗುತ್ತಿದೆ. ಈ ಕುರಿತು ಅಧಿಕಾರಸ್ಥರ ಗಮನ ಸೆಳೆಯುವುದು ಅವರ ಆದ್ಯತೆ ಆಗಬೇಕಿತ್ತಲ್ಲವೇ?

ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾದರೆ, ಅದರ ನೇರ ಪರಿಣಾಮ ಬೀರುವುದೂ ಬಡವರ ಮೇಲಲ್ಲವೇ? ಬೆಲೆ ಏರಿಕೆ ವಿರುದ್ಧ ಇದೇ ಮುಖಂಡರು, ಸ್ವಾಮೀಜಿಗಳು ಬೀದಿಗಿಳಿದರೆ, ಅದು ಬಡವರ ಪರವಾಗಿ ಅವರಿಗಿರುವ ಕಾಳಜಿಯನ್ನು ಬಿಂಬಿಸುವುದಲ್ಲವೇ? ಮೂರು ದಶಕಗಳಿಂದ ನಾವು ಅಪ್ಪಿಕೊಂಡಿರುವ ಮುಕ್ತ ಮಾರುಕಟ್ಟೆ ನೀತಿಯು ಸೃಷ್ಟಿಸಿರುವ ಉಳ್ಳವರು ಮತ್ತು ಇಲ್ಲದವರ ನಡುವಿನ ಕಂದಕ ಮತ್ತಷ್ಟು ಆಳಕ್ಕೆ ಚಾಚಿಕೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಜಾರಿಯಾಗಬೇಕಿರುವುದು ಬಡವರಿಗೆ ಅಗತ್ಯವಿರುವ ಸರಕು ಮತ್ತು ಸೇವೆಗಳು ಕೈಗೆಟಕುವ ದರದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವ ಯೋಜನೆಗಳು.

ಇದರ ಬದಲಿಗೆ, ಮೀಸಲಾತಿಯಂತಹ ಸಾಮಾಜಿಕ ಹಿಂದುಳಿಯುವಿಕೆಯನ್ನು ಹೋಗಲಾಡಿಸಲು ರೂಪಿಸಿರುವ ಕಾರ್ಯಕ್ರಮದ ದಿಕ್ಕು ತಪ್ಪಿಸಿದರೆ, ಮೊದಲೇ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳನ್ನು ಪಾತಾಳಕ್ಕೆ ದೂಡಿದ ಕುಖ್ಯಾತಿಯನ್ನು ಇದೀಗ ಮೀಸಲಾತಿಗಾಗಿ ಆಗ್ರಹಿಸುತ್ತಿರುವ ಬಲಾಢ್ಯರೇ ಹೊತ್ತುಕೊಳ್ಳಬೇಕಾಗುತ್ತದೆ.

ಅಗತ್ಯಕ್ಕೆ ತಕ್ಕಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ವ್ಯವಸ್ಥೆ ರೂಪಿಸಲು ಸೋಲುತ್ತಿರುವ, ಇರುವ ಉದ್ಯೋಗಗಳೂ ಸರ್ಕಾರದ ತಪ್ಪು ನೀತಿಗಳಿಂದಾಗಿ ಇಲ್ಲವಾಗುತ್ತಿರುವ ಸಂದರ್ಭದಲ್ಲಿ, ಇವರು ಆಗ್ರಹಿಸಬೇಕಿರುವುದು ಉದ್ಯೋಗಾವಕಾಶಗಳ ಸೃಷ್ಟಿಗೆ ಹೊರತು ಮೀಸಲಾತಿಗಾಗಿ ಅಲ್ಲ. ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಸಹ ಆಳುವವರು ಹಿಂದೆ ಮುಂದೆ ನೋಡುತ್ತಿರುವ ಹೊತ್ತಿನಲ್ಲಿ ಜಾತಿ ಆಧಾರಿತ ಮೀಸಲಾತಿಯಿಂದ ಬಡತನ ನಿರ್ಮೂಲನೆ ಅಥವಾ ಬಡವರ ಏಳಿಗೆಯಾಗಲು ಹೇಗೆ ಸಾಧ್ಯ?

ಅನೇಕ ಕ್ಷೇತ್ರಗಳಲ್ಲಿ ತಮ್ಮ ಜನಸಂಖ್ಯೆಯ ಪ್ರಮಾಣಕ್ಕಿಂತಲೂ ಹೆಚ್ಚೇ ಪ್ರಾತಿನಿಧ್ಯ ಹೊಂದಿರುವ ಕೆಲವು ಸಮುದಾಯಗಳೇ ಮೀಸಲಾತಿಗಾಗಿ ಆಗ್ರಹಿಸುತ್ತಿರುವುದು, ಬಡವರ ಸದ್ಯದ ನಿಕೃಷ್ಟ ಪರಿಸ್ಥಿತಿಗೂ ಮೀಸಲಾತಿಗೂ ತಳಕು ಹಾಕಿ ಮೀಸಲಾತಿ ಕುರಿತು ಅಸಮಾಧಾನ ರೂಪುಗೊಳ್ಳುವಂತೆ ನೋಡಿಕೊಳ್ಳುವ ಕಾರ್ಯಸೂಚಿಯ ಮುಂದುವರಿದ ಭಾಗವಲ್ಲವೇ? ಸಂಪತ್ತಿನ ಹಂಚಿಕೆ, ಉದ್ಯೋಗಾವಕಾಶ ಸೃಷ್ಟಿ, ಶಿಕ್ಷಣ-ಆರೋಗ್ಯದಂತಹ ಮೂಲಭೂತ ಅಗತ್ಯಗಳನ್ನು ಜನರಿಗೆ ಒದಗಿಸುವ ಬದ್ಧತೆಯನ್ನು ಸರ್ಕಾರ ತೋರಲು ಆಗ್ರಹಿಸಬೇಕಿರುವುದು ವರ್ತಮಾನದ ಅಗತ್ಯವೇ ಹೊರತು, ಮೀಸಲಾತಿಯ ದಿಕ್ಕು ತಪ್ಪಿಸುವುದಲ್ಲ.

ವಾಚಕರ ವಾಣಿ

ಮಂಡ್ಯ ಬೆಲ್ಲದ ಮಹತ್ವ ಉಳಿಸಿ

ಮಂಡ್ಯ ಜಿಲ್ಲೆಯ ಬೆಲ್ಲಕ್ಕೆ ಅದರದೇ ಆದ ಮಹತ್ವವಿದೆ. ಜಿಲ್ಲೆಯಲ್ಲಿ ಅತಿ ಹೆಚ್ಚು ಕಬ್ಬು ಬೆಳೆಯುವ ರೈತರು ಇರುವುದರಿಂದ ಸುಮಾರು ಹತ್ತು ವರ್ಷಗಳ ಹಿಂದೆ ಪ್ರತೀ ಹಳ್ಳಿಯಲ್ಲೂ ಆಲೆಮನೆ ಅಥವಾ ಗಾಣಗಳಲ್ಲಿ ರೈತರು ಉತ್ತಮ ಗುಣಮಟ್ಟದ ಬೆಲ್ಲವನ್ನು ಉತ್ಪಾದಿಸುತ್ತಿದ್ದರು. ಒಂದು ಕಾಲದಲ್ಲಿ ಮಂಡ್ಯ ಜಿಲ್ಲೆಯ ಬೆಲ್ಲಕ್ಕೆ ತುಂಬಾ ಬೇಡಿಕೆಯಿತ್ತು. ಗುಜರಾತ್, ಮಹಾರಾಷ್ಟ್ರ, ಕೇರಳ ಮುಂತಾದ ರಾಜ್ಯಗಳಿಗೆ ಜಿಲ್ಲೆಯಿಂದ ಬೆಲ್ಲ ಹೋಗುತ್ತಿತ್ತು.

ಕಬ್ಬಿನ ಗಾಣಗಳ ನಿರ್ವಹಣೆಯ ಕಷ್ಟ ಹಾಗೂ ಕೆಲಸಗಾರರ ಕೊರತೆಯ ನೆಲೆಯಲ್ಲಿ ಅವುಗಳ ಮಾಲೀಕರು ದಿನೇದಿನೇ ಅವನ್ನು ಹೊರರಾಜ್ಯದ ಉದ್ಯಮಿಗಳಿಗೆ ಅಥವಾ ಕೆಲಸ ಮಾಡುವ ಕಾರ್ಮಿಕರಿಗೆ ಬಾಡಿಗೆಗೆ ಕೊಡುತ್ತಾ ಬಂದಿದ್ದಾರೆ. ಹೀಗೆ ಗಾಣಗಳನ್ನು ಬಾಡಿಗೆಗೆ ಪಡೆದವರಲ್ಲಿ ಕೆಲವರು ಹಣದ ಆಸೆಯಿಂದ ರಾಸಾಯನಿಕ ಮಿಶ್ರಿತ ಬೆಲ್ಲವನ್ನು ತಯಾರಿಸಿ ಮಾರುಕಟ್ಟೆಗೆ ಕಳಿಸುವ ಕೆಲಸ ಮಾಡುತ್ತಾರೆ. ಇದು ಮಂಡ್ಯ ಬೆಲ್ಲದ ಹೆಸರು ಹಾಳಾಗಲು ಪ್ರಮುಖ ಕಾರಣವಾಗಿದ್ದು, ಮಂಡ್ಯ ಬೆಲ್ಲಕ್ಕೆ ಅಂತರರಾಜ್ಯ ಮಾರುಕಟ್ಟೆಯಲ್ಲಿ ಬೇಡಿಕೆ ಕುಗ್ಗಲು ಕಾರಣವಾಗಿದೆ. ಜಿಲ್ಲಾಡಳಿತ ಹಾಗೂ ಸರ್ಕಾರ ಈ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕು. ಮಂಡ್ಯ ಜಿಲ್ಲೆಯ ಬೆಲ್ಲಕ್ಕೆ ಇರುವ ಅದರದೇ ಆದ ಬೆಲೆ ಮತ್ತು ಗೌರವವನ್ನು ಉಳಿಸಬೇಕು. ಕಳಪೆ ಬೆಲ್ಲ ತಯಾರಕರ ವಿರುದ್ಧ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಶ್ರೀನಿವಾಸ್ ಚಕ್ರವರ್ತಿ, ಹೊಳಲು

ಬೆವರುರಹಿತ ಕಾಯಕಕ್ಕೂ ಬೆಲೆ ಇದೆ

'ದೇವರ ದೇವರು ಜನರ ಬೆವರು' ಎಂಬ ಬರಗೂರು ರಾಮಚಂದ್ರಪ್ಪ ಅವರ ಲೇಖನಕ್ಕೆ ಪ್ರತಿಯಾಗಿ ವೆಂಕಟೇಶ ಮಾಚಕನೂರ ಅವರ ಪತ್ರವನ್ನು (ವಾ.ವಾ., ಮಾರ್ಚ್ 15) ಓದಿದಾಗ, ಬೆವರು ಮತ್ತು ಕಾಯಕದ ಬಗ್ಗೆ ಒಂದೆರಡು ಅನಿಸಿಕೆಗಳನ್ನು ಹೇಳಬೇಕೆನಿಸಿತು. ಒಬ್ಬ ವ್ಯಕ್ತಿ ಪಿಂಚಣಿಗೆ ಅರ್ಹನಾಗಬೇಕಾದರೆ ಹಗಲು ರಾತ್ರಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಓದಿ, ಪದವಿ ಪಡೆದು, ಸ್ಪರ್ಧಾತ್ಮಕವಾಗಿ ಪೈಪೋಟಿಯಲ್ಲಿ ಉದ್ಯೋಗ ಪಡೆದು, ಹಲವು ಸಂದರ್ಭಗಳಲ್ಲಿ ಕುಟುಂಬದಿಂದ ದೂರ ಉಳಿಯಬೇಕಾಗಿ ಬಂದು, ಕೆಲವನ್ನೆಲ್ಲ ತ್ಯಾಗ ಮಾಡಿ, ಹಲವಾರು ಒತ್ತಡಗಳ ನಡುವೆಯೂ ಸಮತೋಲಿತವಾಗಿ ನೌಕರಿ ಮಾಡಬೇಕಾಗುತ್ತದೆ. ಕೆಲಸದ ಒತ್ತಡ, ನಿರೀಕ್ಷೆ, ವೈಫಲ್ಯ ಇವೆಲ್ಲ ಉದ್ಯೋಗಿಗಳ ಆರೋಗ್ಯವನ್ನೂ ಹಾಳು ಮಾಡುವುದಿದೆ.

ಬೆವರಿನ ದುಡಿಮೆ ಎಂಬ ಸೆಂಟಿಮೆಂಟಲ್ ಶಬ್ದಗಳನ್ನು ತಿಂಗಳ ಸಂಬಳಕ್ಕೆ ಅಥವಾ ಪಿಂಚಣಿಗೆ ತಳಕು ಹಾಕುವುದು ನಿಜಕ್ಕೂ ಅಪಾಯಕಾರಿ ಪ್ರವೃತ್ತಿ. ಒಬ್ಬೊಬ್ಬರ ಕೆಲಸವನ್ನು, ವರಮಾನವನ್ನು, ದುಡಿತದ ರೀತಿಯನ್ನು ಹೋಲಿಸುವುದು ವಿದ್ಯೆಗೆ ಮಾಡುವ ಅಪಚಾರ. ಬೆವರಿನ ದುಡಿಮೆಗೆ ಸೂಕ್ತ ಪ್ರತಿಫಲ ಸಿಗಲೇಬೇಕು. ಹಾಗೆಯೇ ಬೆವರುರಹಿತ ಬೌದ್ಧಿಕ ಕಾಯಕದ ಬಗ್ಗೆಯೂ ಹಗುರವಾಗಿ ಮಾತನಾಡಬಾರದಲ್ಲವೇ?

ಭರತ್ ಬಿ.ಎನ್., ಮೈಸೂರು

ಮರೆಯದಿರಿ ನಿಯಮ ಪಾಲನೆ

ಜನ ನಿಯಮ ಪಾಲಿಸದಿದ್ದರೆ ಮತ್ತೆ ಲಾಕ್‌ಡೌನ್ ಮಾಡುವುದಾಗಿ ರಾಜ್ಯ ಸರ್ಕಾರ ಎಚ್ಚರಿಸಿದೆ. ಹೌದು, ಚಿತ್ರಮಂದಿರಕ್ಕೆ ಹೌಸ್‌ಫುಲ್ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಆದರೆ ನಿಯಮ ಪಾಲಿಸುವ ಜವಾಬ್ದಾರಿ ಪ್ರೇಕ್ಷಕರದು. ಬಸ್ಸುಗಳಿಗೆ ಯಾವುದೇ ನಿರ್ಬಂಧವಿಲ್ಲ, ಎಚ್ಚರಿಕೆ ತೆಗೆದುಕೊಳ್ಳಬೇಕಾದವರು ಪ್ರಯಾಣಿಕರು. ಇದೊಂಥರಾ ಸಿಗರೇಟು ಪ್ಯಾಕ್ ಹಾಗೂ ಮದ್ಯದ ಬಾಟಲಿ ಮೇಲೆ 'ಎಚ್ಚರಿಕೆ' ಎಂದು ಬರೆದು ಮಾರಾಟಕ್ಕಿಟ್ಟಂತೆ! ಹೀಗಾಗಿ, ಜನ ಎಲ್ಲಿಗಾದರೂ ಹೋಗಲಿ, ನಿಯಮ ಪಾಲಿಸುವುದನ್ನು ಮಾತ್ರ ಮರೆಯಬಾರದು.

ಜೆ.ಬಿ.ಮಂಜುನಾಥ, ಪಾಂಡವಪುರ

ಶರಣ ಸೇನೆ: ಆರೋಗ್ಯಪೂರ್ಣ ಚರ್ಚೆ ಇರಲಿ

ಸಮಾಜಮುಖಿ ಕಾರ್ಯಗಳನ್ನು ಮತ್ತಷ್ಟು ತೀವ್ರಗೊಳಿಸುವ ದಿಸೆಯಲ್ಲಿ ಯುವಜನಾಂಗಕ್ಕೊಂದು ಸಂಘಟನೆ ಅಗತ್ಯವಿದೆಯೆಂದು ಚಿತ್ರದುರ್ಗದ ಮುರುಘಾ ಮಠದ ಭಕ್ತರು ಮತ್ತು ಆಪ್ತರು ವರ್ಷದಿಂದ ಚರ್ಚಿಸುತ್ತಿದ್ದರು. ನಾಡಿನಾದ್ಯಂತ ಬಸವಕೇಂದ್ರಗಳು, ಬಸವಸೇನೆ, ಬಸವದಳ ಮೊದಲಾದ ಸಂಘಟನೆಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿದ್ದು, ಇನ್ನೊಂದು ಸಂಘಟನೆಯ ಅಗತ್ಯವೇನಿದೆ ಎಂದು ಮಠದ ಡಾ. ಶಿವಮೂರ್ತಿ ಮುರುಘಾ ಶರಣರು ಪ್ರಶ್ನಿಸಿದ್ದರು. ಪಟ್ಟುಬಿಡದ ಭಕ್ತರು ಜಾತ್ಯತೀತ, ಪಕ್ಷಾತೀತ ಮತ್ತು ಧರ್ಮಾತೀತವಾಗಿ ಕಾರ್ಯನಿರ್ವಹಿಸಲು ಹಾಗೂ ಬಸವಾದಿ ಶರಣರ ತತ್ವ, ವಿಚಾರಗಳನ್ನು ಪ್ರಚಾರ, ಪ್ರಸಾರ ಮಾಡುವುದರೊಂದಿಗೆ ಅತಿವೃಷ್ಟಿ, ಅನಾವೃಷ್ಟಿಯಂತಹ ಪ್ರಾಕೃತಿಕ ವೈಪರೀತ್ಯಗಳು ಸಂಭವಿಸಿದಾಗ ಸಂತ್ರಸ್ತರಿಗೆ ಸಹಾಯ ಮಾಡುವಂತಹ ವಿಧಾಯಕ ಕಾರ್ಯಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅರಿಕೆ ಮಾಡಿಕೊಂಡಿದ್ದರು.

ಶ್ರೀಮಠದ ಪ್ರಯೋಗಶೀಲತೆ, ಅಭಿವೃದ್ಧಿ ಹಾಗೂ ಸಮಾಜ ಸುಧಾರಣಾ ಕೆಲಸಗಳನ್ನು ಸಹಿಸಲಾರದ ಕೆಲ ದುಷ್ಟಶಕ್ತಿಗಳು ಒಂದಿಲ್ಲೊಂದು ಚಿತಾವಣೆ ಮಾಡುತ್ತ ವ್ಯವಸ್ಥೆಯನ್ನು ಅಭದ್ರಗೊಳಿಸುವ ಹುನ್ನಾರ ನಡೆಸುತ್ತಾ ಬಂದಿವೆ. ಕಾನೂನಾತ್ಮಕ ಕ್ರಮಗಳ ಮೂಲಕ ದಿಟ್ಟತನದಿಂದ ಅಂಥ ಶಕ್ತಿಗಳನ್ನು ಹಿಮ್ಮೆಟ್ಟಿಸುತ್ತ ಬರಲಾಗಿದೆ. ಪಟ್ಟಭದ್ರ ಹಿತಾಸಕ್ತರ ವಿರುದ್ಧ ಒಂದು ಸಂಘಟನೆ ಮುಖಾಂತರ ಹೋರಾಡುವುದು ಅನಿವಾರ್ಯ ಎಂದು ಅಭಿಮಾನಿಗಳು ಒತ್ತಾಯಿಸಿದರು. ಶ್ರೀಗಳು ಶರಣ ಸೇನೆ ಸಂಘಟನೆಗೆ ಚಾಲನೆ ನೀಡಿದರು. ಉತ್ತಮ ಕಾರ್ಯಗಳಿಗೆ ಹತ್ತಿರಿರು; ದುಷ್ಟ ಕೆಲಸಗಳಿಂದ ದೂರವಿರು ಎಂಬುದು ಮುರುಘಾ ಶರಣರ ಆಶಯವಾಗಿದೆ. ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಅವರು ಬಹುಮುಂದೆ ಸಾಗಿದ್ದಾರೆ. ಅಂಥವರನ್ನು ದೂರವಿಟ್ಟು ಸಂಘಟನೆ ಮಾಡಿದ ಉದಾಹರಣೆ ಕಣ್ಮುಂದೆ ಇದೆ. ಶರಣ ಸೇನೆಯು ಜಾತ್ಯತೀತ ಮತ್ತು ಪಕ್ಷಾತೀತ ಸಂಘಟನೆ ಆಗಿದ್ದು, ಸೈದ್ಧಾಂತಿಕ ನಿಲುವನ್ನು ಹೊಂದಿದೆ.

ಆಯಾ ದಾರ್ಶನಿಕರನ್ನು ಸತಾಯಿಸಿದವರು ಆಯಾ ಜನಾಂಗದವರೇ ಆಗಿದ್ದಾರೆ. ಸ್ವಜಾತಿ ಮಾತ್ರವಲ್ಲ ಯಾವುದೇ ಹಂತದಲ್ಲೂ ಅವಹೇಳನಕಾರಿ ವಿದ್ಯಮಾನಗಳು ನಡೆದಲ್ಲಿ ಅಂಥವುಗಳ ವಿರುದ್ಧ ಹೋರಾಡುತ್ತ ಶರಣ ಸೇನೆಯು ಹಿರಿಯರ ಮಾರ್ಗದರ್ಶನದಲ್ಲಿ ಮುಂದುವರಿಯಲಿದೆ. ಯುವಶಕ್ತಿಗೆ ಸೂಕ್ತ ಮಾರ್ಗದರ್ಶನ ನೀಡುತ್ತ, ದಾರ್ಶನಿಕರ ಹಾಗೂ ಬಸವಾದಿ ಶರಣರು ಸಾರಿದ ಮೌಲ್ಯಗಳನ್ನು ಪುನಃ ಸ್ಥಾಪಿಸಲು ಮತ್ತು ಅವನ್ನು ಮುಂದುವರಿಸುವ ದಿಸೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಪರಂಪರೆಯೊಳಗೆ ಶರಣ ಸೇನೆ ಕಾರ್ಯನಿರ್ವಹಿಸುತ್ತದೆ. ಶರಣ ಸೇನೆಯ ಬಗ್ಗೆ ಆರೋಗ್ಯಪೂರ್ಣ ಚರ್ಚೆ ಮಾತ್ರ ಇರಲಿ.

ನಾನಾಗೌಡ ಪಾಟೀಲ, ಸಿಂದಗಿ, **ಸುರೇಶ ಚನ್ನಶೆಟ್ಟಿ,** ಬೀದರ್, **ಈಶ್ವರ ಸಾಣಿಕೊಪ್ಪ,** ಧಾರವಾಡ, **ಅರುಣ ಕುಮಾರ,** ಬೆಂಗಳೂರು, ಶರಣ ಸೇನಾಭಿಮಾನಿಗಳು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೊರೊನಾ ಪ್ರತಾಪವು ಹಂತಹಂತವಾಗಿ ನಿಯಂತ್ರಣಕ್ಕೆ ಬಂದ ಬಳಿಕ ಜನವರಿ ತಿಂಗಳಲ್ಲಿ ಭಾರತವು ನಿಧಾನಕ್ಕೆ ಸಹಜ ಸ್ಥಿತಿಗೆ ಮರಳಲು ಆರಂಭಿಸಿತ್ತು. ಆದರೆ ಈಗ ಪುನಃ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ದೇಶದಲ್ಲಿ ಎರಡನೇ ಅಲೆ ಆರಂಭವಾಗಿದೆಯೇ ಎಂಬ ಪ್ರಶ್ನೆ ಮೂಡಿಸಿದೆ

ಎರಡನೇ ಅಲೆಯೇ ನಿರ್ಲಕ್ಷ್ಯದ ಫಲವೇ?



ಹಲವು ತಿಂಗಳ ಕಾಲ ಲಾಕ್‌ಡೌನ್ ವಿಧಿಸಿ, ಕೋವಿಡ್ ಮೇಲೆ ನಿಯಂತ್ರಣ ಸಾಧಿಸಿದ್ದ ಅನೇಕ ದೇಶಗಳಲ್ಲಿ ಜನಜೀವನ ಸಹಜಸ್ಥಿತಿಗೆ ಬರುತ್ತಿದ್ದಂತೆ ಸೋಂಕು ಮತ್ತೆ ಪ್ರತಾಪ ತೋರಿಸಿದೆ. ಅನೇಕ ರಾಷ್ಟ್ರಗಳಲ್ಲಿ ಎರಡನೇ ಅಲೆ ಕಾಣಿಸಿ, ಪುನಃ ಲಾಕ್‌ಡೌನ್ ಘೋಷಿಸುವ ಸಂದರ್ಭ ಬಂದಿದೆ. ಕೆಲವು ರಾಷ್ಟ್ರಗಳು ಈಗಾಗಲೇ ಮೂರನೇ ಅಲೆಯನ್ನು ಕಾಣುತ್ತಿವೆ. ಅದರಂತೆ ಭಾರತದಲ್ಲೂ ಈಗ ಎರಡನೇ ಅಲೆ ಬಂದಿದೆಯೇ?

ಈ ಬಗ್ಗೆ ಆರೋಗ್ಯ ತಜ್ಞರಾಗಲಿ, ವಿಜ್ಞಾನಿಗಳಾಗಲಿ ನಿಖರ ಉತ್ತರ ನೀಡುವುದಿಲ್ಲ. ಇದು ಎರಡನೇ ಅಲೆಯೇ ಅಥವಾ ಜನರು ಮುಂಜಾಗ್ರತಾ ಕ್ರಮಗಳನ್ನು ನಿರ್ಲಕ್ಷಿಸಿದ್ದರಿಂದ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆಯೇ ಎಂಬ ಸಂದೇಹ ಅವರಲ್ಲಿದೆ. 'ಎರಡನೇ ಅಲೆಯನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದ ಎಚ್ಚರಿಕೆಯಿಂದ ಇರುವುದು ಸೂಕ್ತ' ಎಂಬ ಸಲಹೆಯನ್ನು ಅವರು ನೀಡುತ್ತಾರೆ.

'ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಲು ರೂಪಾಂತರಿತ ವೈರಾಣು ಕಾರಣವೇ ಅಥವಾ ಜನರು ಮುನ್ನೆಚ್ಚರಿಕೆ ಕ್ರಮಗಳನ್ನು ನಿರ್ಲಕ್ಷಿಸಿದ್ದು ಕಾರಣವೇ ಎಂಬ ಬಗ್ಗೆ ನಮ್ಮ ಸಂಸ್ಥೆಯ ವಿಜ್ಞಾನಿಗಳು ಅಧ್ಯಯನ ನಡೆಸುತ್ತಿದ್ದಾರೆ' ಎಂದು ಸಿಎಸ್‌ಐಆರ್ ಇನ್‌ಸ್ಟಿಟ್ಯೂಟ್ ಆಫ್ ಜಿನಾಮಿಕ್ಸ್ ಆ್ಯಂಡ್ ಇಂಟಿಗ್ರೇಟಿವ್ ಬಯಾಲಜಿಯ ನಿರ್ದೇಶಕ ಅನುರಾಗ್ ಅಗರ್ವಾಲ್ ಹೇಳಿದ್ದಾರೆ.

'ಈಗಿನ ಏರುಗತಿಯೇ ಮುಂದುವರಿದರೆ ಎರಡನೇ ಅಲೆಯನ್ನು ತಳ್ಳಿಹಾಕಲಾಗದು. ಅಷ್ಟೇ ಅಲ್ಲ, ಸ್ಥಳೀಯವಾಗಿಯೇ ರೂಪಾಂತರಿತ ವೈರಾಣು ರೂಪುಗೊಳ್ಳುವ ಸಾಧ್ಯತೆ ಇದೆ. ಮಹಾರಾಷ್ಟ್ರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಎರಡನೇ ಅಲೆಯ ಸೂಚನೆಗಳು ಕಾಣಿಸುತ್ತಿವೆ. ಕಟ್ಟುನಿಟ್ಟಿನ ಕ್ರಮಗಳಿಂದ ಇದನ್ನು ತಡೆಯಲು ಸಾಧ್ಯ' ಎಂದು ಸಂಸ್ಥೆಯ ಆಣ್ವಿಕ ಜೀವಶಾಸ್ತ್ರ ವಿಭಾಗದ ನಿರ್ದೇಶಕ ರಾಕೇಶ್ ಮಿಶ್ರಾ ಹೇಳುತ್ತಾರೆ.

'ಇದು ಎರಡನೇ ಅಲೆ ಆಗಿರಬಹುದು ಅಥವಾ ಇಲ್ಲದಿರಬಹುದು, ಆದರೆ ಇದನ್ನು ಸಂಭವನೀಯ ಅಪಾಯ ಎಂದು ಪರಿಗಣಿಸಿ, ಬರಬಹುದಾದ ಕೆಟ್ಟದಿನಗಳಿಗೆ ಸಿದ್ಧತೆ ಮಾಡಿಕೊಳ್ಳುವುದು ಸೂಕ್ತ' ಎಂದು ಸಿಎಸ್‌ಐಆರ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕೆಮಿಕಲ್ ಬಯಾಲಜಿಯ ಸೂಕ್ಷ್ಮರೋಗಾಣು ತಜ್ಞೆ ಉಪಾಸನಾ ರೇ ಎಚ್ಚರಿಕೆ ನೀಡಿದ್ದಾರೆ.

ಆದರೆ, 'ದೇಶದಲ್ಲಿ ಏರುತ್ತಿರುವ ಕೋವಿಡ್ ಪ್ರಕರಣಗಳ ಬಗ್ಗೆ ಹೆಚ್ಚು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ' ಎಂದು ಲವ್ಲಿ ಪ್ರೊಫೆಶನಲ್ ಯುನಿವರ್ಸಿಟಿಯ ಅನ್ವಯಿಕ ವೈದ್ಯಕೀಯ ವಿಜ್ಞಾನ ವಿಭಾಗದ ಮುಖ್ಯಸ್ಥೆ ಮೋನಿಕಾ ಗುಲಾಟಿ ಹೇಳುತ್ತಾರೆ. 'ಇತರ ದೇಶಗಳಲ್ಲಿ ಎರಡನೇ ಅಲೆಯ ಸಂದರ್ಭದಲ್ಲಿ ಹೆಚ್ಚು ವೇಗವಾಗಿ ಹರಡುವ ರೂಪಾಂತರಿತ ವೈರಾಣು ಕಾಣಿಸಿದೆ. ಆದರೆ ನಮ್ಮಲ್ಲಿ ವೈರಾಣು ಅಷ್ಟು ಅಪಾಯಕಾರಿಯಾಗಿ ರೂಪಾಂತರವಾಗಿಲ್ಲ' ಎಂದು ಅವರು ಹೇಳುತ್ತಾರೆ.

ಲಸಿಕಾ ಕಾರ್ಯಕ್ರಮವನ್ನು ಚುರುಕುಗೊಳಿಸುವ ಮೂಲಕ ಬರಬಹುದಾದ ಅಪಾಯವನ್ನು ತಪ್ಪಿಸಬಹುದು ಎಂದು ಎಲ್ಲಾ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಎಚ್ಚರ ಮರೆತೆವೇ?

ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದಂತೆ ಜನರು ಎಚ್ಚರ ತಪ್ಪಿದ್ದೇ ಪ್ರಕರಣ ಪುನಃ ಹೆಚ್ಚಲು ಕಾರಣವಾಯಿತೇ?

ವಿಜ್ಞಾನಿಗಳು ಈ ಸಾಧ್ಯತೆಯನ್ನು ಅಲ್ಲಗಳೆದಿಲ್ಲ. ದೇಶದಲ್ಲಿ ಅನ್‌ಲಾಕ್ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಜನರು ಮಾಸ್ಕ್ ಧರಿಸುವುದು, ಕೈಗಳನ್ನು ಸ್ವಚ್ಛಗೊಳಿಸುವುದು, ಅಂತರ ಕಾಯ್ದುಕೊಳ್ಳುವುದೇ ಮುಂತಾದ ಪ್ರಮುಖ ಮುನ್ನೆಚ್ಚರಿಕೆಗಳನ್ನು ಮರೆತಿದ್ದಾರೆ. ಪ್ರಕರಣಗಳ ಏರುಗತಿಗೆ ಇದು ಕಾರಣ ಇರಬಹುದೆಂಬ ಸಂದೇಹವನ್ನು ವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಫೆಬ್ರುವರಿ ತಿಂಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ಕಾಣಿಸಿದ ಎರಡು ನಗರಗಳಲ್ಲಿ, ಕಳೆದ ತಿಂಗಳು ಹೆಚ್ಚು ಮದುವೆ ಸಮಾರಂಭಗಳು ನಡೆದಿದ್ದವು. ಎಲ್ಲಾ ಕಾರ್ಯಕ್ರಮಗಳಲ್ಲೂ ನಿಗದಿತ ಮಿತಿಗಿಂತ ಹಲವು ಪಟ್ಟು ಹೆಚ್ಚು ಜನರು ಪಾಲ್ಗೊಂಡಿದ್ದರು ಎಂಬುದನ್ನು ಅಲ್ಲಿನ ಮಾಧ್ಯಮಗಳು ವರದಿ ಮಾಡಿದ್ದವು.

'ಸಮೂಹ ರೋಗನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುವುದು ಅಷ್ಟು ಸುಲಭವಲ್ಲ. ಆದ್ದರಿಂದ ಅಂಥ ಒಂದು ಶಕ್ತಿ ನಮ್ಮಲ್ಲಿ ಬೆಳೆದಿದೆ ಎಂಬ ಭರವಸೆಯಲ್ಲಿ ಇರಲಾಗದು. ವೈರಾಣು ರೂಪಾಂತರಗೊಳ್ಳುತ್ತಿರುವುದರಿಂದ ಒಮ್ಮೆ ಕೋವಿಡ್‌ಗೆ ಒಳಗಾದವರು ಪುನಃ ಅದಕ್ಕೆ ಒಳಗಾಗುವ ಸಾಧ್ಯತೆಯೂ ಇದೆ' ಎಂದು ಏಮ್ಸ್‌ನ ನಿರ್ದೇಶಕರು ಎಚ್ಚರಿಕೆ ನೀಡಿದ್ದಾರೆ. ಈ ಕಾರಣಕ್ಕಾಗಿಯೇ ಕೋವಿಡ್ ನಿಯಮಾವಳಿಗಳನ್ನು ಪುನಃ ಕಟ್ಟುನಿಟ್ಟಾಗಿ ಜಾರಿ ಮಾಡಲು ಕೆಲವು ರಾಜ್ಯ ಸರ್ಕಾರಗಳು ಮುಂದಾಗಿವೆ.

3 ರಾಜ್ಯಗಳಲ್ಲಿ ಶೇ 77ರಷ್ಟು 'ಸಕ್ರಿಯ ಪ್ರಕರಣ'



ಆಧಾರ: ಆರೋಗ್ಯ ಸಚಿವಾಲಯ

ಐದು ರಾಜ್ಯಗಳಲ್ಲಿ ಶೇ 78ರಷ್ಟು ಹೊಸ ಪ್ರಕರಣಗಳು

ದೇಶದ ಐದು ರಾಜ್ಯಗಳಲ್ಲಿ ಶೇ 78ರಷ್ಟು ಪ್ರಕರಣಗಳು ಇವೆ. ಉಳಿದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್ ಹರಡುವಿಕೆ ವೇಗ ನಿಧಾನವಾಗಿದೆ. ರಾಜ್ಯಗಳು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗುತ್ತಿವೆ. ರಾತ್ರಿ ಕರ್ಫ್ಯೂ, ಮಾಸ್ಕ್ ಧರಿಸದಿದ್ದರೆ ದಂಡ, ಅಂಗಡಿ ತೆರೆಯಲು ಸಮಯ ನಿಗದಿಯಂತಹ ಕಟ್ಟುನಿಟ್ಟಿನ ಕ್ರಮಗಳು ಮತ್ತೆ ಜಾರಿಯಾಗುತ್ತಿವೆ

ಮಹಾರಾಷ್ಟ್ರ

23.4 ಲಕ್ಷ ಒಟ್ಟು ಪ್ರಕರಣಗಳು

1.38 ಲಕ್ಷ ಸಕ್ರಿಯ ಪ್ರಕರಣಗಳು



- ಮಹಾರಾಷ್ಟ್ರದಲ್ಲಿ ಮಾರ್ಚ್ 31ರವರೆಗೆ ಹೋಟೆಲ್, ಚಿತ್ರಮಂದಿರ, ಶಾಪಿಂಗ್‌ಮಾಲ್, ಕಚೇರಿಗಳಲ್ಲಿ ಶೇ 50ರಷ್ಟು ಮಾತ್ರ ಸಿಬ್ಬಂದಿ ಕೆಲಸ ಮಾಡಲು ಸೂಚನೆ; ಎಲ್ಲ ಸಿಬ್ಬಂದಿಗೂ ಮಾಸ್ಕ್, ಅಂತರ ಕಾಯ್ದುಕೊಳ್ಳುವಿಕೆ ಕಡ್ಡಾಯ
- ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನಿರ್ಬಂಧ; ಮದುವೆಗಳಲ್ಲಿ 50 ಜನರಿಗಿಂತ ಹೆಚ್ಚು ಸೇರುವಂತಿಲ್ಲ; ನಿಯಮ ಮೀರಿದರೆ ಕಠಿಣ ಕ್ರಮದ ಎಚ್ಚರಿಕೆ
- ಅಂತ್ಯಸಂಸ್ಕಾರಗಳಲ್ಲಿ 20ಕ್ಕಿಂತ ಕಡಿಮೆ ಜನರಷ್ಟೇ ಇರಬೇಕು; ಕೋವಿಡ್ ಸೋಂಕಿತರ ಮನೆ ಗೋಡೆಗೆ 'ಹೋಮ್ ಕ್ವಾರಂಟೈನ್' ಚೀಟಿ ಅಂಟಿಸುವುದು ಕಡ್ಡಾಯ; ನಿಯಮ ಮೀರಿದರೆ ಸೋಂಕಿತ ವ್ಯಕ್ತಿಯನ್ನು ಕೋವಿಡ್ ಆರೈಕೆ ಕೇಂದ್ರಕ್ಕೆ ರವಾನಿಸಲು ಕ್ರಮ

ಪಂಜಾಬ್

2.01 ಲಕ್ಷ ಒಟ್ಟು ಪ್ರಕರಣಗಳು

12,616 ಸಕ್ರಿಯ ಪ್ರಕರಣಗಳು



- ಪಂಜಾಬ್‌ನ ಲೂಧಿಯಾನ, ಪಟಿಯಾಲ, ಮೊಹಾಲಿ ಹಾಗೂ ಫತೇಗಡ ಸಾಹಿಬ್‌ನಲ್ಲಿ ಕೋವಿಡ್ ನಿಯಂತ್ರಿಸುವ ಸಲುವಾಗಿ ಮಾರ್ಚ್ 12ರಿಂದ ರಾತ್ರಿ ಕರ್ಫ್ಯೂ ಜಾರಿಯಲ್ಲಿದೆ
- ಪಂಜಾಬ್ ಶಾಲಾ ಮಂಡಳಿ ಅಂತಿಮ ಪರೀಕ್ಷೆಗಳನ್ನು (10 ಮತ್ತು 12ನೇ ತರಗತಿ) ಕೋವಿಡ್ ಕಾರಣ ಒಂದು ತಿಂಗಳವರೆಗೆ ಮುಂದೂಡಲಾಗಿದೆ.

ಕರ್ನಾಟಕ

9,428 ಸಕ್ರಿಯ ಪ್ರಕರಣಗಳು

9.62 ಲಕ್ಷ ಒಟ್ಟು ಪ್ರಕರಣಗಳು



- ಎಲ್ಲ ರಾಜ್ಯಗಳ ಜತೆ ಪ್ರಧಾನಿ ಅವರು ಇದೇ ಬುಧವಾರ ನಡೆಸಲಿರುವ ಸಭೆಯ ಬಳಿಕ ಕರ್ನಾಟಕದಲ್ಲಿ ರಾತ್ರಿ ಕರ್ಫ್ಯೂ ಹೇರುವ ಬಗ್ಗೆ ರಾಜ್ಯ ಸರ್ಕಾರ ನಿರ್ಧರಿಸಲಿದೆ.
- ಕರ್ನಾಟದಲ್ಲಿ ಒಂದು ವಾರದಿಂದ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಸೋಮವಾರ ತಜ್ಞರ ಸಭೆ ನಡೆಯಿತು. ಸೋಂಕು ನಿಯಂತ್ರಣಕ್ಕೆ ಸಾರ್ವಜನಿಕರು ಸಹಕಾರ ನೀಡದಿದ್ದಲ್ಲಿ ದಂಡ ಹಾಕಲಾಗುವುದು ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದಾರೆ.

ಗುಜರಾತ್

2.80 ಲಕ್ಷ ಒಟ್ಟು ಪ್ರಕರಣಗಳು

4,966 ಸಕ್ರಿಯ ಪ್ರಕರಣಗಳು



- ಕೋವಿಡ್ ಎರಡನೇ ಅಲೆ ತಡೆಗೆ ಗುಜರಾತ್‌ನ ಅಹಮದಾಬಾದ್, ಸೂರತ್, ವಡೋದರಾ ಮತ್ತು ರಾಜ್‌ಕೋಟ್‌ನಲ್ಲಿ ರಾತ್ರಿ ಕರ್ಫ್ಯೂ (ರಾತ್ರಿ 10ರಿಂದ ಬೆಳಿಗ್ಗೆ 6 ಗಂಟೆ) ವಿಧಿಸಲು ಮಂಗಳವಾರ ಸರ್ಕಾರ ನಿರ್ಧರಿಸಿದೆ.
- ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಮೂರು ಟಿ–20 ಕ್ರಿಕೆಟ್ ಪಂದ್ಯಗಳನ್ನು ವೀಕ್ಷಕರು ಇಲ್ಲದೇ ನಡೆಸಲು ನಿರ್ಧಾರ
- ಅಹಮದಾಬಾದ್‌ನ 8 ವಾರ್ಡ್‌ಗಳಲ್ಲಿ ಹೋಟೆಲ್, ರೆಸ್ಟೋರೆಂಟ್, ಮಾಲ್‌ಗಳನ್ನು ರಾತ್ರಿ 10 ಗಂಟೆಗೆ ಬಂದ್ ಮಾಡಲು ಸೂಚನೆ ನೀಡಲಾಗಿದೆ.

ತಮಿಳುನಾಡು

5,450 ಸಕ್ರಿಯ ಪ್ರಕರಣಗಳು

8.61 ಲಕ್ಷ ಒಟ್ಟು ಪ್ರಕರಣಗಳು



- ತಮಿಳುನಾಡಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಮಾಸ್ಕ್ ಧರಿಸದ ಜನರಿಗೆ ದಂಡ ವಿಧಿಸುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಮಂಗಳವಾರ ಸೂಚನೆ ನೀಡಿದ್ದಾರೆ. ನೀಲಗಿರಿ ಜಿಲ್ಲೆಯಲ್ಲಿ ಮಾಸ್ಕ್ ಧರಿಸದಿದ್ದರೆ ₹200 ದಂಡ.
- ಕೇರಳದಿಂದ ತಮಿಳುನಾಡು ಪ್ರವೇಶಿಸುವ ವಾಹನಗಳಿಗೆ ಇ-ಪಾಸ್ ಹಾಗೂ ಜನರಿಗೆ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ ಮಾಡಲಾಗಿದೆ



ಅಧಿಕ ಹೊಸ ಪ್ರಕರಣ ದಾಖಲಾದ ರಾಜ್ಯಗಳು

ಮಹಾರಾಷ್ಟ್ರ, ತಮಿಳುನಾಡು, ಪಂಜಾಬ್, ಮಧ್ಯಪ್ರದೇಶ, ದೆಹಲಿ, ಗುಜರಾತ್, ಕರ್ನಾಟಕ, ಹರಿಯಾಣ

24 ಗಂಟೆಗಳಲ್ಲಿ ಒಂದೂ ಸಾವು ದಾಖಲಾಗದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು

ಅಸ್ಸಾಂ, ಚಂಡೀಗಢ, ಜಮ್ಮು–ಕಾಶ್ಮೀರ, ಒಡಿಶಾ, ಜಾರ್ಖಂಡ್, ಲಕ್ಷದ್ವೀಪ, ಸಿಕ್ಕಿಂ, ಲಡಾಖ್, ಮಣಿಪುರ, ದಮನ್ ಮತ್ತು ದಿಯು, ದಾದ್ರ ಮತ್ತು ನಗರ ಹವೇಲಿ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರಾ, ಅಂಡಮಾನ್ ನಿಕೋಬಾರ್, ದ್ವೀಪಗಳು, ಅರುಣಾಚಲ ಪ್ರದೇಶ

ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

ರೂಪಾಂತರ ಕೊರೊನಾ ವೈರಸ್‌ನ ಪಿಡುಗು

ಜಗತ್ತಿನ ಬೇರೆ ದೇಶಗಳಲ್ಲೂ ಕೋವಿಡ್-19ರ ಎರಡನೇ ಅಲೆ ಆರಂಭವಾಗಿದೆ. ಕೆಲವು ದೇಶಗಳಲ್ಲಿ ಈಗ ಮೂರನೇ ಅಲೆ ಆರಂಭವಾಗಿದೆ ಎಂದು ತಜ್ಞರು ಹೇಳಿದ್ದಾರೆ. ಕೋವಿಡ್-19ರ ಮೊದಲ ಅಲೆಯ ತೀವ್ರತೆ ಕಡಿಮೆಯಾಗುತ್ತಿದ್ದ ಸಂದರ್ಭದಲ್ಲಿ, ಚಳಿಗಾಲದಲ್ಲಿ ಎರಡನೇ ಅಲೆ ಕಾಣಿಸಿಕೊಳ್ಳಬಹುದು ಎಂದು ತಜ್ಞರು ಅಂದಾಜಿಸಿದ್ದರು. ಆದರೆ, ಚಳಿಗಾಲದ ಅಂತ್ಯದ ವೇಳೆಗೂ ಹಲವು ದೇಶಗಳಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ.

ಬ್ರೆಜಿಲ್, ಬ್ರಿಟನ್ ಮತ್ತು ಚೀನಾದಲ್ಲಿ ಈಗ ಕೋವಿಡ್-19ರ ಮೂರನೇ ಅಲೆ ಇದೆ ಎಂದು ಹೇಳಲಾಗುತ್ತಿದೆ. ಉಳಿದಂತೆ ಫ್ರಾನ್ಸ್, ಜರ್ಮನಿ, ರಷ್ಯಾ ಮತ್ತು ಆಫ್ರಿಕಾದ ಕೆಲವು ದೇಶಗಳಲ್ಲಿ ಎರಡನೇ ಅಲೆ ತೀವ್ರಗೊಳ್ಳುತ್ತಿದೆ. ಕೋವಿಡ್ ನಿಯಂತ್ರಣ ಕ್ರಮಗಳ ಸಡಿಲಿಕೆಯೇ ಸೋಂಕು ಮತ್ತೆ ತೀವ್ರವಾಗಿ ಹರಡಲು ಕಾರಣ. ಇದರ ಜತೆಯಲ್ಲಿಯೇ ರೂಪಾಂತರಗೊಂಡ ಕೊರೊನಾವೈರಸ್‌ನ ಕಾರಣದಿಂದಲೂ, ಕ್ಷಿಪ್ರವಾಗಿ ಹರಡುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

ಬ್ರೆಜಿಲ್: ಬ್ರೆಜಿಲ್‌ನಲ್ಲಿ ಈವರೆಗೆ ಒಟ್ಟು 1.15 ಕೋಟಿ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಇವುಗಳಲ್ಲಿ ಈಗ 11 ಲಕ್ಷದಷ್ಟು ಪ್ರಕರಣಗಳು ಮಾತ್ರವೇ ಸಕ್ರಿಯವಾಗಿವೆ. 2020ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 15,000ಕ್ಕೆ ಇಳಿಕೆಯಾಗಿತ್ತು. ಜನವರಿಯಲ್ಲಿ ಈ ಸಂಖ್ಯೆ 36,000ಕ್ಕೆ ಏರಿಕೆಯಾಯಿತು. ಫೆಬ್ರುವರಿಯಲ್ಲಿ ಪ್ರತಿದಿನ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 40,000ಕ್ಕೆ ಏರಿಕೆಯಾಯಿತು. ಈಗ ಇದು 60,000ದ ಗಡಿ ದಾಟಿದೆ. ಮಾರ್ಚ್ ಎರಡನೇ ವಾರದಲ್ಲಿ, ಒಂದೆರಡು ದಿನ 80,000ಕ್ಕೂ ಹೆಚ್ಚು ಹೊಸ ಪ್ರಕರಣಗಳು ಪತ್ತೆಯಾಗಿವೆ. ಬ್ರೆಜಿಲ್‌ನಲ್ಲಿ ಅತ್ಯಂತ ಕ್ಷಿಪ್ರವಾಗಿ ಹರಡುವ ರೂಪಾಂತರ ಕೊರೊನಾವೈರಸ್ ಪತ್ತೆಯಾಗಿದೆ. ಇದರಿಂದಲೇ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ ಎನ್ನಲಾಗಿದೆ.

ಫ್ರಾನ್ಸ್: ಕೋವಿಡ್ ಎರಡನೇ ಅಲೆಯಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾದ ದೇಶಗಳಲ್ಲಿ ಫ್ರಾನ್ಸ್ ಸಹ ಒಂದು. ಚಳಿಗಾಲದ ಆರಂಭದಲ್ಲಿ ದೇಶದಲ್ಲಿ ಒಟ್ಟು 8 ಲಕ್ಷ ಪ್ರಕರಣಗಳಷ್ಟೇ ಇದ್ದವು. ಡಿಸೆಂಬರ್ ಅಂತ್ಯದ ವೇಳೆಗೆ ಈ ಸಂಖ್ಯೆ 10 ಲಕ್ಷ ಮುಟ್ಟಿತಾದರೂ, ಪ್ರತಿದಿನ ಪತ್ತೆಯಾಗುವ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿತ್ತು. ಆದರೆ, ಜನವರಿ 15ರ ನಂತರ ಪ್ರತಿದಿನ 22,000ದಿಂದ 30,000 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಪ್ರತಿದಿನದ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ಇಲ್ಲದಿದ್ದರೂ, ಇಳಿಕೆಯಂತೂ ಆಗಿಲ್ಲ. ಹೀಗಾಗಿ ಒಟ್ಟು ಪ್ರಕರಣಗಳ ಸಂಖ್ಯೆ 37 ಲಕ್ಷದ ಗಡಿಯನ್ನು ದಾಟಿದೆ. ದೇಶದ ಹಲವೆಡೆ ಲಾಕ್‌ಡೌನ್‌ನಂತಹ ನಿರ್ಬಂಧಗಳು ಇವೆ. ಬ್ರಿಟನ್‌ಗೆ ವಿಮಾನ ಸಂಚಾರದ ಮೇಲೆ ನಿರ್ಬಂಧವಿದೆ.

ಬ್ರಿಟನ್: ಬ್ರಿಟನ್‌ನಲ್ಲಿ 2020ರ ಏಪ್ರಿಲ್‌ನಲ್ಲಿಯೇ ಮೊದಲ ಅಲೆ ನಿಯಂತ್ರಣಕ್ಕೆ ಬಂದಿತ್ತು. ಆದರೆ ಸೆಪ್ಟೆಂಬರ್ ವೇಳೆಗೆ ಆರಂಭವಾದ ಎರಡನೇ ಅಲೆ, ನವೆಂಬರ್‌ನಲ್ಲಿ ಗರಿಷ್ಠಮಟ್ಟದಲ್ಲಿ ಇತ್ತು. ಡಿಸೆಂಬರ್ ವೇಳೆಗೆ ಅದೂ ನಿಯಂತ್ರಣಕ್ಕೆ ಬಂದಿತು. ಜನವರಿ ಎರಡನೇ ವಾರದ ನಂತರ ದೇಶದಲ್ಲಿ ಪ್ರತಿದಿನ ಪತ್ತೆಯಾಗುವ ಪ್ರಕರಣಗಳಲ್ಲಿ ದಿಢೀರ್ ಏರಿಕೆಯಾಯಿತು. ಇದೇ ಅವಧಿಯಲ್ಲಿ ಕೊರೊನಾವೈರಸ್‌ನ ರೂಪಾಂತರ ವೈರಸ್ ಪತ್ತೆಯಾಯಿತು. ಮೂರನೇ ಅಲೆಯಲ್ಲಿ ಕೋವಿಡ್ ಕ್ಷಿಪ್ರವಾಗಿ ಹರಡಲು ಈ ರೂಪಾಂತರ ವೈರಸ್ ಕಾರಣ ಎನ್ನಲಾಗಿದೆ. ಈಗ ಕೋವಿಡ್ ಹರಡುವಿಕೆ ನಿಯಂತ್ರಣಕ್ಕೆ ಬರುತ್ತಿದೆ. ಆದರೆ ಲಾಕ್‌ಡೌನ್, ವಿಮಾನ-ಹಡಗು ಸಂಚಾರ ನಿರ್ಬಂಧ, ಪಾರ್ಟಿಗಳ ಮೇಲೆ ನಿರ್ಬಂಧದಂತಹ ನಿಯಂತ್ರಣ ಕ್ರಮಗಳು ಜಾರಿಯಲ್ಲಿವೆ.

ಆಧಾರ: ವರ್ಲ್ಡೋಮೀಟರ್, ಬಿಬಿಸಿ, ರಾಯಿಟರ್ಸ್, ದಿ ಗಾರ್ಡಿಯನ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಮಹೇಂದ್ರ ಸಿಂಗ್ ಧೋನಿ** ಎಂದರೆ ಭಾರತೀಯ ಕ್ರಿಕೆಟ್‌ನ ಬಹುದೊಡ್ಡ ಹೆಸರು. ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದು, ಸದ್ಯ ಐಪಿಎಲ್‌ನಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದಾರೆ. ಧೋನಿ ಅವರ ಒಂದು ಚಿತ್ರ ಇತ್ತೀಚೆಗೆ ಭಾರಿ ಸದ್ದು ಮಾಡಿದೆ. ಅವರು ಧರಿಸಿರುವ ದಿರಿಸು ಗಮನಿಸಿದರೆ, ಅವರು ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂಬ ಭಾವನೆ ಬರುತ್ತದೆ. ಹಲವು ಸಾಮಾಜಿಕ ಜಾಲತಾಣಗಳ ಬಳಕೆದಾರರು ಈ ಬಗ್ಗೆಯೇ ಚರ್ಚೆ ನಡೆಸಿದ್ದಾರೆ.

✓ **ಧೋನಿ ಅವರ ಹೊಸ** ದಿರಿಸು ಬೌದ್ಧಧರ್ಮಕ್ಕೆ ಸಂಬಂಧಿಸಿದೆ ಎಂಬುದೇನೋ ನಿಜ. ಆದರೆ ಅವರು ಮತಾಂತರ ಆಗಿಲ್ಲ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. ಧೋನಿ ಅವರು ಕೇವಲ ಜಾಹೀರಾತಿಗಾಗಿ ಬೌದ್ಧ ಬಿಕ್ಕುಗಳು ಧರಿಸುವ ಬಟ್ಟೆ ತೊಟ್ಟಿದ್ದಾರೆ ಎಂದು ಖಚಿತಪಡಿಸಿದೆ. ಏಪ್ರಿಲ್ 9ರಿಂದ ಆರಂಭವಾಗುವ ಐಪಿಎಲ್ ಸರಣಿಯ ಜಾಹೀರಾತಿಗಾಗಿ ಧೋನಿ ಅವರನ್ನು ಹೀಗೆ ಬಳಸಿಕೊಳ್ಳಲಾಗಿದೆ. ಧೋನಿ ಅವರ ಮ್ಯಾನೇಜರ್ ಅರುಣ್ ಪಾಂಡೆ ಅವರು ಇದನ್ನು ಖಚಿತಪಡಿಸಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ಬುಧವಾರ 17 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಚತುರ್ಥಿ ಗಂ. 36-6 (ರಾ. 8-59) ಬುಧವಾರ ನಿತ್ಯ ನಕ್ಷತ್ರ ಭರಣಿ ಗಂ. 60-00 (ದಿನಪೂರ್ತಿ) ಐಂದ್ರ ನಾಮ ಯೋಗ ಗಂ. 2-6 ವಣಿಜ ಕರಣ ಗಂ. 3-34 ವಿಷ ಗಂ. 24-23 ಅಮೃತ ಗಂ. 51-00 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-29 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 4, 9

ಮೇಷ: ದೈನಂದಿನ ವ್ಯವಹಾರಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿದ್ದೀರಿ. ಹೊಸ ಗೃಹನಿರ್ಮಾಣ ಅಥವಾ ಖರೀದಿ ಸಾಧ್ಯತೆಗಳು ಕಂಡುಬರುತ್ತಿವೆ. ಮಕ್ಕಳ ಪ್ರತಿಭೆಯನ್ನು ಕಂಡು ಸಂತಸ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗುವಿರಿ.

ವೃಷಭ: ಕಳೆದು ಹೋದ ವಸ್ತುವೊಂದನ್ನು ಪುನಃ ಪಡೆದುಕೊಳ್ಳಲಿದ್ದೀರಿ. ಮಾನಸಿಕ ನೆಮ್ಮದಿ ಪಡೆಯಲಿದ್ದೀರಿ. ದೂರ ಪ್ರಯಾಣದ ಯೋಗ ಕಂಡುಬರುತ್ತಿದೆ. ಸಂತೃಪ್ತ ದಾಂಪತ್ಯ ಜೀವನ ನಿಮ್ಮದಾಗಲಿದೆ.

ಮಿಥುನ: ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಪ್ರೇಮ ಪ್ರಕರಣದ ವಿಚಾರದಲ್ಲಿ ಎಚ್ಚರಿಕೆ ಅಗತ್ಯ. ಸಂಗಾತಿಯ ಅನುಮಾನಕ್ಕೆ ತುತ್ತಾಗಿ ನೆಮ್ಮದಿ ನಷ್ಟ ಸಂಭವ.

ಕರ್ಕಾಟಕ: ನಿಮ್ಮವರಿಂದಲೇ ಅನಿರೀಕ್ಷಿತ ತೊಂದರೆ ಎದುರಿಸಬೇಕಾದೀತು. ತಾಯಿಯವರ ಆರೋಗ್ಯದಲ್ಲಿ ಹೆಚ್ಚಿನ ಏರುಪೇರು ಉಂಟಾಗುವ ಸಾಧ್ಯತೆ. ಸಹೋದರರಿಂದ ಉತ್ತಮ ಸಹಕಾರ ದೊರಕಿ ಚಿಂತೆ ಪರಿಹಾರವಾಗಲಿದೆ.

ಸಿಂಹ: ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗುವುದು. ಹಿರಿಯರ ಮಾತುಗಳನ್ನು ಗೌರವಿಸುವುದು ಉತ್ತಮ. ಅಮೂಲ್ಯ ವಸ್ತುಗಳನ್ನು ಖರೀದಿಸಲಿದ್ದೀರಿ. ವಸ್ತ್ರಾಭರಣಗಳ ವ್ಯಾಪಾರಸ್ಥರಿಗೆ ಹೆಚ್ಚಿನ ಆದಾಯ.

ಕನ್ಯಾ: ನ್ಯಾಯಾಲಯದಲ್ಲಿನ ಕಟ್ಟಲೆಗಳು ನಿಮಗೆ ಅನುಕೂಲಕರವಾಗಿ ಕಂಡುಬರುವುದು. ಹಣಕಾಸಿನ ವ್ಯವಹಾರದಲ್ಲಿ ಹಿಂಜರಿತ ಕಂಡುಬರುವುದು. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯವಾಗುವ ಸಾಧ್ಯತೆ. ದೇವತಾ ದರ್ಶನ ಸಾಧ್ಯತೆ.

ತುಲಾ: ವ್ಯವಹಾರದಲ್ಲಿ ಅನಿರೀಕ್ಷಿತ ಘಟನೆಗಳು ಎದುರಾಗುವ ಸಾಧ್ಯತೆ. ಅಧಿಕಾರಿಗಳಿಂದ ಕಿರಿಕಿರಿ ಉಂಟಾಗಲಿದೆ. ಕಾರ್ಯಬಾಹುಳ್ಯದಿಂದಾಗಿ ದೇಹಾಲಸ್ಯ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಉಚಿತ.

ವೃಶ್ಚಿಕ: ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ದೈನಂದಿನ ವ್ಯವಹಾರಗಳು ಸುಗಮವಾಗಿ ಜರುಗಲಿವೆ. ಜಂಟಿ ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುವುದು ಉತ್ತಮ. ಆದಾಯಕ್ಕೆ ಹೊಸ ಮೂಲ ಕಂಡುಕೊಳ್ಳುವಿರಿ.

ಧನು: ಅನ್ಯರ ಮಾತಿನ ಬಗ್ಗೆ ಅತಿಯಾದ ವಿಶ್ವಾಸ ಬೇಡ. ತುಲನಾತ್ಮಕ ಚಿಂತನೆಯಿಂದ ತೀರ್ಮಾನ ಕೈಗೊಳ್ಳುವುದು ಉತ್ತಮ. ಕುಟುಂಬ ಸಮೇತ ಶುಭ ಸಮಾರಂಭಗಳಲ್ಲಿ ಭಾಗವಹಿಸಲಿದ್ದೀರಿ.

ಮಕರ: ದೂರಾಲೋಚನೆಯಿಂದಾಗಿ ಕಾರ್ಯದಲ್ಲಿ ಯಶಸ್ಸು. ಕುಟುಂಬ ಸಮೇತ ಕ್ಷೇತ್ರ ದರ್ಶನ ಸಾಧ್ಯತೆ ಇದೆ. ಮನೆಯಲ್ಲಿ ವಿನಾಕಾರಣ ಉಂಟಾಗಬಹುದಾದ ಮನಸ್ತಾಪ ತಾಳ್ಮೆಯಿಂದ ನಿವಾರಿಸಿಕೊಳ್ಳಿ.

ಕುಂಭ: ಉದ್ಯೋಗ ಕ್ಷೇತ್ರದಲ್ಲಿ ಸಣ್ಣಪುಟ್ಟ ಮನಸ್ತಾಪಗಳು ತಲೆದೋರುವ ಸಾಧ್ಯತೆ. ಅಮೂಲ್ಯ ವಸ್ತುಗಳ ಸಂಗ್ರಹ ಮಾಡಲಿದ್ದೀರಿ. ಮಹಿಳೆಯರ ಆಶೋತ್ತರಗಳು ಈಡೇರುವ ಲಕ್ಷಣಗಳು ಗೋಚರಿಸುತ್ತಿವೆ.

ಮೀನ: ವಸತಿ ಸ್ಥಳ ಬದಲಾವಣೆ ಸಾಧ್ಯತೆ. ಹೂವು, ಹಣ್ಣು ವ್ಯಾಪಾರದಲ್ಲಿ ವಿಶೇಷ ಲಾಭ. ಮಿತ್ರ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ವಾಹನ ಚಾಲನೆ ವಿಚಾರದಲ್ಲಿ ಜಾಗರೂಕರಾಗಿರುವುದು ಉತ್ತಮ.

ನಿಮ್ಮ ಜನ್ಮದಿನ 17-ಮಾರ್ಚ್ ಈ ದಿನ ಅತ್ಯಂತ ಶುಭಕರ. ಮಾನಸಿಕ ಸದೃಢತೆಯಿಂದಾಗಿ ಕಾರ್ಯದಕ್ಷತೆಯನ್ನು ರೂಢಿಸಿಕೊಳ್ಳಲಿದ್ದೀರಿ. ಉದ್ಯಮಿಗಳಿಗೆ ಉತ್ತಮ ಆದಾಯ ತರುವ ವರ್ಷ. ನಿರುದ್ಯೋಗಿಗಳಿಗೆ ಕಠಿಣ ಶ್ರಮದಿಂದಾಗಿ ಉದ್ಯೋಗ ಲಾಭ. ಧಾನ್ಯ ವ್ಯಾಪಾರದಲ್ಲಿ ವಿಶೇಷ ಲಾಭ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಒಗಟಿನ ಪ್ರಶ್ನೋತ್ತರ

ರಾಜನ ಬಳಿ ಇರುವಾಗ ಮಹೋಷಧಕುಮಾರನಾದ ಬೋಧಿಸತ್ವನಿಗೆ ಹದಿನಾರು ತುಂಬಿತು. ಅವನ ಅಕ್ಕನಂತೆಯೇ ಇದ್ದ ರಾಣಿ ಉದುಂಬರದೇವಿಯೇ ಅವನ ಆರೈಕೆಯನ್ನು ನೋಡಿಕೊಳ್ಳುತ್ತಿದ್ದಳು. ಇನ್ನು ನನ್ನ ತಮ್ಮ ಚಿಕ್ಕವನಾಗಿಲ್ಲ. ಅವನ ಮರ್ಯಾದೆ, ಐಶ್ವರ್ಯವೂ ಹೆಚ್ಚಾಗಿದೆ. ಅವನಿಗೆ ಮದುವೆ ಮಾಡುವುದು ಉಚಿತ ಎಂದು ತೀರ್ಮಾನ ಮಾಡಿ ಅವನಿಗೆ ಹೇಳಿದಳು. ಕುಮಾರ 'ಅಕ್ಕಾ, ನೀನು ಹುಡುಕಿದ ಹುಡುಗಿ ನನಗೆ ಇಷ್ಟವಾಗಲಿಕ್ಕಿಲ್ಲ. ಆದ್ದರಿಂದ ನಾನೇ ಸರಿಯಾದ ಹುಡುಗಿಯನ್ನು ಹುಡುಕಿ ತರುತ್ತೇನೆ. ಮಹಾರಾಜರಿಗೆ ಈ ವಿಷಯವನ್ನು ಈಗಲೇ ಹೇಳುವುದು ಬೇಡ' ಎಂದ.

ಮರುದಿನ ಆತ ರಾಣಿಗೆ ನಮಸ್ಕರಿಸಿ ಹೊರಟ. ಸ್ನೇಹಿತರಿಗೆ ಹೇಳಿ ಅರಳೆಯನ್ನು ಹಿಂಜುವ ಸಾಮಾನುಗಳನ್ನು ತೆಗೆದುಕೊಂಡು, ತನ್ನ ವೇಷ ಬದಲಿಸಿಕೊಂಡು ಉತ್ತರದ ದಿಕ್ಕಿಗೆ ನಡೆದ. ಪುರಾತನವಾದ ಯವಮಜ್ಝ ಗ್ರಾಮಕ್ಕೆ ಬಂದ. ಅದು ಹಿಂದೆ ಅತ್ಯಂತ ಶ್ರೀಮಂತರಾದ ಶ್ರೇಷ್ಠಿಗಳ ನಾಡು. ಈಗ ಅದು ದರಿದ್ರವಾಗಿತ್ತು. ಒಂದು ದೊಡ್ಡ ಮನೆತನದ ಹುಡುಗಿ ಅಮರಾದೇವಿ ಅತ್ಯಂತ ಚೆಲುವೆ, ಸರ್ವಲಕ್ಷಣ ಸಂಪನ್ನೆ. ಅದಕ್ಕಿಂತ ಮಿಗಿಲಾಗಿ ಬುದ್ಧಿವಂತೆ, ಪುಣ್ಯವತಿ. ಮಹೋಷಧಕುಮಾರ ಅಂಥ ಹುಡುಗಿಯನ್ನೇ ಹುಡುಕುತ್ತಿದ್ದ.

ಆಕೆ ಬೆಳಿಗ್ಗೆ ತೆಳ್ಳಗೆ ಕಿಚಡಿಯನ್ನು ಮಾಡಿಕೊಂಡು ತಂದೆಯ ಹೊಲಕ್ಕೆ ಹೊರಟಿದ್ದಳು. ದಾರಿಯಲ್ಲಿ ಆಕೆಯನ್ನು ಕುಮಾರ ಕಂಡ. ಈ ಹುಡುಗಿ ಸರ್ವಲಕ್ಷಣ ಸಂಪನ್ನೆಯಾಗಿದ್ದಾಳೆ. ಆಕೆಯ ಮದುವೆಯಾಗಿಲ್ಲದಿದ್ದರೆ ನನ್ನ ಹೆಂಡತಿಯಾಗಲು ಸರಿಯಾಗಿದ್ದಾಳೆ. ಆಕೆ ವಿವಾಹಿತಳೋ, ಅವಿವಾಹಿತಳೋ ಎಂಬುದನ್ನು ತಿಳಿದುಕೊಳ್ಳಬೇಕೆಂದು ಆಕೆಯ ಮುಂದೆ ಬಂದು ತನ್ನ ಮುಷ್ಟಿಯನ್ನು ತೋರಿಸಿದ. ಆಕೆಗೆ ಆ ಸಂಜ್ಞೆ ತಿಳಿಯಿತು. ಮೆಲ್ಲಗೆ ನಕ್ಕು ತನ್ನ ಹಸ್ತವನ್ನು ತೆರೆದು ಅಂಗೈ ತೋರಿಸಿದಳು. ಆಕೆ ಅವಿವಾಹಿತಳು ಎಂದು ಆತನಿಗೆ ತಿಳಿಯಿತು. ಆಕೆಯ ಹತ್ತಿರ ಬಂದು, 'ಭದ್ರೆ, ನಿನ್ನ ಹೆಸರೇನು?' ಎಂದು ಕೇಳಿದ.

ಆಕೆ, 'ಸ್ವಾಮಿ, ಭೂತ, ಭವಿಷ್ಯ, ವರ್ತಮಾನಗಳಲ್ಲಿ ಇಲ್ಲದ್ದು ನನ್ನ ಹೆಸರು' ಎಂದಳು

'ಭದ್ರೆ, ಈ ಲೋಕದಲ್ಲಿ ಯಾರೂ ಅಮರರಲ್ಲ. ನಿನ್ನ ಹೆಸರು ಅಮರಾ ಇರಬೇಕು'.

'ಹೌದು ಸ್ವಾಮಿ, ನಾನು ಅಮರಾದೇವಿ'.

'ಆಹಾರವನ್ನು ಯಾರಿಗಾಗಿ ತೆಗೆದುಕೊಂಡು ಹೋಗುತ್ತೀ?'

'ಸ್ವಾಮಿ, ನನ್ನ ಪೂರ್ವದೇವತೆಗೆ'

'ಭದ್ರೆ, ತಂದೆತಾಯಿಗಳೇ ಪೂರ್ವದೇವತೆಗಳು. ತಂದೆಗೆ ಆಹಾರ ತೆಗೆದುಕೊಂಡು ಹೋಗುತ್ತಿದ್ದೀ'.

'ಹೌದು ಸ್ವಾಮಿ, ಈ ಆಹಾರ ನನ್ನ ತಂದೆಗೆ'.

'ನಿನ್ನ ತಂದೆ ಏನು ಮಾಡುತ್ತಾರೆ?'

'ಅವರು ಒಂದನ್ನು ಎರಡು ಮಾಡುತ್ತಾರೆ'.

'ಒಂದನ್ನು ಎರಡು ಮಾಡುವುದೆಂದರೆ ನೆಲವನ್ನು ಸೀಳುವುದು. ನಿನ್ನ ತಂದೆ ವ್ಯವಸಾಯ ಮಾಡುತ್ತಾರೆ ಎಂದು ತಿಳಿಯಿತು. ಅವರು ಯಾವ ಸ್ಥಳದಲ್ಲಿ ಉಳುತ್ತಾರೆ?'

'ಒಮ್ಮೆ ಹೋದ ಮೇಲೆ ಮರಳಿ ಬಾರದ ಜಾಗೆಯಲ್ಲಿ'.

'ಓಹೋ, ಹಿಂದಿರುಗದ ಜಾಗವೆಂದರೆ ಸ್ಮಶಾನ. ನಿಮ್ಮ ತಂದೆಯ ಹೊಲ ಸ್ಮಶಾನದ ಹತ್ತಿರವಿದೆ ಎಂದಾಯ್ತು'.

ಹೀಗೆ ಒಗಟಿನಲ್ಲಿಯೇ ಪ್ರಶ್ನೆ ಮತ್ತು ಅದಕ್ಕೆ ಒಗಟಿನಲ್ಲಿಯೇ ಉತ್ತರ ನಡೆಯಿತು. ಮಹೋಷಧಕುಮಾರ ಅಮರಾದೇವಿಯೇ ತನಗೆ ಸರಿಯಾದ ಪತ್ನಿ ಎಂದು ತೀರ್ಮಾನ ಮಾಡಿದ. ❖

ಪದಬಂಧ 4539

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೀಗೆ ತಿರುವಿ ಹಾಕು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ತಲೆಯಲ್ಲಿರುವ ಅನ್ನದ ಪಾತ್ರೆ (3)
6.ಕುಸುರಿ ಕೆಲಸವಿದು (3)
8.ಉಪಯುಕ್ತವಾಗಿ ಸೇರಿದುದು (3)
9.ಕಡೆದ ಮೊಸರು (3)
10.ಕನ್ನ ಕೊರೆದು ಕದ್ದಿರುವ ಚಿನ್ನ (3)
12.ಕೊತ್ತಂಬರಿ ಬೀಜವಿದು (3)
14.ಕವಳದ ನಂತರ ತಂದಿರುವ ವೀಳ್ಯದೆಲೆ ಕಟ್ಟು (4)
15.ಮರವನ್ನು ಕತ್ತರಿಸುವ ಸಾಧನ (4)

ಮೇಲಿಂದ ಕೆಳಕ್ಕೆ

1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಹರಸುತಲಿದ್ದಾಗ ಪುತ್ರ ಕಾಣಿಸಿದನಲ್ಲಾ? (2)
3.ಬಾಳೆಲೆ ಹಾಕುತ್ತಿರುವ ಹುಡುಗಿ (2)
4.ಬಿಡುಗಡೆ ಹೊಂದಿದವನು (3)
7.ನೆಲದ ಅಡಿಯಲ್ಲಿರುವ ಗುಪ್ತ ಗೃಹ (5)
8.ಸಂಖ್ಯೆಯನ್ನು ಸೂಚಿಸುವ ಪದ (5)
9.ಎಂಟು ಭಾಗಗಳುಳ್ಳದ್ದು (3)
11.ಗುಡಿಯ ಮೇಲಿರುವ ಗೋಪುರದ ತುದಿ (3)
12.ಹಳೆ ಗೆಳೆಯನಲ್ಲಿರುವ ವೈರತ್ವ? (2)
13.ಆನೆ ತಿರುಗಿದರೆ ಲೋಕ ಕಂಡೀತು! (2)



4538ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಛಾಯಾಗ್ರಾಹಿ 3.ಪರಿತ್ಯಾಗ 5.ಪಿಕಾರಿ 6.ಪಾಠಿ 7.ನೆಪ 9.ರಜ 11.ಕ್ಷಿತಿ 12.ಮಾತೃಕೆ 14.ಜನ್ಮದಾತ 15.ಸಮಾನತೆ

ಮೇಲಿಂದ ಕೆಳಕ್ಕೆ:
1.ಛಾಪಾಖಾನೆ 2.ಹಿತೈಷಿ 3.ಪರಾರಿ 4.ಗಣತಿ 6.ಪಾಲುದಾರ 8.ಪದಚ್ಯುತಿ 10.ಜಟಿಲತೆ 11.ಕ್ಷಿತಿಜ 12.ಮಾರುತ 13.ಕೆಲಸ

ಸುಡೊಕು 4925

9		5				4		
	8		7		5		1	9
7		1		6		2		8
							3	2
3	6		5		7	8	9	
		8					4	7
		7		5		1		3
5			9		8		2	4
2		3					8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4924 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಷೇರುಪೇಟೆ ವಹಿವಾಟು

▼ 31



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,929
ಇಂದಿನ ಅಂತ್ಯ	14,910
▼	19
ದಿನದ ಕನಿಷ್ಠ	14,890

ವಿನಿಮಯ ದರ

$ ಡಾಲರ್	72.55
£ ಪೌಂಡ್	100.29
€ ಯುರೊ	86.52
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹380
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹383

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1550)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1810 (1820)
ಪಾಮೋಲಿನ್	₹1230 (1235)

ಎಲ್‌ಐಸಿಯಿಂದ ಬಚತ್ ಪ್ಲಸ್ ಪಾಲಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ರಕ್ಷಣೆ ಹಾಗೂ ಉಳಿತಾಯದ ಸೌಲಭ್ಯ ಒದಗಿಸುವ 'ಬಚತ್ ಪ್ಲಸ್' ವಿಮಾ ಪಾಲಿಸಿಗೆ ಭಾರತೀಯ ಜೀವವಿಮಾ ನಿಗಮ (ಎಲ್‌ಐಸಿ) ಚಾಲನೆ ನೀಡಿದೆ.

ಇದು ಐದು ವರ್ಷಗಳ ಅವಧಿಯ ಪಾಲಿಸಿ. ವಿಮೆ ಅವಧಿ ಪೂರ್ಣಗೊಂಡ ನಂತರ ಪಾಲಿಸಿದಾರರಿಗೆ ನಿರ್ದಿಷ್ಟ ಮೊತ್ತ ಸಿಗಲಿದೆ ಅಥವಾ ಪಾಲಿಸಿ ಹೊಂದಿರುವವರು ಪಾಲಿಸಿಯ ಅವಧಿ ಪೂರ್ಣಗೊಳ್ಳುವ ಮುನ್ನವೇ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಹಣಕಾಸಿನ ನೆರವು ಸಿಗಲಿದೆ ಎಂದು ಎಲ್‌ಐಸಿ ತಿಳಿಸಿದೆ.

'ಸಾವಿನ ನಂತರ ಸಿಗಬೇಕಿರುವ ಮೊತ್ತ ಎಷ್ಟು ಎಂಬುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇದರಲ್ಲಿದೆ. ಇದನ್ನು ಎಲ್‌ಐಸಿ ವೆಬ್‌ಸೈಟ್ ಮೂಲಕ ಅಥವಾ ಎಲ್‌ಐಸಿ ಏಜೆಂಟರ ಮೂಲಕ ಖರೀದಿಸಬಹುದು' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಕೇಂದ್ರ ಸಚಿವ ಸಂಪುಟ ಅನುಮೋದನೆ

ಮೂಲಸೌಕರ್ಯಕ್ಕೆ ಹಣ ಒದಗಿಸಲು 'ಡಿಎಫ್‌ಐ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂಲಸೌಕರ್ಯ ಯೋಜನೆಗಳಿಗೆ ಹಣ ಹೂಡಿಕೆ ಮಾಡಲು 'ಅಭಿವೃದ್ಧಿ ಹಣಕಾಸು ಸಂಸ್ಥೆ'ಯನ್ನು (ಡಿಎಫ್‌ಐ) ಆರಂಭಿಸಲು ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಕೇಂದ್ರ ಸರ್ಕಾರದ ವತಿಯಿಂದ ಡಿಎಫ್‌ಐಗೆ ₹ 20 ಸಾವಿರ ಕೋಟಿ ಬಂಡವಾಳ ಒದಗಿಸುವುದಾಗಿ ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಡಿಎಫ್‌ಐ ಆರಂಭಕ್ಕೆ ಅಗತ್ಯವಿರುವ ಮಸೂದೆಯ ಮಂಡನೆಯನ್ನು ನಿರ್ಮಲಾ ಅವರು ಸಂಸತ್ತಿನ ಹಾಲಿ ಅಧಿವೇಶನದಲ್ಲೇ ಮಾಡಲಿದ್ದಾರೆ.

ಆರಂಭಿಕ ಹಂತದಲ್ಲಿ ಈ ಸಂಸ್ಥೆಯು

ನಿರ್ಮಲಾ

ಕೇಂದ್ರದ ಮಾಲೀಕತ್ವದಲ್ಲಿ ಇರಲಿದೆ. ನಂತರ ಕೇಂದ್ರದ ಷೇರುಪಾಲನ್ನು ಹಂತ ಹಂತವಾಗಿ ಶೇಕಡ 26ಕ್ಕೆ ಇಳಿಸಲಾಗುತ್ತದೆ ಎಂದು ನಿರ್ಮಲಾ ತಿಳಿಸಿದರು. ಡಿಎಫ್‌ಐ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಪಿಂಚಣಿ ಹಾಗೂ ವಿಮಾ ಕಂಪನಿಗಳಿಂದ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶ ಹೊಂದಿದೆ. ತಾನು ಸಂಗ್ರಹಿಸುವ ಹಣವನ್ನು ಸಂಸ್ಥೆಯು ಮೂಲಸೌಕರ್ಯ ಯೋಜನೆಗಳಲ್ಲಿ ಹೂಡಿಕೆ ಮಾಡಲಿದೆ.

'ಡಿಎಫ್‌ಐ ಸ್ಥಾಪನೆಯ ನಂತರ ಅದರ ಆಡಳಿತ ಮಂಡಳಿಯು, ಡಿಎಫ್‌ಐ ಜೊತೆ ಇಂಡಿಯಾ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್‌ನಂತಹ ಇತರ ಕಂಪನಿಗಳನ್ನು ವಿಲೀನ ಮಾಡಿಕೊಳ್ಳುವ ಅಥವಾ ಬೇರೆ ಕಂಪನಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ ತೀರ್ಮಾನಿಸಲಿದೆ' ಎಂದು ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ದೇಬಶೀಷ್ ಪಾಂಡಾ ತಿಳಿಸಿದರು.

ವೃತ್ತಿಪರ ಆಡಳಿತ ಮಂಡಳಿಯನ್ನು ಈ ಸಂಸ್ಥೆ ಹೊಂದಲಿದೆ. ಹೊಸ ಶತಮಾನದ ಅಗತ್ಯಗಳಿಗೆ ಸ್ಪಂದಿಸುವ ಸಾಮರ್ಥ್ಯ ಹೊಂದಿರುವವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗುತ್ತದೆ, ಅವರಿಗೆ ಹೆಚ್ಚಿನ ಆಡಳಿತಾವಧಿ ಇರುತ್ತದೆ ಎಂದರು.

ಡಿಎಫ್‌ಐ ಆಡಳಿತ ಮಂಡಳಿಯಲ್ಲಿ ಶೇಕಡ 50ರಷ್ಟು ಜನ ಅಧಿಕಾರಿ ವರ್ಗಕ್ಕೆ ಸೇರಿಲ್ಲದವರು ಇರುತ್ತಾರೆ ಎಂದು ನಿರ್ಮಲಾ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎರಡನೇ ದಿನವೂ ಬ್ಯಾಂಕಿಂಗ್ ಸೇವೆಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬ್ಯಾಂಕ್ ಸಂಘಟನೆಗಳ ಮುಷ್ಕರದಿಂದಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಶಾಖೆಗಳಲ್ಲಿ ಹಣ ವರ್ಗಾವಣೆ, ಸ್ವೀಕೃತಿ, ಸಾಲ ಮಂಜೂರಾತಿ, ಚೆಕ್ ಕ್ಲಿಯರೆನ್ಸ್‌ನಂತಹ ಸೇವೆಗಳಿಗೆ ಮಂಗಳವಾರವೂ ಅಡ್ಡಿ ಉಂಟಾಯಿತು.

'ಎರಡು ದಿನ ಮಾತ್ರವೇ ಮುಷ್ಕರ ನಡೆಸಲು ನಿರ್ಧರಿಸಲಾಗಿತ್ತು. ಇನ್ನೂ ಕೆಲವು ದಿನ ನೋಡಿ ನಮ್ಮ ಮುಂದಿನ ನಡೆ ಬಗ್ಗೆ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆ (ಯುಎಫ್‌ಬಿಯು) ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘಟನೆಯ (ಐಎನ್‌ಬಿಇಎಫ್) ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಕೆ. ನರಸಿಂಹಮೂರ್ತಿ ತಿಳಿಸಿದರು.

ಖಾಸಗೀಕರಣ ಪ್ರಸ್ತಾವ ಕೈಬಿಡದೇ ಇದ್ದರೆ ಮತ್ತೆ ಮುಷ್ಕರ ನಡೆಸುವುದಾಗಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ಎಚ್ಚರಿಸಿದ್ದಾರೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಹೆಸರು ಬೇಡ, ದೇವದುರ್ಗ, ರಾಯಚೂರು ಜಿಲ್ಲೆ

● **ಪ್ರಶ್ನೆ: ನನ್ನ ವಯಸ್ಸು 33 ವರ್ಷ. ವೃತ್ತಿ ಒಕ್ಕಲುತನ. ನನ್ನ ಮನೆಯ ವಾರ್ಷಿಕ ಆದಾಯ ₹ 2 ಲಕ್ಷ. ನನಗೆ ಷೇರುಪೇಟೆಯಲ್ಲಿ ನಡೆಯುವ ವ್ಯವಹಾರದ ಬಗ್ಗೆ ಮಾಹಿತಿ ಬೇಕಾಗಿದೆ. 1) ನಾನು ಷೇರುಪೇಟೆಯಲ್ಲಿ ಭಾಗೀದಾರನಾಗಲು ಏನು ಮಾಡಬೇಕು? 2) ಐಪಿಒಗಳಲ್ಲಿ ಹೂಡಿಕೆ ಹೇಗೆ? 3) ಷೇರು ಖರೀದಿ, ಮಾರಾಟ ಹೇಗೆ? 4) ಪ್ರಾರಂಭಿಕ ಹಂತ ಯಾವುದು? 5) ಡಿಮ್ಯಾಟ್ ಖಾತೆ ಎಲ್ಲಿ ತೆರೆಯಬಹುದು? 6) ಸಣ್ಣ ಪ್ರಮಾಣದ ಹೂಡಿಕೆ ಹೇಗೆ?**

ಉತ್ತರ: ನೀವು ಒಮ್ಮೆ ರಾಯಚೂರಿಗೆ ಹೋಗಿ ಅಲ್ಲಿಯ ಷೇರು ಬ್ರೋಕರ್ ಅಲ್ಲಿ ಒಂದು ಖಾತೆ ಪ್ರಾರಂಭಿಸಿರಿ. ಷೇರ್‌ಖಾನ್, ಆನಂದರಾಠಿ ಹೀಗೆ ಷೇರು ಬ್ರೋಕರ್ಸ್ ಇರುತ್ತಾರೆ. ಅವರೇ ಡಿಮ್ಯಾಟ್ ಖಾತೆ ಪ್ರಾರಂಭಿಸಲು ಸಹಾಯ ಮಾಡುತ್ತಾರೆ. ಇದು ಉಳಿತಾಯ ಖಾತೆಯ ತರಹದ್ದು. ಇಲ್ಲಿ ಷೇರು ಜಮಾ, ಖರ್ಚು ಆಗುತ್ತಿರುತ್ತದೆ. ಈ ಬ್ರೋಕರ್ಸ್ ಮುಖಾಂತರ ನೀವು ನಿಮ್ಮ ಊರಿನಲ್ಲೇ ಇದ್ದು ಆನ್‌ಲೈನ್ ಮೂಲಕ ಷೇರು ಖರೀದಿ ಹಾಗೂ ಮಾರಾಟ ಮಾಡಬಹುದು. ಕೆಲವು ಕಂಪನಿಗಳು ಐಪಿಒ ಪ್ರಾರಂಭಿಸಿದಾಗ ಫಾರ್ಮ್ ಪಡೆದು ತುಂಬಿ ಬ್ಯಾಂಕ್ ಮುಖಾಂತರ ಅರ್ಜಿ ಸಲ್ಲಿಸಬಹುದು. ನಿಮಗೆ ಕಂಪನಿಯು ಷೇರು ಅಲಾಟ್ ಮಾಡಿದಲ್ಲಿ ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಷೇರು ಜಮಾ ಆಗುತ್ತದೆ. ನೀವು ಈ ಷೇರುಗಳನ್ನು ಉತ್ತಮ ದರ ಬಂದಾಗ ಮಾರಾಟ ಮಾಡಿ ಲಾಭ ಪಡೆಯಬಹುದು. ಷೇರು ಮಾರುಕಟ್ಟೆಯಲ್ಲಿ ಕನಿಷ್ಠ ಒಂದು ಷೇರು ಕೂಡಾ ಕೊಳ್ಳಬಹುದು ಹಾಗೂ ಮಾರಾಟ ಮಾಡಬಹುದು. 'ಪ್ರಜಾವಾಣಿ' ಪತ್ರಿಕೆಯಲ್ಲಿ ಷೇರು ಮಾರುಕಟ್ಟೆಯ ವಿಚಾರದಲ್ಲಿ ಪರಿಣತರು ಪ್ರತಿ ಸೋಮವಾರ ವಿವರಣೆ ನೀಡುವುದನ್ನು ಗಮನಿಸಿ, ಸಾಧ್ಯವಾದರೆ ದೂರವಾಣಿ ಮುಖಾಂತರ ಸಂಪರ್ಕಿಸಿ.

ಮಹಾಲಕ್ಷ್ಮಿ, ಚಿತ್ರದುರ್ಗ

● **ಪ್ರಶ್ನೆ: ನನಗೆ ಇಬ್ಬರು ಹೆಣ್ಣುಮಕ್ಕಳು. ವಯಸ್ಸು 24 ಹಾಗೂ 26 ವರ್ಷ. ಸಾಧ್ಯವಾದರೆ ಇಬ್ಬರ ಮದುವೆಯನ್ನೂ ಇದೇ ವರ್ಷ ಮಾಡಬೇಕೆಂದಿದ್ದೇವೆ. ಇಬ್ಬರೂ ಐ.ಟಿ. ಕಂಪನಿಯಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ. ಅವರ ಆದಾಯ ತೆರಿಗೆ ಉಳಿಸಲು ನಮಗೆ ಮಾರ್ಗದರ್ಶನ ಮಾಡಿ. ಬಂಗಾರ, ಬೆಳ್ಳಿ ಬೆಲೆ ಕಡಿಮೆ ಆಗಬಹುದೇ?**

ಉತ್ತರ: ನಿಮ್ಮ ಇಬ್ಬರೂ ಹೆಣ್ಣು ಮಕ್ಕಳು ಆದಾಯ ತೆರಿಗೆಯಿಂದ ಕೆಲವೊಂದು ವಿನಾಯಿತಿ ಪಡೆಯಲು ಸೆಕ್ಷನ್ 80ಸಿ ಆಧಾರದ ಮೇಲೆ ಪಿಪಿಎಫ್, ಜೀವವಿಮೆ, ತೆರಿಗೆ ಉಳಿಸುವ 5 ವರ್ಷಗಳ ಬ್ಯಾಂಕ್ ಠೇವಣಿ ಮಾಡಲಿ. ಇವೆಲ್ಲಾ ಸೇರಿ ಗರಿಷ್ಠ ₹ 1.50 ಲಕ್ಷವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ಇದರ ಹೊರತಾಗಿ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಕನಿಷ್ಠ ₹ 50 ಸಾವಿರ, ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ (ಎನ್‌ಪಿಎಸ್) ಹೂಡಿ ಇಲ್ಲಿ ಕೂಡಾ ವಿನಾಯಿತಿ ಪಡೆಯಬಹುದು. ಮಕ್ಕಳ ಮದುವೆಯ ಸಲುವಾಗಿ ಬಂಗಾರ, ಬೆಳ್ಳಿ ಈಗಲೇ ಕೊಳ್ಳಬಹುದು. ಇವೆರಡರ ಬೆಲೆ ಈಗಾಗಲೇ ತುಂಬಾ ಮೇಲಕ್ಕೆ ಹೋಗಿದ್ದು, ಇನ್ನೂ ಏರಿಕೆ ಆಗುವ ಸಂದರ್ಭ ಇರಲಾರದು. ಅಲ್ಪ ಸ್ವಲ್ಪ ಕಡಿಮೆ ಆದರೂ ಆಗಬಹುದು. ಬೆಳ್ಳಿ, ಬಂಗಾರದ ಬೆಲೆ ಮುಖ್ಯವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಅವಲಂಬಿಸಿರುತ್ತದೆ. ಬಂಗಾರದ ಒಡವೆ, ಬೆಳ್ಳಿ ತಟ್ಟೆ ಮುಂತಾದವನ್ನು ಕೊಳ್ಳಲು ಮದುವೆ ತನಕ ಕಾಯುವುದರಲ್ಲಿ ತಪ್ಪೇನಿಲ್ಲ. ಬೆಲೆ ವಿಚಾರದಲ್ಲಿ ಬಹಳ ವ್ಯತ್ಯಾಸ ಇರುವುದಿಲ್ಲ. ಇಬ್ಬರೂ ಹೆಣ್ಣುಮಕ್ಕಳಿಗೆ ಉತ್ತಮ ಭವಿಷ್ಯ ಹಾರೈಸುತ್ತೇನೆ.

ಚಂದ್ರಯ್ಯ, ಊರುಬೇಡ

● **ಪ್ರಶ್ನೆ: ನನ್ನ ವಯಸ್ಸು 42 ವರ್ಷ. 4 ವರ್ಷದ ಒಬ್ಬ ಮಗ, ಎರಡು ವರ್ಷದ ಒಬ್ಬಳು ಮಗಳು ಇದ್ದಾರೆ ನನಗೆ. ಇಬ್ಬರ ಹೆಸರಿನಲ್ಲಿ ತಿಂಗಳಿಗೆ ₹ 2 ಸಾವಿರ ಆರ್.ಡಿ ಮಾಡಿದ್ದೇನೆ. ನಾನು ಬಟ್ಟೆ ವ್ಯಾಪಾರಿ. ನನಗೆ ಬ್ಯಾಂಕ್ ವ್ಯವಹಾರದಲ್ಲಿ ಮಾಹಿತಿ ಇಲ್ಲ. ಅಂಗಡಿ ವಿಚಾರದಲ್ಲಿ ಖಾತೆ ತೆರೆಯುವುದು ಹಾಗೂ ಸಾಲ ಪಡೆಯುವುದು ಇವೆಲ್ಲಾ ವಿವರವಾಗಿ ತಿಳಿಸಿ.**

ಉತ್ತರ: ನೀವು ನಿಮ್ಮ ಅಂಗಡಿ ಸಮೀಪದ ಬ್ಯಾಂಕ್‌ನಲ್ಲಿ ಒಂದು ಚಾಲ್ತಿ ಖಾತೆಯನ್ನು (current account) ಅಂಗಡಿ ಹೆಸರಿನಲ್ಲಿ ತೆರೆಯಿರಿ. ಈ ಖಾತೆಯಲ್ಲಿ ಪ್ರತೀ ದಿನದ ವಹಿವಾಟು ಜಮಾ-ಖರ್ಚು ಮಾಡುತ್ತಾ ಬನ್ನಿ. ಹೀಗೆ ಆರು ತಿಂಗಳಾದ ನಂತರ ಅದೇ ಬ್ಯಾಂಕ್‌ನಲ್ಲಿ ಒಂದು ಓವರ್ ಡ್ರಾಫ್ಟ್ ಖಾತೆಗೆ ಅರ್ಜಿ ಹಾಕಿರಿ. ನಿಮ್ಮ ವ್ಯವಹಾರ, ನೀವು ಅಂಗಡಿಯಲ್ಲಿ ಹೊಂದಿರುವ ಬಟ್ಟೆಯ ಮೊತ್ತ ಲೆಕ್ಕ ಹಾಕಿ, ಬ್ಯಾಂಕ್‌ನವರು ಒಂದು ಮಿತಿ ನಿರ್ಧರಿಸಿ ಓ.ಡಿ. ಸವಲತ್ತು ಕೊಡುತ್ತಾರೆ. ಓಡಿ ಖಾತೆಯ ಮಿತಿಯೊಳಗೆ ನೀವು ಜಮಾ ಖರ್ಚು ಮಾಡುತ್ತಾ ಬನ್ನಿ. ಈ ಓ.ಡಿ. ಖಾತೆಗೆ ನಿಮ್ಮ ಅಂಗಡಿಯಲ್ಲಿರುವ (Stock of goods) ವಸ್ತುಗಳ Hypothecation ಮಾಡಿಕೊಳ್ಳುತ್ತಾರೆ. ನೀವು ಬ್ಯಾಂಕ್‌ಗೆ ಪ್ರತೀ ತಿಂಗಳೂ ಸ್ಟಾಕ್ ಸ್ಟೇಟ್‌ಮೆಂಟ್ ಕೊಡಬೇಕಾಗುತ್ತದೆ. ಇದೇ ವೇಳೆ, ಈ ಖಾತೆಯ ಸಲುವಾಗಿ ಒಂದು ಆರ್.ಡಿ. 5 ವರ್ಷಗಳ ಅವಧಿಗೆ ಮಾಡಿ. 5 ವರ್ಷಗಳ ನಂತರ ನೀವು ನಿಮ್ಮ ಆರ್.ಡಿ. ಮೊತ್ತದ ಮೇಲೆ ಓ.ಡಿ. ಪಡೆಯಬಹುದು. ಹಾಗೂ ಆರ್ಥಿಕ ಸ್ವಾತಂತ್ರ್ಯದೊಂದಿಗೆ ವ್ಯವಹಾರ ಮಾಡಬಹುದು. ನಿಮ್ಮ ಮಕ್ಕಳ ಸಲುವಾಗಿ ನೀವು ಈಗ ಮಾಡಿರುವ ಆರ್.ಡಿ. ದೀರ್ಘಾವಧಿಯದ್ದಾಗಿರಲಿ. ಮುಂದೆ ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ವಾಗುತ್ತದೆ. ಸಾಧ್ಯವಾದರೆ ಹೆಣ್ಣು ಮಗುವಿನ ಸಲುವಾಗಿ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಹೂಡಿಕೆ ಮಾಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-56001.
ಇ-ಮೇಲ್: businessdesk@prajavani.co.in

ದೇಶಿ ಇಂಧನ ಬೇಡಿಕೆ ಚೇತರಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ ಹೊರತುಪಡಿಸಿ, ದೇಶದ ಇಂಧನ ಬೇಡಿಕೆಯು ಕೋವಿಡ್‌–19ಕ್ಕೂ ಮೊದಲು ಇದ್ದ ಮಟ್ಟಕ್ಕೆ ಮರಳಿದೆ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿ) ಅಧ್ಯಕ್ಷ ಶ್ರೀಕಾಂತ್ ಮಾಧವ ವೈದ್ಯ ತಿಳಿಸಿದ್ದಾರೆ.

ಕೋವಿಡ್ ನಿಯಂತ್ರಿಸಲು ಲಾಕ್‌ಡೌನ್ ಹೇರಿದ್ದರಿಂದ ಇಂಧನ ಮಾರಾಟ ಕಳೆದ ವರ್ಷದ ಏಪ್ರಿಲ್‌ನಲ್ಲಿ ಶೇ 45.8ರಷ್ಟು ಕುಸಿತ ಕಂಡಿತ್ತು. ಲಾಕ್‌ಡೌನ್ ನಿರ್ಬಂಧ ತೆರವು ಮಾಡಲಾರಂಭಿಸಿದ ಬಳಿಕ ಮಾರಾಟದಲ್ಲಿ ಸುಧಾರಣೆ ಕಾಣಲು ಶುರುವಾಯಿತು ಎಂದು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-950
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	340
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಚಿತ್ರದುರ್ಗ	
ಅಪಿ	42829-43269
ಬೆಟ್ಟೆ	33519-33989
ಕೆಂಪುಗೋಟು	29510-29999
ರಾಶಿ	42339-42779
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	21989-29608
ಚಾಲಿ	34639-36209
ಕೋಕ	20099-29808
ಕೆಂಪುಗೋಟು	21899-28899
ರಾಶಿ	39569-42009
ತಟ್ಟಬೆಟ್ಟೆ	31199-38909
ಯಲ್ಲಾಪುರ	
ಬಿಳಿಗೋಟು	22899-30611
ಚಾಲಿ	31099-39601
ಕೋಕ	19212-29499
ಕೆಂಪುಗೋಟು	26899-30899
ರಾಶಿ	39899-45369
ತಟ್ಟಬೆಟ್ಟೆ	31342-39729
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	41622-43599
ಗೊರಬಲು	15569-31169
ರಾಶಿ	37689-42389
ಸರಕು	48069-74009
ಸಾಗರ	
ಬಿಳಿಗೋಟು	19280-24899
ಚಾಲಿ	31909-32499
ಕೋಕ	28654-29199
ಕೆಂಪುಗೋಟು	31599-32199
ರಾಶಿ	40749-42499
ಸಿಪ್ಪೆಗೋಟು	17191-17484
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	265-389
ದ್ವಿತಳಿ (ಬಿ.ವಿ)	280-435

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	10000	9900	132.10 ಸೆಂಟ್ಸ್
ಎಸಿ	---	3900	3900	
ಆರ್‌ಪಿ	---	5200	5175	
ಆರ್‌ಸಿ	---	3050	2940	1388 ಡಾಲರ್ಸ್

ನೌಕರರ ಹಿತಾಸಕ್ತಿ ರಕ್ಷಣೆ: ನಿರ್ಮಲಾ ಭರವಸೆ

ನವದೆಹಲಿ (ಪಿಟಿಐ): ಖಾಸಗಿಯವರ ತೆಕ್ಕೆಗೆ ಹೋಗುವ ಸಾಧ್ಯತೆ ಇರುವ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಎಲ್ಲ ನೌಕರರ ಹಿತಾಸಕ್ತಿಗಳನ್ನು ರಕ್ಷಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭರವಸೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕಿಂಗ್ ಉದ್ಯಮದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಅಸ್ತಿತ್ವ ಮುಂದುವರಿಯಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದರು. 'ಎಲ್ಲ ಬ್ಯಾಂಕ್‌ಗಳನ್ನೂ ಖಾಸಗಿಯವರಿಗೆ ಮಾರಾಟ ಮಾಡುವುದಿಲ್ಲ. ಹಣಕಾಸು ವಲಯದಲ್ಲಿ ಕೂಡ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇರಲಿವೆ' ಎಂದು ಸ್ಪಷ್ಟಪಡಿಸಿದರು.

ಫೆಬ್ರುವರಿ 1ರಂದು ಮಂಡಿಸಿದ ಬಜೆಟ್‌ನಲ್ಲಿ ನಿರ್ಮಲಾ ಅವರು, ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಪ್ರಸ್ತಾವ ಮಾಡಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳ ವಿಲೀನದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಉಲ್ಲೇಖಿಸಿದ ನಿರ್ಮಲಾ ಅವರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಷ್ಟು (ಎಸ್‌ಬಿಐ) ಬೃಹತ್ ಆಗಿರುವ ಇನ್ನೂ ಹಲವು ಬ್ಯಾಂಕ್‌ಗಳ ಅಗತ್ಯ ದೇಶಕ್ಕಿದೆ ಎಂದರು.

ಹಣಕಾಸು ಸಂಸ್ಥೆಗಳಲ್ಲಿ ನಗದು ಲಭ್ಯತೆ ಜಾಸ್ತಿ ಆಗಬೇಕು, ಹೆಚ್ಚು ಜನ ಅವುಗಳಲ್ಲಿ ಹಣ ಹೂಡಿಕೆ ಮಾಡಬೇಕು ಎಂಬುದು ಸರ್ಕಾರದ ಬಯಕೆ ಎಂದರು. 'ಬ್ಯಾಂಕ್ ಇರಲಿ ಅಥವಾ ಇನ್ಯಾವುದೇ ಕಂಪನಿಯ ಖಾಸಗೀಕರಣ ಇರಲಿ, ಅಲ್ಲಿ ಕೆಲಸ ಮಾಡುತ್ತಿರುವವರ ಹಿತಾಸಕ್ತಿಯನ್ನು ರಕ್ಷಿಸಲಾಗುತ್ತದೆ. ಅವರ ವೇತನ, ವೇತನ ಶ್ರೇಣಿ, ಪಿಂಚಣಿ ಇವೆಲ್ಲವುಗಳ ಬಗ್ಗೆ ಕಾಳಜಿ ವಹಿಸಲಾಗುತ್ತದೆ' ಎಂಬ ಭರವಸೆ ನೀಡಿದರು.

'ಕೇಂದ್ರೋದ್ಯಮಗಳ ಪುನಶ್ಚೇತನ'

ನವದೆಹಲಿ (ಪಿಟಿಐ): 'ಸಾರ್ವಜನಿಕ ವಲಯದ ಸಂಸ್ಥೆಗಳ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರವು ಯಾವಾಗಲೂ ಪ್ರಯತ್ನ ನಡೆಸುತ್ತದೆ' ಎಂದು ಬೃಹತ್ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ಯಮಗಳ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು ತಿಳಿಸಿದ್ದಾರೆ.

ಸರ್ಕಾರವು ಭಾರತೀಯ ಜೀವ ವಿಮಾ ನಿಗಮವನ್ನು (ಎಲ್‌ಐಸಿ) ಖಾಸಗೀಕರಣ ಮಾಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

16-3-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1560)
ಒಂದು ವಾರದ ಡೆಲಿವರಿ	1585 (1555)
ಸೋಯಾ ಕಚ್ಚಾ	1250 (1260)
ಪಾಮ್ ವಾರದ ಡೆಲಿವರಿ	1228 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1770 (1780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,650 (44,675)
ಬೆಳ್ಳಿ ಕೆ.ಜಿ 66,700 (67,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಿರಿವಂತ ಕುಟುಂಬಗಳು: ಕರ್ನಾಟಕಕ್ಕೆ 4ನೇ ಸ್ಥಾನ

ಮುಂಬೈ (ಪಿಟಿಐ): ದೇಶದಲ್ಲಿನ ಸಿರಿವಂತ ಕುಟುಂಬಗಳ ಪಟ್ಟಿಯಲ್ಲಿ ಮಹಾರಾಷ್ಟ್ರ ರಾಜ್ಯವು ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ನಾಲ್ಕನೇ ಸ್ಥಾನ ಪಡೆದುಕೊಂಡಿದೆ.

ಹುರುನ್ ಇಂಡಿಯಾದ ವರದಿಯ ಪ್ರಕಾರ, 2020ರಲ್ಲಿ ದೇಶದಲ್ಲಿರುವ ಒಟ್ಟಾರೆ 4.12 ಲಕ್ಷ ಸಿರಿವಂತ ಕುಟುಂಬಗಳಿದ್ದು, ಅದರಲ್ಲಿ ಮಹಾರಾಷ್ಟ್ರ, ಉತ್ತರ ಪ್ರದೇಶ, ತಮಿಳುನಾಡು, ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳ ಪಾಲು ಶೇ 46ರಷ್ಟಿದೆ.

ಕುಟುಂಬವೊಂದರ ವಾರ್ಷಿಕ ವರಮಾನವು ₹ 7.2 ಕೋಟಿಗಿಂತಲೂ ಅಧಿಕ ಇದ್ದರೆ ಅಂತಹ ಕುಟುಂಬವನ್ನು ಸಿರಿವಂತ ಕುಟುಂಬ ಎಂದು ಪರಿಗಣಿಸಲಾಗುತ್ತದೆ.

ಸಿರಿವಂತ ಕುಟುಂಬಗಳು ಎಷ್ಟು?

ರಾಜ್ಯ	ಕುಟುಂಬಗಳ ಸಂಖ್ಯೆ
ಮಹಾರಾಷ್ಟ್ರ	56 ಸಾವಿರ
ಉತ್ತರ ಪ್ರದೇಶ	36 ಸಾವಿರ
ತಮಿಳುನಾಡು	35 ಸಾವಿರ
ಕರ್ನಾಟಕ	33 ಸಾವಿರ
ಗುಜರಾತ್	29 ಸಾವಿರ

ಸವಿನೆನಪು

ಶ್ರೀಮತಿ ಶಾರದ
ನಿಧನ: 17-03-2005
ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದರೂ, ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರು, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಸದಾ ಸ್ಮರಿಸುವ
ದುಃಖತಪ್ತ: ಮಗ–ಬಿ.ಎಸ್.ಕೃಷ್ಣ ಮತ್ತು ಕುಟುಂಬದವರು ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್ ಮತ್ತು ದುರ್ಗಾ ಟಿಂಬರ್ ಟ್ರೇಡರ್ಸ್

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales

ಬೆಂಗಳೂರಿನಲ್ಲಿರುವ JAI Govind Traders ಹಪ್ಪಳದ ಕಂಪನಿಗೆ 2 Wheeler licence ಹೊಂದಿರುವವರು ಮಾರ್ಕೆಟಿಂಗ್ ನಿರ್ವಾಹಕರಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ: 7397111498, 7397776513

Accounts & Finance

WANTED ACCOUNTS asst with Talley and computer knowledge residing around Mysore Road. Should have good communication. Call : 97413 00694 atozgroupblr@gmail.com

Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ! ನೀವು ಬೈಕ್ ಹೊಂದಿದ್ದೀರಾ ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಕೆಲಸ ಹುಡುಕುತ್ತಿದ್ದೀರಾ ಬೇಕಾದ ದಾಖಲೆಗಳು ಬೈಕ್.ಆರ್ ಸಿ. ಡಿಎಲ್.ಹಾಗೂ ಆಂಡ್ರಾಯ್ಡ್ ಮೊಬೈಲ್ ಹೊಂದಿರಬೇಕು. ಕೂಡಲೇ ಕರೆ ಮಾಡಿ 080-47096073

Factory

ಸಹಾಯಕರು(ಹೆಲ್ಪರ್ಸ್) ಬೇಕಾಗಿದ್ದಾರೆ. ಶೀಟ್ ಮೆಟಲ್ ಲಿಫ್ಟಿಂಗ್ ಮತ್ತು ಫ್ಯಾಬ್ರಿಕೇಶನ್ ಕೆಲಸಕ್ಕಾಗಿ. ವಾರದ ದಿನಗಳಂದು ಖುದ್ದಾಗಿ ಸಂಪರ್ಕಿಸಿ: ಪ್ಲಾನ್ ಆಫೀಸ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್. ನಂ: 5, 1ನೇ 'ಎ' ಕ್ರಾಸ್, ಬಿನ್ನಿಪ್ಲಾನಗರ, ಬನ್ನೇರುಘಟ್ಟರಸ್ತೆ ಕ್ರಾಸ್, ಬೆಂಗಳೂರು560029. ದೂ: 9341221125, 08026684821

General

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9886275111

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ಐಟಿಐ ಎಂಪ್ಲಾಯಿಸ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್
Regd. No. JRB/Cell-II/RGN/56/RCS/3426/75-76 Ph: No. 28503914
ನಾರ್ತ್ ಅವೆನ್ಯೂ, ದೂರವಾಣಿನಗರ, ಬೆಂಗಳೂರು–560 016
ಉ.ಸಂ./Ref No: ಸಿಎಸ್/ನೇಮಕಾತಿ/2021
ಮೇಲ್ಕಂಡ ಸಹಕಾರ ಸಂಘದಲ್ಲಿ ಈ ಕೆಳಗಿನ ಹುದ್ದೆಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.
1) ಮೊದಲನೆ ದರ್ಜೆಯ ಗುಮಾಸ್ತರು – 1 ಹುದ್ದೆ
2) ಎರಡನೆ ದರ್ಜೆಯ ಗುಮಾಸ್ತರು – 1 ಹುದ್ದೆ
3) ಕಛೇರಿಯ ಪರಿಚಾರಕ – 1 ಹುದ್ದೆ
ಹೆಚ್ಚಿನ ಮಾಹಿತಿಯನ್ನು www.conquerhr.com ವೆಬ್ ಸೈಟ್‌ನಲ್ಲಿ ಪಡೆಯಬಹುದು
ಸ್ಥಳ : ಬೆಂಗಳೂರು–16
ದಿನಾಂಕ 15–3–2021
ಸಹಿ/–
(ಎಸ್. ಹೆಚ್. ಆನಂದೇಗೌಡ)
ಅಧ್ಯಕ್ಷರು

VIDEOCON, ಟಯೋಟಾ, TVS, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,600-56,000/- ವಸತಿಯೂಟವಿದೆ. 9611715755

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

Wanted

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳಲು ವಯಸ್ಸಾದವರನ್ನು, ವೃದ್ಧರನ್ನು ನೋಡಿಕೊಳ್ಳಲು ಹೋಂ ನರ್ಸಿಂಗ್ ಕೆಲಸ ಮಾಡಲು ಯುವಕರು-ಯುವತಿಯರು ಬೇಕಾಗಿದ್ದಾರೆ.ಉಚಿತ ಊಟ, ವಸತಿಯೊಂದಿಗೆ 12,000 - 17,000/- ಫೋನ್: 9663189777, 8792666115

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ . ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಕೆಲಸ ಬೆಂಗಳೂರಿನಲ್ಲಿ. ಎಸ್.ಎಸ್.ಎಲ್.ಸಿ ಆದವರು ಊಟ ವಸತಿ ಸೌಲಭ್ಯವಿದೆ. 9513668615, 8073250084

Teachers/ Professors

ಸುವರ್ಣಮುಖಿ ಸಂಸ್ಕೃತಿ ಧಾಮ (ರಿ).ವಡೇರಹಳ್ಳಿ,ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ-562112. ಸುವರ್ಣಮುಖಿ ಹಿರಿಯ ಮತ್ತು ಪ್ರೌಢಶಾಲೆ (ವಸತಿ) ರೇಣುಕಾನಾಗರಾಜು ಸಂಸ್ಕೃತ ಪಾಠಶಾಲೆ.ಕೆಳಕಂಡ ಹುದ್ದೆಗಳಿಗೆ ಬೇಕಾಗಿದ್ದಾರೆ. ಹೆಡ್ ಮಾಸ್ಟರ್- ಡಿಗ್ರಿ, ಬಿ.ಎಡ್. (ಅನುಭವಿ). ಇಂಗ್ಲೀಷ್ ಶಿಕ್ಷಕರು- ಬಿ.ಎ.ಬಿಎಡ್. (ಇಂಗ್ಲೀಷ್) ದೈಹಿಕ ಶಿಕ್ಷಣ ಶಿಕ್ಷಕರು - ಬಿ.ಎ.ಬಿಪಿಎಡ್. -ಸಂಸ್ಕೃತ ಶಿಕ್ಷಕರು-ವಿದ್ವತ್, ವಾರ್ಡನ್/ಪಿಇ ಟೀಚರ್. ವಸತಿ ಸೌಲಭ್ಯವಿರುತ್ತದೆ.ಸಂಪರ್ಕಿಸಿ: 9886128699, 9972970502 E-Mail: suvarnamukhisamskritidhama@gmail.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದ ಮಾಡಬಹುದಾದ ಜಾಬ್, ಫುಲ್ ಮತ್ತು ಪಾರ್ಟ್ ಟೈಮ್ ಕೆಲಸಗಾರರು ಬೇಕಾಗಿದ್ದಾರೆ ಯಾವುದೇ ವಿದ್ಯಾರ್ಹತೆ ಪರವಾಗಿಲ್ಲ. Contact: 7829504376/ 7829504372

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Bangalore North

SALE: BENGALURU North, Dasanapura Hobli, Nagaruru Village 25,000 Sqft Site for Sale. Contact 9449010956

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Business Offers

General

ಸಕ್ಸಸ್, ಸಕ್ಸಸ್, ಸಕ್ಸಸ್, ಹೊಲ, ತೋಟ ಸೈಟು ಮುಂತಾದ ಕಡೆ ಶಾಸ್ತ್ರೀಯವಾಗಿ ಬೋರ್ ಪಾಯಿಂಟು ತೋರಿಸಿ ಕೊಡಲಾಗುವುದು. 9108629145 .

WE REQUIRE running Bar & Restaurant or Petrol Bunk for lease or sale. Contact: Narasimhaswamy 9845917169

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

ನಿಮ್ಮ ಯಾವುದೇ ರೀತಿಯ ವಶೀಕರಣ ಹಾಗೂ ನಿಮ್ಮ ಸಮಸ್ಯೆಗಳಾದ ಸಂತಾನ, ಸತಿ-ಪತಿ ಕಲಹ, ಸಾಲಬಾಧೆ, ಪ್ರೇಮವಿಚಾರ, ಶತ್ರುನಾಶ, ಇನ್ನೂ ಅನೇಕ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ವಿಶಿಷ್ಟ ಶಾಸ್ತ್ರೋಕ್ತ ಪರಿಹಾರ ಶತಸಿದ್ಧ.9980714116

ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರವಾಸ

Travel

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

31.03.2021 ರೈಲು/ ಬಸ್ಸಿನಲ್ಲಿ 15 ದಿನಗಳ ದೆಹಲಿ, ಜೈಪುರ್,ಕಾಶಿ, ಬುದ್ಧಗಯಾ, ಅಲಹಾಬಾದ್ (ಕೆಲವೇ ಸೀಟುಗಳಿವೆ). ರೂಪಶ್ರೀ ಟ್ರಾವೆಲ್ಸ್ ಪದ್ಮನಾಭನಗರ, ಬೆಂಗಳೂರು-61. 9448508708, 8317446683

ವಾಹನ

Four Wheelers Selling

Others

INTRA V10 ವಾಹನ ಈಗ 3.99% ಬಡ್ಡಿದರ ಲಾಭದ ಭರವಸೆಯೊಂದಿಗೆ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

3.99%* ಬಡ್ಡಿದರ / 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹25,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

EDUCATION
To Place your Classified Ads Contact: 9845114560

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಮೂರನೇ ಟಿ20: ಇಂಗ್ಲೆಂಡ್ ಜಯಭೇರಿ, ಭಾರತದ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯ

ವಿರಾಟ್ ಆಟಕ್ಕೆ ಬಟ್ಲರ್ ತಿರುಗೇಟು

ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್ ತಂಡದ ಆರಂಭಿಕ ಆಟಗಾರ ಜೋಸ್ ಬಟ್ಲರ್ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಭಾರತ ತಂಡದ ಜಯದ ಆಸೆ ಕಮರಿತು. ನಾಯಕ ವಿರಾಟ್ ಕೊಹ್ಲಿಯ ಏಕಾಂಗಿ ಹೋರಾಟವೂ ವ್ಯರ್ಥವಾಯಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಪಂದ್ಯವನ್ನೂ ಜಯಿಸಿತು. 8 ವಿಕೆಟ್‌ಗಳಿಂದ ಜಯಿಸಿದ ಏಯಾನ್ ಮಾರ್ಗನ್ ಬಳಗವು ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುನ್ನಡೆ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡಕ್ಕೆ ಮತ್ತೊಮ್ಮೆ ಅಗ್ರಕ್ರಮಾಂಕದ ಮೂವರು ಬ್ಯಾಟ್ಸ್‌ಮನ್‌ಗಳ ವೈಫಲ್ಯ ಕಾಡಿತು. ಆದರೆ, ನಾಯಕ ವಿರಾಟ್ ಕೊಹ್ಲಿ (ಔಟಾಗದೆ 77; 46 ಎಸೆತ) ಮತ್ತು ಹಾರ್ದಿಕ್ ಪಾಂಡ್ಯ (17 ರನ್) ಇನಿಂಗ್ಸ್‌ನ ಕೊನೆಯ 33 ಎಸೆತಗಳಲ್ಲಿ ಸೇರಿಸಿದ 60 ರನ್‌ಗಳ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 156 ರನ್ ಗಳಿಸಿತು. ಆದರೆ, ಬಟ್ಲರ್ (ಅಜೇಯ 83; 52ಎಸೆತ) ಆಟವೇ ಮೇಲುಗೈ ಸಾಧಿಸಿತು. 18.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 158 ರನ್ ಗಳಿಸಿದ ಪ್ರವಾಸಿ ಬಳಗ ಸಂಭ್ರಮಿಸಿತು. ಜಾನಿ ಬೆಸ್ಟೊ (ಅಜೇಯ 40) ಕೂಡ ತಮ್ಮ ಕಾಣಿಕೆ ನೀಡಿದರು. ಆತಿಥೇಯರ ಸೋಲಿಗೆ ಫೀಲ್ಡಿಂಗ್ ಲೋಪಗಳ ಪಾಲು ಕೂಡ ಇತ್ತು. ಇದರಿಂದಾಗಿ ಬೌಲರ್‌ಗಳ ಪ್ರಯತ್ನಗಳೂ ವ್ಯರ್ಥವಾದವು.

ವಿರಾಟ್ ಆಟದ ರಂಗು: ಇಂಗ್ಲೆಂಡ್ ತಂಡದ ವೇಗಿ ಮಾರ್ಕ್ ವುಡ್ (31ಕ್ಕೆ3) ಮತ್ತು ಕ್ರಿಸ್ ಜೋರ್ಡಾನ್ (35ಕ್ಕೆ2) ಭಾರತ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಅದರಿಂದಾಗಿ ಇನಿಂಗ್ಸ್‌ನ ಮೊದಲ ಆರುಓವರ್‌ಗಳಲ್ಲಿ ಆತಿಥೇಯ ಬಳಗವು 24 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು.

ಆದರೆ ಕೊನೆಯ ಆರು ಓವರ್‌ಗಳಲ್ಲಿ ವಿರಾಟ್ ಆಟ ರಂಗೇರಿತು. ಹೋದ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ಕೊಹ್ಲಿ ಇಲ್ಲಿಯೂ ಅಬ್ಬರಿಸಿದರು. ಕ್ಯಾಪ್ಟನ್ ಕೊಹ್ಲಿಯ ಪಾದರಸದಷ್ಟೇ ಚುರುಕಾದ ಪಾದಚಲನೆ, ಸುಂದರ ಹೊಡೆತಗಳ ಆಟದಿಂದ ರನ್‌ಗಳು ಹರಿದುಬಂದವು. ವುಡ್ ಹಾಕಿದ 18ನೇ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದ ಕೊಹ್ಲಿ ಆಟಕ್ಕೆ ಇಂಗ್ಲೆಂಡ್ ನಾಯಕ ಮಾರ್ಗನ್ ಕೂಡ ತಲೆದೂಗಿದರು. ಹಾರ್ದಿಕ್, ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಜೋಫ್ರಾ ಆರ್ಚರ್‌ಗೆ ಕ್ಯಾಚ್ ಆದರು.

ಜೋಸ್ ಬಟ್ಲರ್–ಪಿಟಿಐ ಚಿತ್ರ

ವಿರಾಟ್ ಕೊಹ್ಲಿ

ರಾಹುಲ್ ಮತ್ತೆ ಸೊನ್ನೆ: ಸರಣಿಯ ಮೊದಲ ಎರಡೂ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ಕೆ.ಎಲ್. ರಾಹುಲ್ ಮತ್ತೊಂದು ಅವಕಾಶ ಪಡೆದರು. ಆದರೆ ಸತತ ಎರಡನೇ ಪಂದ್ಯದಲ್ಲಿಯೂ ಸೊನ್ನೆ ಸುತ್ತಿದರು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ವುಡ್ ಎಸೆತವನ್ನು ಆಡಲಾಗದೇ ಕ್ಲೀನ್‌ಬೌಲ್ಡ್ ಆದರು.

ಆ ಎರಡೂ ಪಂದ್ಯಗಳಲ್ಲಿ ವಿಶ್ರಾಂತಿ ಪಡೆದಿದ್ದ ರೋಹಿತ್ ಶರ್ಮಾ ಮತ್ತು ರಾಹುಲ್ ಇನಿಂಗ್ಸ್ ಆರಂಭಿಸಿದರು. ಅದರಿಂದಾಗಿ ವಿರಾಟ್ ತಮ್ಮ ಮೂರನೇ ಕ್ರಮಾಂಕವನ್ನು ಯುವಪ್ರತಿಭೆ ಇಶಾನ್ ಕಿಶನ್‌ಗೆ ಬಿಟ್ಟುಕೊಟ್ಟರು. ಎರಡನೇ ಓವರ್‌ನಲ್ಲಿ ಜೋಫ್ರಾ ತಮ್ಮದೇ ಬೌಲಿಂಗ್‌ನಲ್ಲಿ ರೋಹಿತ್ ಕೊಟ್ಟಿದ್ದ ಸುಲಭ ಕ್ಯಾಚ್ ಕೈಬಿಟ್ಟಿದ್ದರು. ನಂತರ ಮಾರ್ಕ್ ವುಡ್ ಬೌಲಿಂಗ್‌ನಲ್ಲಿ ಜೋಫ್ರಾ ಪಡೆದ ಕ್ಯಾಚ್‌ಗೇ ರೋಹಿತ್ ನಿರ್ಗಮಿಸಬೇಕಾಯಿತು. ಇಶಾನ್ ಕಿಶನ್ ಕೂಡ ಆರನೇ ಓವರ್‌ನಲ್ಲಿ ಕ್ರಿಸ್ ಜೋರ್ಡಾನ್ ಎಸೆತದಲ್ಲಿ ಔಟಾದರು.

ಈ ಹಂತದಲ್ಲಿ ವಿರಾಟ್ ಜೊತೆಗೆ ಸೇರಿಕೊಂಡ ರಿಷಭ್ ಪಂತ್ (25; 20ಎಸೆತ) ಭರವಸೆ ಮೂಡಿಸಿದರು. ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 40 ರನ್ ಸೇರಿಸಿದರು. ರನ್ ಗಳಿಕೆಯ ಗತಿ ಹೆಚ್ಚುತ್ತಿದ್ದ ಸಂದರ್ಭದಲ್ಲಿ ರಿಷಭ್ ರನ್‌ಔಟ್ ಆದರು.ಮೊದಲ ಪಂದ್ಯದಲ್ಲಿ ಮಿಂಚಿದ್ದ ಶ್ರೇಯಸ್ ಅಯ್ಯರ್ (8) ಇಲ್ಲಿ ವಿಫಲರಾದರು. ತಂಡದ ಮೊತ್ತ ನೂರು ಕೂಡ ದಾಟಲಿಲ್ಲ.

ಸ್ಕೋರ್‌ಕಾರ್ಡ್

ಭಾರತ 6ಕ್ಕೆ 156 (20 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಸಿ ಜೋಫ್ರಾ ಆರ್ಚರ್ ಬಿ ಮಾರ್ಕ್ ವುಡ್	15
ಕೆ.ಎಲ್.ರಾಹುಲ್ ಬಿ ಮಾರ್ಕ್ ವುಡ್	0
ಇಶಾನ್ ಕಿಶನ್ ಸಿ ಜೋಸ್ ಬಟ್ಲರ್ ಬಿ ಕ್ರಿಸ್ ಜೋರ್ಡಾನ್	4
ವಿರಾಟ್ ಕೊಹ್ಲಿ ಔಟಾಗದೆ	77
ರಿಷಭ್ ಪಂತ್ ರನೌಟ್ (ಜೋಸ್ ಬಟ್ಲರ್/ಸ್ಯಾಮ್ ಕರನ್)	25
ಶ್ರೇಯಸ್ ಅಯ್ಯರ್ ಸಿ ಡೇವಿಡ್ ಮಲಾನ್ ಬಿ ಮಾರ್ಕ್ ವುಡ್	09
ಹಾರ್ದಿಕ್ ಪಾಂಡ್ಯ ಸಿ ಜೋಫ್ರಾ ಆರ್ಚರ್ ಬಿ ಕ್ರಿಸ್ ಜೋರ್ಡಾನ್	17
ಇತರೆ (ಬೈ 1, ಲೆಗ್ ಬೈ 5, ವೈಡ್ 3)	9

ವಿಕೆಟ್ ಪತನ: 1–7 (ಕೆ.ಎಲ್.ರಾಹುಲ್, 2.3), 2–20 (ರೋಹಿತ್ ಶರ್ಮಾ, 4.4), 3–24 (ಇಶಾನ್ ಕಿಶನ್, 5.2), 4–64 (ರಿಷಭ್ ಪಂತ್, 11.1), 5–86 (ಶ್ರೇಯಸ್ ಅಯ್ಯರ್, 14.3), 6–156 (ಹಾರ್ದಿಕ್ ಪಾಂಡ್ಯ, 19.6)

ಬೌಲಿಂಗ್: ಆದಿಲ್ ರಶೀದ್ 4–0–26–0, ಜೋಫ್ರಾ ಆರ್ಚರ್ 4–0–32–0, ಮಾರ್ಕ್ ವುಡ್ 4–1–31–3, ಕ್ರಿಸ್ ಜೋರ್ಡಾನ್ 4–1–35–2, ಬೆನ್ ಸ್ಟೋಕ್ಸ್ 2–0–12–0, ಸ್ಯಾಮ್ ಕರನ್ 2–0–14–0

ಇಂಗ್ಲೆಂಡ್ 2ಕ್ಕೆ 158 (18.2 ಓವರ್‌ಗಳಲ್ಲಿ)

ಜೇಸನ್ ರಾಯ್ ಸಿ ರೋಹಿತ್ ಶರ್ಮಾ ಬಿ ಯಜುವೇಂದ್ರ ಚಾಹಲ್	9
ಜೋಸ್ ಬಟ್ಲರ್ ಔಟಾಗದೆ	83
ಡೇವಿಡ್ ಮಲಾನ್ ಸ್ಟಂಪ್ಡ್ ರಿಷಭ್ ಪಂತ್ ಬಿ ವಾಷಿಂಗ್ಟನ್ ಸುಂದರ್	18
ಜಾನಿ ಬೆಸ್ಟೊ ಔಟಾಗದೆ	40
ಇತರೆ (ಬೈ 4, ಲೆಗ್‌ಬೈ 2, ವೈಡ್ 2)	8

ವಿಕೆಟ್ ಪತನ: 1–23 (ಜೇಸನ್ ರಾಯ್, 3.3), 2–81 (ಡೇವಿಡ್ ಮಲಾನ್, 9.4)

ಬೌಲಿಂಗ್: ಭುವನೇಶ್ವರ ಕುಮಾರ್ 4–0–27–0, ಶಾರ್ದೂಲ್ ಠಾಕೂರ್ 3.2–0–36–0, ಯಜುವೇಂದ್ರ ಚಾಹಲ್ 4–0–41–1, ಹಾರ್ದಿಕ್ ಪಾಂಡ್ಯ 3–0–22–0, ವಾಷಿಂಗ್ಟನ್ ಸುಂದರ್ 4–0–26–1

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಗೆಲುವು. ಐದು ಪಂದ್ಯಗಳ ಸರಣಿಯಲ್ಲಿ 2–1 ಮುನ್ನಡೆ

ಪಂದ್ಯ ಶ್ರೇಷ್ಠ: ಜೋಸ್ ಬಟ್ಲರ್

ಮುಂದಿನ ಪಂದ್ಯ: ಮಾರ್ಚ್ 18, ಅಹಮದಾಬಾದ್‌ನಲ್ಲಿ

ಟಿಟಿ: ಯಶಸ್ವಿನಿ ಕೈ ತಪ್ಪಿದ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರೋಚಿತ ಆಟವಾಡಿದ ಕರ್ನಾಟಕದ ಯಶಸ್ವಿನಿ ಘೋರ್ಪಡೆ ರಾಷ್ಟ್ರೀಯ ಯೂತ್ ಹಾಗೂ ಜೂನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ. ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಯೂತ್ ಬಾಲಕಿಯರ ವಿಭಾಗದಲ್ಲಿ ಅವರು ಎರಡನೇ ಸ್ಥಾನ ಗಳಿಸಿದರು.

ಮಂಗಳವಾರ ನಡೆದ ಫೈನಲ್ ಹಣಾಹಣಿಯಲ್ಲಿ ಯಶಸ್ವಿನಿ 11–8, 7–11, 8–11, 12–10, 11–5, 8–11, 3–11ರಿಂದ ಹಾಲಿ ಚಾಂಪಿಯನ್ ಮಹಾರಾಷ್ಟ್ರದ ದಿವ್ಯಾ ಚಿತಾಲೆ ಎದುರು ಎಡವಿದರು. ಆರಂಭದ ಮುನ್ನಡೆಯನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾಗಿ ಪಂದ್ಯ ಕೈಚೆಲ್ಲಿದರು. ಆದರೆ ಅವರು ತೋರಿದ ಹೋರಾಟ ಗಮನಸೆಳೆಯಿತು.

ಯಶಸ್ವಿನಿ ಘೋರ್ಪಡೆ– ಪ್ರಜಾವಾಣಿ ಸಂಗ್ರಹ ಚಿತ್ರ

ನಾಲ್ಕರ ಘಟ್ಟದ ಪಂದ್ಯದಲ್ಲಿ ಯಶಸ್ವಿನಿ ಭರ್ಜರಿ ಜಯ ಸಾಧಿಸಿದ್ದರು. ಮಹಾರಾಷ್ಟ್ರದ ಅನನ್ಯಾ ಬಾಸಕ್ ಅವರನ್ನು 7-11,11-3,11-6,11-8,11-4ರಿಂದ ಸೋಲಿಸಿದ್ದರು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು ಗೆಲುವು ಒಲಿಸಿಕೊಂಡಿದ್ದರು.

ಜೂನಿಯರ್ ಬಾಲಕಿಯರ ವಿಭಾಗದ ಪ್ರಶಸ್ತಿಯು ಮಹಾರಾಷ್ಟ್ರದ ಸ್ವಸ್ತಿಕಾ ಘೋಷ್ ಅವರ ಪಾಲಾಯಿತು. ಫೈನಲ್‌ನಲ್ಲಿ ಅವರು 7-11, 11-13, 11-7, 11-4, 11-6, 11-9ರಿಂದ ಹರಿಯಾಣದ ಸುಹಾನ ಸೈನಿ ಎದುರು ಗೆದ್ದರು.

1203-2021

ಅಥ್ಲೆಟಿಕ್ಸ್: ಪೂವಮ್ಮಗೆ ಚಿನ್ನ; ದ್ಯುತಿ ಹಿಂದಿಕ್ಕಿದ ಧನಲಕ್ಷ್ಮಿ

ಪಟಿಯಾಲ (ಪಿಟಿಐ): ಕರ್ನಾಟಕದ ಎಂ.ಆರ್. ಪೂವಮ್ಮ ಅವರು ಫೆಡರೇಷನ್ ಕಪ್ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 400 ಮೀ. ಓಟದಲ್ಲಿ ಮಂಗಳವಾರ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ರಾಷ್ಟ್ರೀಯ ದಾಖಲೆ ಹೊಂದಿರುವ ದ್ಯುತಿ ಚಾಂದ್ ಅವರನ್ನು ಹಿಂದಿಕ್ಕಿದ ತಮಿಳುನಾಡಿನ ಧನಲಕ್ಷ್ಮಿ ಅವರು ಮಹಿಳೆಯರ 100 ಮೀ. ಓಟದಲ್ಲಿ ಮೊದಲಿಗರಾದರು.

ಇಲ್ಲಿಯ ಎನ್‌ಐಎಸ್ ಆವರಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀ. ಓಟದಲ್ಲಿ ಪೂವಮ್ಮ 53.57 ಸೆಕೆಂಡುಗಳಲ್ಲಿ ಗುರಿ ತಲುಪಿದರು. ತಮಿಳುನಾಡಿನ ಶುಭಾ ವೆಂಕಟೇಶನ್ (54.48) ಹಾಗೂ ಹರಿಯಾಣದ ಕಿರಣ್ ಪಹಾಲ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡರು.

100 ಮೀ. ವಿಭಾಗದಲ್ಲಿ ಧನಲಕ್ಷ್ಮಿ 11.39 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಒಡಿಶಾದ ದ್ಯುತಿ (11.58) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ತಮಿಳುನಾಡಿನವರೇ ಆದ ಅರ್ಚನಾ ಸುಶೀಂದ್ರನ್ (11.76) ಕಂಚು ಒಲಿಸಿಕೊಂಡರು.

ಎಂ.ಆರ್.ಪೂವಮ್ಮ

ಹಿಮಾ ದಾಸ್ ಅನರ್ಹ: ಪ್ರಮುಖ ಅಥ್ಲೀಟ್ ಹಿಮಾ ದಾಸ್ ಅವರು 100 ಮೀ. ಓಟದಲ್ಲಿ ಸ್ಪರ್ಧಿಸಿದ್ದರು. ಆದರೆ ಓಟ ಆರಂಭಿಸುವ ಸಂದರ್ಭದಲ್ಲಿ ಮಾಡಿದ ಪ್ರಮಾದದಿಂದಾಗಿ ಅನರ್ಹಗೊಂಡರು.

ಪುರುಷರ 100 ಮೀ. ವಿಭಾಗದ ಚಿನ್ನದ ಪದಕವು ಪಂಜಾಬ್‌ನ ಗುರಿಂದರ್‌ವೀರ್ ಸಿಂಗ್ (10.32 ಸೆಕೆಂಡು) ಅವರ ಪಾಲಾಯಿತು. ತಮಿಳುನಾಡಿನ ಇಳಕ್ಕಿಯದಾಸನ್ ಕಣ್ಣಾದ (10.43) ಹಾಗೂ ಮಹಾರಾಷ್ಟ್ರದ ಸತೀಶ್ ಕೃಷ್ಣಕುಮಾರ್ (10.56) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಲಾಂಗ್‌ಜಂಪ್: ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ ಮುರಳಿ

ಪಟಿಯಾಲ (ಪಿಟಿಐ): ಭಾರತದ ಲಾಂಗ್ ಜಂಪ್ ಪಟು ಮುರಳಿ ಶ್ರೀಶಂಕರ್ ಅವರು ಮಂಗಳವಾರ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದಾರೆ. ಇಲ್ಲಿ ನಡೆಯುತ್ತಿರುವ ಫೆಡರೇಷನ್ ಕಪ್ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಅವರು 8.26 ಮೀಟರ್ ಸಾಧನೆ ಮಾಡಿ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ಈ ವಿಭಾಗದಲ್ಲಿ ಒಲಿಂಪಿಕ್ಸ್‌ಗೆ ಅರ್ಹತಾ ಮಾನದಂಡ 8.22 ಮೀ. ಆಗಿತ್ತು. ಕೇರಳದ 21 ವರ್ಷದ ಮುರಳಿ ಅವರು ಚಾಂಪಿಯನ್‌ಷಿಪ್‌ನಲ್ಲಿ ಐದನೇ ಪ್ರಯತ್ನದಲ್ಲಿ ಈ ಗುರಿ (8.26) ತಲುಪಿದರು. 2018ರಲ್ಲಿ ಅವರು 8.20 ಮೀ. ಮೂಲಕ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರು.

ಈ ವಿಭಾಗದಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ಎಸ್.ಲೋಕೇಶ್ (7.60 ಮೀ.) ಕಂಚಿನ ಪದಕ ತಮ್ಮದಾಗಿಸಿಕೊಂಡರು. ಕೇರಳದ ಮತ್ತೋರ್ವ ಅಥ್ಲೀಟ್ ಮುಹಮ್ಮದ್ ಅನೀಸ್ ಯಾಹ್ಯಾ (8 ಮೀ.) ಎರಡನೇ ಸ್ಥಾನ ಗಳಿಸಿದರು.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಭಾರತದ ಸಿಂಧು ಮೇಲೆ ನಿರೀಕ್ಷೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ವಿಶ್ವ ಚಾಂಪಿಯನ್, ಭಾರತದ ಪಿ.ವಿ. ಸಿಂಧು ಬುಧವಾರ ಇಲ್ಲಿ ಆರಂಭವಾಗಲಿರುವ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಈಚೆಗೆ ಸ್ವಿಸ್ ಓಪನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಸಿಂಧು ಸ್ಪೇನ್‌ನ ಕ್ಯಾರೊಲಿನಾ ಮರಿನ್ ಎದುರು ಸೋತಿದ್ದರು. ಆದರೆ ಗಾಯಗೊಂಡಿರುವ ಮರಿನ್ ಅವರು ಆಲ್ ಇಂಗ್ಲೆಂಡ್‌ನಲ್ಲಿ ಕಣಕ್ಕಿಳಿಯುತ್ತಿಲ್ಲ.

ಅಲ್ಲದೆ ಚೀನಾ, ಕೊರಿಯಾ ಮತ್ತು ತೈಪೆಯ ಬ್ಯಾಡ್ಮಿಂಟನ್ ಪಟುಗಳು ಇಲ್ಲಿ ಆಡುತ್ತಿಲ್ಲ. ಇದೇ ವರ್ಷ ನಡೆಯಲಿರುವ ಟೋಕಿಯೊ ಒಲಿಂಪಿಕ್ಸ್‌ನ ಕ್ವಾಲಿಫೈಯರ್ ಸುತ್ತಿನ ಭಾಗವಾಗಿ ಈ ಸೂಪರ್ 1000 ಟೂರ್ನಿಯನ್ನು ಪರಿಗಣಿಸಲಾಗಿಲ್ಲ. ಹೀಗಾಗಿ ಬಹುತೇಕ ಅಗ್ರಕ್ರಮಾಂಕದ ಆಟಗಾರರು ಹಿಂದೆ ಸರಿದಿದ್ದಾರೆ. ಆದ್ದರಿಂದ ಸಿಂಧು ನೇತೃತ್ವದ 19 ಆಟಗಾರರ ಭಾರತ ತಂಡಕ್ಕೆ ಇಲ್ಲಿ ಪ್ರಶಸ್ತಿ ಗೆಲ್ಲುವ ಅವಕಾಶ ಹೆಚ್ಚಿದೆ.

ಈ ಪ್ರತಿಷ್ಠಿತ ಟೂರ್ನಿಯಲ್ಲಿ ಕನ್ನಡಿಗ ಪ್ರಕಾಶ್ ಪಡುಕೋಣೆ (1980) ಮತ್ತು ಹೈದರಾಬಾದಿನ ಪಿ. ಗೋಪಿಚಂದ್ (2001) ಚಾಂಪಿಯನ್ ಆಗಿದ್ದರು. ಮಹಿಳಾ ವಿಭಾಗದಲ್ಲಿ 2015ರಲ್ಲಿ ಸೈನಾ ನೆಹ್ವಾಲ್ ರನ್ನರ್ ಅಪ್ ಆಗಿದ್ದು ಶ್ರೇಷ್ಠ ಸಾಧನೆಯಾಗಿದೆ. 2018ರಲ್ಲಿ ಸಿಂಧು ಸೆಮಿಫೈನಲ್ ಪ್ರವೇಶಿಸಿದ್ದರು.

ಪಿ.ವಿ.ಸಿಂಧು

ಈ ಬಾರಿ ಐದನೇ ಶ್ರೇಯಾಂಕದ ಸಿಂಧು ತಮ್ಮ ಮೊದಲ ಪಂದ್ಯದಲ್ಲಿ ಮಲೇಷ್ಯಾದ ಸೋನಿಯಾ ಚೀಹ್ ಅವರನ್ನು ಎದುರಿಸಲಿದ್ದಾರೆ.

ಲಂಡನ್ ಒಲಿಂಪಿಕ್ಸ್ ಪದಕವಿಜೇತೆ ಸೈನಾ ಅವರು ಇಲ್ಲಿ ತಮ್ಮ ಮೊದಲ ಹಣಾಹಣಿಯಲ್ಲಿ ಏಳನೇ ಶ್ರೇಯಾಂಕದ ಮಿಯಾ ಬ್ಲಿಚ್‌ಫೀಲ್ಡ್ ಅವರ ವಿರುದ್ಧ ಕಣಕ್ಕಿಳಿಯುವರು.

ಸಿಂಗಲ್ಸ್‌ನಲ್ಲಿ ಶ್ರೀಕಾಂತ್ ಅವರಿಗೆ ಮೊದಲ ಸುತ್ತಿನಲ್ಲಿ ಇಂಡೊನೇಷ್ಯಾದ ಟಾಮಿ ಸುಗಾರ್ಥೊ ಸವಾಲೊಡ್ಡುವರು. ಬಿ. ಸಾಯಿ ಪ್ರಣೀತ್, ಫ್ರಾನ್ಸ್‌ನ ಟೋಮೊ ಜೂನಿಯರ್ ಪೊಪೊವ್ ವಿರುದ್ಧ ಆಡುವರು. ಪರುಪಳ್ಳಿ ಕಶ್ಯಪ್, ಜಪಾನಿನ ಕೆಂಟೊ ಮೊಮೊಟಾ ವಿರುದ್ಧ ಆಡುವರು.

ಸಮೀರ್ ವರ್ಮಾ, ಯುವ ಆಟಗಾರ ಲಕ್ಷ್ಯ ಸೇನ್, ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ, ಮಿಶ್ರ ಡಬಲ್ಸ್‌ನಲ್ಲಿ ಸಾತ್ವಿಕ್ ಮತ್ತು ಅಶ್ವಿನಿ ಪೊನ್ನಪ್ಪ ಕಣಕ್ಕಿಳಿಯುವರು.

ನಾಲ್ವರಿಗೆ ಕೋವಿಡ್–19

ನವದೆಹಲಿ(ಪಿಟಿಐ): ಟೂರ್ನಿಯಲ್ಲಿ ಆಡಲು ತೆರಳಿರುವ ಭಾರತದ ಮೂವರು ಆಟಗಾರರು ಹಾಗೂ ಒಬ್ಬ ನೆರವು ಸಿಬ್ಬಂದಿಗೆ ಕೋವಿಡ್–19 ಇರುವುದು ದೃಢಪಟ್ಟಿದೆ. ಕೆಲವರು ಪರೀಕ್ಷೆ ಮಾಡಿಸಿಕೊಂಡಿದ್ದು, ವರದಿಯ ನಿರೀಕ್ಷೆಯಲ್ಲಿದ್ದರು.

‘ನಮ್ಮ ಮೂವರು ಆಟಗಾರರು ಹಾಗೂ ಒಬ್ಬ ನೆರವು ಸಿಬ್ಬಂದಿಯಲ್ಲಿ ಕೊರೊನಾ ಸೋಂಕು ಪತ್ತೆಯಾಗಿದೆ. ಇದು ಹೇಗಾಯಿತೆಂದು ಗೊತ್ತಾಗುತ್ತಿಲ್ಲ’ ಎಂದು ಭಾರತ ತಂಡದ ಕೋಚ್ ಮಥಾಯಿಸ್ ಬೋ ಹೇಳಿದ್ದಾಗಿ ಕ್ರೀಡಾ ಮಾಧ್ಯಮವೊಂದು ವರದಿ ಮಾಡಿದೆ. ಕೊರೊನಾ ಸೋಂಕಿತರ ಹೆಸರನ್ನು ಬಹಿರಂಗಪಡಿಸಿಲ್ಲ.

ಐಸ್ ಹಾಕಿ ಆಟಗಾರನ ದುರ್ಮರಣ

ಮಾಸ್ಕೋ (ರಾಯಿಟರ್ಸ್): ರಷ್ಯಾದ ಜೂನಿಯರ್ ಐಎಸ್ ಹಾಕಿ ತಂಡದ ಆಟಗಾರ ತೈಮುರ್ ಫೈಜುಡಿನೊವ್ ತಲೆಗೆ ಪೆಟ್ಟು ಬಿದ್ದು ಮೃತಪಟ್ಟ ಘಟನೆ ಮಂಗಳವಾರ ನಡೆದಿದೆ.

ಇಲ್ಲಿ ಆಯೋಜಿಸಲಾಗಿರುವ ರಷ್ಯಾ ಜೂನಿಯರ್ ಹಾಕಿ ಲೀಗ್ (ಎಂಎಚ್‌ಎಲ್) ನಲ್ಲಿ ಡೈನಮೊ ಸೇಂಟ್ ಪೀಟರ್ಸ್‌ಬರ್ಗ್ ತಂಡದ ಆಟಗಾರನಾಗಿದ್ದರು. ಹೋದ ಶುಕ್ರವಾರ ನಡೆದ ಪಂದ್ಯದಲ್ಲಿ ಅವರ ತಲೆಗೆ ಪಕ್ (ಐಸ್ ಹಾಕಿಯಲ್ಲಿ ಬಳಸಲಾಗುವ ಚೆಂಡಿನ ಬದಲು ಚಪ್ಪಟೆಯಾದ ರಬ್ಬರ್ ಸಲಕರಣೆ) ತಲೆಗೆ ಅಪ್ಪಳಿಸಿತ್ತು. 19 ವರ್ಷದ ತೈಮುರ್ ಕುಸಿದುಬಿದ್ದಿದ್ದರು. ಪಂದ್ಯ ನಡೆದ ಸ್ಥಳದಿಂದ 250 ಕಿ.ಮೀ ದೂರದ ಆಸ್ಪತ್ರೆಗೆ ಅವರನ್ನು ಕರೆದೊಯ್ದು ಚಿಕಿತ್ಸೆಗೆ ದಾಖಲಿಸಲಾಗಿತ್ತು.

ಆದರೆ, ಮೂರು ದಿನಗಳ ನಂತರ ಮೃತಪಟ್ಟಿದ್ದಾರೆ ಎಂದು ತಂಡದ ಮೂಲಗಳು ತಿಳಿಸಿವೆ.

ಗಾಲ್ಫ್ ಮಂಡಳಿಯಲ್ಲಿ ಕಪಿಲ್ ದೇವ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಭಾರತದ ಮಾಜಿ ಕ್ರಿಕೆಟಿಗ ಕಪಿಲ್ ದೇವ್ ಅವರು ಭಾರತ ವೃತ್ತಿಪರ ಗಾಲ್ಫ್ ಟೂರ್ (ಪಿಜಿಟಿಐ) ಮಂಡಳಿಯಲ್ಲಿ ಸದಸ್ಯರಾಗಿ ಸೋಮವಾರ ಸೇರ್ಪಡೆಯಾಗಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ 1983ರ ಏಕದಿನ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕರಾಗಿದ್ದ ಕಪಿಲ್, ದೇಶದಲ್ಲಿ ಗಾಲ್ಫ್ ಕ್ರೀಡೆಯ ಬೆಳವಣಿಗೆಗೆ ಶ್ರಮಿಸುತ್ತೇನೆ ಎಂದಿದ್ದಾರೆ.

ಟ್ರೋಫಿಯೊಂದಿಗೆ ಪ್ರಶಸ್ತಿ ವಿಜೇತ ಎಫ್‌ಸಿ ಬೆಂಗಳೂರು ಯುನೈಟೆಡ್ ಆಟಗಾರರು ಹಾಗೂ ಸಿಬ್ಬಂದಿ– ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಎಫ್‌ಸಿಬಿಯು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಬೊಕ್ಲಾಂಗ್ ನೊಂಗ್‌ಕ್ಲಾವ್(90 + 5ನೇ ನಿಮಿಷ) ಹಾಗೂ ಇನಾಯತ್ ಖಾನ್ ಗಳಿಸಿದ ಗೋಲುಗಳ ನೆರವಿನಿಂದ ಬೆಂಗಳೂರು ಎಫ್‌ಸಿ ‘ಬಿ’ (ಬಿಎಫ್‌ಸಿ ‘ಬಿ’) ತಂಡವು ಗೆದ್ದಿತು. ಇದರೊಂದಿಗೆ ಲೀಗ್‌ನಲ್ಲಿ ಎರಡನೇ ಸ್ಥಾನ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಬಿಡಿಎಫ್‌ಎ ಸೂಪರ್ ಡಿವಿಷನ್ ಪಂದ್ಯದಲ್ಲಿ ಮಂಗಳವಾರ 2–1ರಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವನ್ನು ಸೋಲಿಸಿತು.

ಕಿಕ್‌ಸ್ಟಾರ್ಟ್ ತಂಡದ ಸತೀಶ್ ಕುಮಾರ್ 82ನೇ ನಿಮಿಷದಲ್ಲಿ ಒಂದು ಗೋಲು ಹೊಡೆದರು.

ಅತಿ ಹೆಚ್ಚು ಪಾಯಿಂಟ್ಸ್ ಕಲೆಹಾಕಿದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಬಿಎಫ್‌ಸಿ ‘ಬಿ’ 12 ಪಂದ್ಯಗಳಿಂದ 30 ಪಾಯಿಂಟ್ಸ್ ಗಳಿಸಿದರೆ, ಎಫ್‌ಸಿಬಿಯು ಇಷ್ಟೇ ಪಂದ್ಯಗಳಿಂದ 31 ಪಾಯಿಂಟ್ಸ್ ಕಲೆಹಾಕಿದೆ.

ವಿಜೇತ ಎಫ್‌ಸಿಬಿಯು ತಂಡವು ₹ 1.5 ಲಕ್ಷ ಬಹುಮಾನ ಪಡೆದರೆ, ಬಿಎಫ್‌ಸಿ ‘ಬಿ’ ತಂಡವು ₹ 50 ಸಾವಿರ ತನ್ನದಾಗಿಸಿಕೊಂಡಿತು.

ಟೆನಿಸ್: ಭಾರತ ತಂಡದಲ್ಲಿ ಸಾನಿಯಾ, ಅಂಕಿತಾ ರೈನಾ



ಸಾನಿಯಾ ಮಿರ್ಜಾ– ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಸಾನಿಯಾ ಮಿರ್ಜಾ ಹಾಗೂ ಅಂಕಿತಾ ರೈನಾ ಅವರು ಬಿಲ್ಲಿ ಜೀನ್ ಕಿಂಗ್ ಕಪ್ ವಿಶ್ವ ಗುಂಪು ಟೆನಿಸ್ ಪ್ಲೇ ಆಫ್ಸ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ಲಾಟ್ವಿಯಾ ಎದುರು ಮುಂದಿನ ತಿಂಗಳು ನಡೆಯುವ ಈ ಪಂದ್ಯಕ್ಕೆ ಐದು ಮಂದಿಯ ತಂಡವನ್ನು ಅಖಿಲ ಭಾರತ ಟೆನಿಸ್ ಸಂಸ್ಥೆಯು ಮಂಗಳವಾರ ಪ್ರಕಟಿಸಿದೆ.

ಕರ್ಮನ್ ಕೌರ್ ಥಂಡಿ, ಯುವ ಪ್ರತಿಭೆ ಜೀಲ್ ದೇಸಾಯಿ ಹಾಗೂ ಋತುಜಾ ಭೋಸ್ಲೆ ತಂಡದಲ್ಲಿರುವ ಇನ್ನುಳಿದ ಆಟಗಾರ್ತಿಯರು. ಮಂಗಳವಾರ ನಡೆದ ಅಖಿಲ ಭಾರತ ಟೆನಿಸ್ ಸಂಸ್ಥೆಯ (ಎಐಟಿಎ) ಆಯ್ಕೆ ಸಮಿತಿಯ ವರ್ಚುವಲ್ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಅಂಕಿತಾ ರೈನಾ

ವಿಶಾಲ್ ಉಪ್ಪಳ ಅವರು ತಂಡದ ನಾಯಕರಾಗಿದ್ದಾರೆ. ಹೋದ ವರ್ಷ ತಂಡದಲ್ಲಿದ್ದ ರಿಯಾ ಭಾಟಿಯಾ ಅವರನ್ನು ಕಾಯ್ದಿರಿಸಿದ ಆಟಗಾರ್ತಿಯಾಗಿ ಆಯ್ಕೆ ಮಾಡಲಾಗಿದೆ. ಎರಡು ದಿನಗಳ ಪಂದ್ಯವು ಏಪ್ರಿಲ್ 16ರಿಂದ ಲಾಟ್ವಿಯಾದ ಜುರ್ಮಾಲಾದಲ್ಲಿ ನಿಗದಿಯಾಗಿದೆ.

ದುಬೈನಲ್ಲಿ 2020ರ ಮಾರ್ಚ್‌ನಲ್ಲಿ ನಡೆದ ಏಷ್ಯಾ-ಓಸೀನಿಯಾ ಗುಂಪು-1ರ ಪಂದ್ಯದಲ್ಲಿ ಎರಡನೇ ಸ್ಥಾನ ಗಳಿಸುವ ಮೂಲಕ ಭಾರತ ತಂಡ ಮೊದಲ ಬಾರಿ ವಿಶ್ವ ಗುಂಪು ಪ್ಲೇ ಆಫ್ಸ್‌ನಲ್ಲಿ ಸ್ಥಾನ ಗಳಿಸಿತ್ತು. ಆಗ ಲಾಟ್ವಿಯಾ, ಅಮೆರಿಕ ಎದುರು ಸೋತಿತ್ತು.

ಸೋನಿ ನೆಟ್‌ವರ್ಕ್–ಅಲ್ಟಿಮೇಟ್ ಕೊಕ್ಕೊ ಒಪ್ಪಂದ

ಬೆಂಗಳೂರು: ದೇಶದ ಮೊದಲ ವೃತ್ತಿಪರ ಕೊಕ್ಕೊ ಲೀಗ್–ಅಲ್ಟಿಮೇಟ್ ಕೊಕ್ಕೊ ಜೊತೆ ಸೋನಿ ಪಿಕ್ಚರ್ಸ್ ನೆಟ್‌ವರ್ಕ್ ಇಂಡಿಯಾ ಒಪ್ಪಂದ ಮಾಡಿಕೊಂಡಿದ್ದು ಟಿವಿ ಮತ್ತು ಡಿಜಿಟಲ್ ಪ್ರಸಾರದ ಹಕ್ಕಿಗೆ ಸಂಬಂಧಿಸಿದ ಒಪ್ಪಂದಕ್ಕೆ ಸಹಿ ಹಾಕಿದೆ. ಈ ವರ್ಷವೇ ಇದಕ್ಕೆ ಚಾಲನೆ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಖಿಲ ಭಾರತ ಕೊಕ್ಕೊ ಫೆಡರೇಷನ್‌ನಲ್ಲಿ ಹೆಸರು ನೊಂದಾಯಿಸಿಕೊಂಡಿರುವ ಸಂಸ್ಥೆಗಳ ಆಟಗಾರರನ್ನು ಒಳಗೊಂಡ ತಂಡಗಳು ಅಲ್ಟಿಮೇಟ್ ಕೊಕ್ಕೊದಲ್ಲಿ ಪಾಲ್ಗೊಳ್ಳಲಿದ್ದು ಕೆಲವೇ ತಿಂಗಳಲ್ಲಿ ಪಟ್ಟಿ ಸಿದ್ಧಗೊಳ್ಳಲಿದೆ.

ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ ತೋರಿದ ಪ್ರದರ್ಶನದ ಆಧಾರದಲ್ಲಿ 150 ಆಟಗಾರರನ್ನು ಆಯ್ಕೆಗೆ ಪರಿಗಣಿಸಲಾಗಿದೆ. ಟೂರ್ನಿಯ ಪಂದ್ಯಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ವಿವರಣೆಯೊಂದಿಗೆ ಪ್ರಸಾರವಾಗಲಿದೆ ಎಂದು ತಿಳಿಸಲಾಗಿದೆ.

ಕ್ರಿಕೆಟ್: ಸಮಾಧಾನಕರ ಜಯಕ್ಕಾಗಿ ಭಾರತದ ಹೋರಾಟ

ಲಖನೌ (ಪಿಟಿಐ): ಈಗಾಗಲೇ ಏಕದಿನ ಕ್ರಿಕೆಟ್ ಸರಣಿಯನ್ನು ತನ್ನ ಕೈವಶ ಮಾಡಿಕೊಂಡಿರುವ ದಕ್ಷಿಣ ಆಫ್ರಿಕಾ ತಂಡವನ್ನು ಕೊನೆಯ ಪಂದ್ಯದಲ್ಲಿ ಮಿಥಾಲಿ ರಾಜ್ ನಾಯಕತ್ವದ ಭಾರತ ತಂಡವು ಬುಧವಾರ ಎದುರಿಸಲಿದೆ.

5 ಪಂದ್ಯಗಳ ಈ ಸರಣಿಯಲ್ಲಿ ದಕ್ಷಿಣ ಆಫ್ರಿಕಾ 3–1ರಿಂದ ಮುನ್ನಡೆ ಸಾಧಿಸಿದೆ. ಇನ್ನುಳಿದಿರುವ ಒಂದು ಪಂದ್ಯದಲ್ಲಿ ಸಮಾಧಾನಕರ ಗೆಲುವು ದಕ್ಕಿಸಿಕೊಳ್ಳುವತ್ತ ಆತಿಥೇಯರು ಕಣಕ್ಕಿಳಿಯಲಿದ್ದಾರೆ.

ಕೋವಿಡ್ ಕಾಲದಲ್ಲಿ ಭಾರತ ಮಹಿಳಾ ತಂಡವು ಆಡುತ್ತಿರುವ ಮೊದಲ ಸರಣಿ ಇದಾಗಿದೆ. ಅಗ್ರಕ್ರಮಾಂಕದ ಬ್ಯಾಟರ್ ಶೇಫಾಲಿ ವರ್ಮಾ ಮತ್ತು ಬೌಲರ್ ಶಿಖಾ ಪಾಂಡೆ ಈ ಬಾರಿ ಅಲಭ್ಯರಾಗಿದ್ದಾರೆ. ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಸರಣಿಯ ನಾಲ್ಕು ಪಂದ್ಯಗಳಲ್ಲಿ ಐದು ವಿಕೆಟ್ ಗಳಿಸಿದ್ದಾರೆ. ಅನುಭವಿ ಲೆಗ್‌ಸ್ಪಿನ್ನರ್ ಪೂನಂ ಯಾದವ್ ನಿರೀಕ್ಷೆಗೆ ತಕ್ಕಂತೆ ಬೌಲಿಂಗ್ ಮಾಡಿಲ್ಲ. ಆದರೆ ಅನುಭವಿ ಮಧ್ಯಮವೇಗಿ ಜೂಲನ್ ಗೋಸ್ವಾಮಿ ಉತ್ತಮ ಬೌಲಿಂಗ್ ಮಾಡಿದ್ದಾರೆ. ಮೂರು ಪಂದ್ಯಗಳಿಂದ 8 ವಿಕೆಟ್ ಗಳಿಸಿದ್ದಾರೆ.

ಅಗ್ರಕ್ರಮಾಂಕದ ಬ್ಯಾಟರ್ ಪೂನಂ ರಾವತ್ ಸರಣಿಯಲ್ಲಿ ಎರಡು ಅರ್ಧಶತಕ ಮತ್ತು ಒಂದು ಶತಕ ಗಳಿಸಿದ್ದಾರೆ. ನಾಯಕಿ ಮಿಥಾಲಿ ಮತ್ತು ಹರ್ಮನ್‌ಪ್ರೀತ್ ಕೌರ್ ಅವರು ಲಯದಲ್ಲಿದ್ದಾರೆ. ಆದರೆ, ಸ್ಮೃತಿ ಮಂದಾನ ಒಂದು ಪಂದ್ಯದಲ್ಲಿ ಮಾತ್ರ ಚೆನ್ನಾಗಿ ಆಡಿದ್ದರು. ಆದರೆ ದಕ್ಷಿಣ ಆಫ್ರಿಕಾ ತಂಡದ ಬ್ಯಾಟ್ಸ್‌ವುಮನ್ ಲಿಝೆಲ್ ಲೀ ಒಟ್ಟು 288 ರನ್ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. ತಂಡದ ಬೌಲರ್ ಶಬ್ನಿಮ್ ಇಸ್ಮಾಯಿಲ್ ನಾಲ್ಕು ಪಂದ್ಯಗಳಿಂದ 7 ವಿಕೆಟ್ ಗಳಿಸಿದ್ದಾರೆ. ಇವರ ಸವಾಲನ್ನು ಭಾರತವು ಮೀರಿದರೆ ಜಯ ಸಾಧ್ಯವಾಗಬಹುದು.

ಪಂದ್ಯ ಆರಂಭ: ಬೆಳಿಗ್ಗೆ 9

ಸ್ಥಳ: ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಲಖನೌ.

ಶೋಭನಾ ಹ್ಯಾಟ್ರಿಕ್ ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೋಭನಾ ಸೆಲ್ವಂ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಪರಿಕ್ರಮ ಎಫ್‌ಸಿ ತಂಡವು ಗೆದ್ದಿತು.

ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಮಹಿಳಾ ಲೀಗ್ ಸೂಪರ್ ಡಿವಿಷನ್ ಪಂದ್ಯದಲ್ಲಿ ಮಂಗಳವಾರ 3–0ಯಿಂದ ರೆಬೆಲ್ಸ್ ವಿಮೆನ್ಸ್ ತಂಡವನ್ನು ಪರಾಭವಗೊಳಿಸಿತು.

ವಿಜೇತ ತಂಡ ಪರ ಶೋಭನಾ ಅವರು 12ನೇ, 62 ನೇ ಹಾಗೂ 90ನೇ ನಿಮಿಷಗಳಲ್ಲಿ ಕಾಲ್ಚಳಕತೋರಿದರು.

ಬುಧವಾರ ನಡೆಯುವ ಮೊದಲ ಪಂದ್ಯದಲ್ಲಿ ಬೆಂಗಳೂರು ಬ್ರೇವ್ಸ್–ಸ್ಲೇಜರ್ಸ್ ಬೆಳಗಾವಿ ಸೆಣಸಲಿವೆ. ಎರಡನೇ ಹಣಾಹಣಿಯಲ್ಲಿ ಬೆಂಗಳೂರು ಸಾಕರ್ ಗೆಲಾಕ್ಸಿ ಎಫ್‌ಸಿ ತಂಡಕ್ಕೆ –ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ ತಂಡದ ಸವಾಲು ಎದುರಾಗಿದೆ



PERFECT RIDERS: **LALBAGH ROAD: -** 8497816000, **JAYANAGAR-** 8497816000, **KORAMANGALA**-8497816000. **PACER YAMAHA: HEBBAL: -** 9845831972, **KALYAN NAGAR-** 9902607629, **RR.NAGAR –** 8147875188, **VIDYARANYAPURA** -9036690334. **WHITEFIELD YAMAHA - WHITEFIELD: -** 9972864913, **MAHADEVAPURA-** 9148086668. **MOTOWORLD: BOMMANAHALLI: -** 8722879911, **CHANDAPURA**-8722879900. **I YAMAHA AUTOMOTIVES: K R PURAM: -** 8088448844. **SRIJAYA MOTORS – YALAHANKA: -** 7406622216. **VINAYAK MOTORS: DOMLUR: -** 9591072222. **PANACHE ENTERPRISES – INDIRANAGAR:** -9844011961, **MARATHAHALLI-** 9844011961. **LAXMI INTERNATIONAL: BANNERGHATTA ROAD: -** 9739364819. **ANURAG MOTORS: BULL TEMPLE ROAD: -** 9845151508. **GEETHA MOTORS** – **NELAMANGALA**: - 7619628882. **BANGALORE WHEELS: RAJAJINAGAR: -** 9686112400, **VIJAYANAGAR: -** 9611920002, **MALATHAHALLI: -** 9916610017, **KENGERI: -** 080-28482333. **CHANDAN MOTORS: BANASHANKARI :-** 9606861911. **GEETHA MOTORS- TUMKUR**: - 6364885726. **SRI RV ADVENT RIDE: KOLAR: -** 9071374826. **XTREME MOTORS -CHIKABALLAPUR: -** 9353228622, **YAMAHA BIKE CORNER**: **DODDABALLAPUR-ASHITH MOTORS:** 9880343779. **VARTHUR -TOUCH YAMAHA**: 9986547353. **ANEKAL - ANEKAL YAMAHA MOTORS**: 9972909455, **DEVANAHALLI - NANDI BIKES**: 9739030606. **MAGADI** -SRI NARASHIMA MOTORS: 9482090890, **TIPTUR**: JENUKALLU YAMAHA: 7892862641, **MULBAGAL-** SRI RV ADVENT RIDE: 9071374830, **KUNIGAL-** MANJUNATHASWAMY YAMAHA: 9448554039, **CHINTAMANI -** XTREME MOTORS: 9740938474.